ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 24 ಭಾನುವಾರ 2023

₹4

ಸಂಪುಟ: 44 | ಸಂಚಿಕೆ: 247 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಬಲಗೈ ಪಂಗಡ, ಕಾಂಗ್ರೆಸ್ ಅಪಪ್ರಚಾರವೇ ಒಳ ಮೀಸಲಾತಿ ಜಾರಿ ನನೆಗುದಿಗೆ ಬೀಳಲು ಕಾರಣ

● ಮೈಸೂರಿನಲ್ಲಿ ಮಾದಿಗ ಮುನ್ನಡೆ ಆತ್ಮಗೌರವ ಸಮಾವೇಶ ● ಬೇಕಂತಲೇ ಅನಗತ್ಯವಾಗಿ ಹಲವು ಸಮುದಾಯಗಳ ಮೀಸಲಾತಿ ವ್ಯಾಪ್ತಿಗೆ ತರಲಾಗಿದೆ ● ನಿವೃತ್ತ ಐಎಎಸ್ ಅಧಿಕಾರಿ ಅನಿಲ್‌ಕುಮಾರ್ ಬೇಸರ



ಮೈಸೂರಿನ ಪಡುವಾರಹಳ್ಳಿಯ ಲೀಲಾ ಮತ್ತು ಎಚ್.ಚೆನ್ನಯ್ಯ ಕಲ್ಯಾಣ ಮಂಟಪದಲ್ಲಿ ಮಾದಿಗ ಮುನ್ನಡೆ ಆತ್ಮಗೌರವ ಜಿಲ್ಲಾ ಮಟ್ಟದ ಸಮಾವೇಶವನ್ನು ನಿವೃತ್ತ ಐಎಎಸ್ ಅಧಿಕಾರಿ ಬಿ.ಹೆಚ್.ಅನಿಲ್‌ಕುಮಾರ್ ಉದ್ಘಾಟಿಸಿದರು.

ಮೈಸೂರು,ಡಿ.23(ಎಂಟಿವೈ)–ಪರಿಶಿಷ್ಟ ಜಾತಿಯ ಬಲಗೈ ಪಂಗಡ ಹಾಗೂ ಕಾಂಗ್ರೆಸ್‌ನ ಅಪಪ್ರಚಾರದಿಂದ ಒಳ ಮೀಸಲಾತಿ ಜಾರಿಯಾಗದೆ ಮಾದಿಗ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಬಿ.ಹೆಚ್.ಅನಿಲ್‌ಕುಮಾರ್ ಆರೋಪಿಸಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಲೀಲಾ ಮತ್ತು ಹೆಚ್.ಚೆನ್ನಯ್ಯ ಕಲ್ಯಾಣ ಮಂಟಪದಲ್ಲಿ ಶನಿವಾರ ಮಾದಿಗ ಮುನ್ನಡೆ ಸಮಿತಿ ಆಯೋಜಿಸಿದ್ದ ಮಾದಿಗ ಮುನ್ನಡೆ ಆತ್ಮಗೌರವ ಜಿಲ್ಲಾ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿರುವ ಕೆಲ ಸಮುದಾಯಗಳು ಮೀಸಲಾತಿಯಿಂದ ದೂರ ಉಳಿದಿರಲು ಬಲಗೈ ಸಮುದಾಯ ಹಾಗೂ ಕಾಂಗ್ರೆಸ್‌ನ ಅಪಪ್ರಚಾರವೇ ಕಾರಣ. ಸಂವಿಧಾನದಲ್ಲಿ ಆರು ಜಾತಿಗಳು ಮಾತ್ರ ಮೀಸಲಾತಿ ಸೌಲಭ್ಯಕ್ಕೆ ಅರ್ಹತೆ ಪಡೆದಿದ್ದವು. ಬಳಿಕ ಆಡಳಿತ ನಡೆಸಿದ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಒಂದೊಂದೇ ಜಾತಿಯನ್ನು ಮೀಸಲಾತಿ ಪಟ್ಟಿಗೆ ಸೇರಿಸುತ್ತಾ ಹೋದವು. ಇಂದು ಮೀಸಲಾತಿ ಸೌಲಭ್ಯ ಪಡೆಯುವ ಪಟ್ಟಿಯಲ್ಲಿ ನೂರೊಂದು ಜಾತಿಗಳು ಸೇರಿವೆ. ಮೀಸಲು ಪಟ್ಟಿಯಲ್ಲಿ ಸ್ಪೃಶ್ಯ ಸಮುದಾಯಗಳನ್ನು ಸೇರಿಸಲಾಗಿದೆ ಎಂದರು.

ಕಾಂಗ್ರೆಸ್ ಮತ್ತು ಬಲಗೈ ಸಮುದಾಯ ರಾಜಕೀಯ ಲಾಭಕ್ಕಾಗಿ ಮಾದಿಗ ಸಮುದಾಯದ ವಿರುದ್ಧ ಭೋವಿ, ಲಂಬಾಣಿ, ಕೊರಮ, ಕೊರಚ ಜಾತಿಗಳನ್ನು ಎತ್ತಿಕಟ್ಟಲಾಗುತ್ತಿದೆ. ಇದನ್ನು ಅವರು ಬಹಿರಂಗವಾಗಿ ಮಾಡುತ್ತಿಲ್ಲ. ಇದನ್ನು ಸಮುದಾಯ ಅರಿತುಕೊಳ್ಳಬೇಕು. ಈ ಹಿಂದೆ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಅನುಷ್ಠಾನಕ್ಕೆ ತರುತ್ತೇವೆಂದು ಭರವಸೆ ನೀಡಿ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಂಪೂರ್ಣ ಐದು ವರ್ಷ ಆಡಳಿತ ನಡೆಸಿತು. ಆದರೆ, ಆ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಕೂಡ ಮಾಡಲಿಲ್ಲ. ಇಂತಹ ಸಮಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಮಾದಿಗ ಸಮುದಾಯದ ಬೆನ್ನಿಗೆ ನಿಲ್ಲುವ ಮೂಲಕ ಭರವಸೆ ತುಂಬಿದೆ. ಒಳ ಮೀಸಲಾತಿ ಅನುಷ್ಠಾನದ ಕುರಿತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಚರ್ಚೆ ನಡೆಯುತ್ತಿದೆ. ಇದಕ್ಕಾಗಿ ಸಮಯಾವಕಾಶ ಬೇಕು. ಒಳ ಮೀಸಲಾತಿ ಅನುಷ್ಠಾನಕ್ಕೆ ಶತಸಿದ್ಧವೆಂದು ಕೇಂದ್ರದ ನಾಯಕರು ಹೇಳಿದ್ದಾರೆ. ಒಳಮೀಸಲಾತಿ ವಿಚಾರದಲ್ಲಿ ಸಮುದಾಯಕ್ಕೆ ನ್ಯಾಯ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ಮಾದಿಗ ಸಮುದಾಯದ ಜನರು ಎಷ್ಟೇ ಒತ್ತಡ, ಕೆಲಸ ಕಾರ್ಯಗಳಿದ್ದರೂ ಸಮಾಜದ ಒಗ್ಗಟ್ಟು ಕಾಪಾಡಿಕೊಳ್ಳಲು ಒಂದಾಗುತ್ತಿದ್ದಾರೆ. ಇಂದಿನ ಸಭೆಯು ಸಮಾಜದ ಸಭೆಯಾಗಿದೆಯೇ ಹೊರತು ರಾಜಕೀಯ ಪಕ್ಷದ ಕಾರ್ಯಕ್ರಮ ಅಲ್ಲ. ನ್ಯಾಯಯುತ ಬೇಡಿಕೆಯನ್ನು ಸರ್ಕಾರ ಈಡೇರಿಸಲು ಮುಂದಾಗಬೇಕು. ಒಳಮೀಸಲಾತಿಯನ್ನು ಜಾರಿಗೊಳಿಸುವ ಕೆಲಸದಲ್ಲಿ ವಿಳಂಬ ಮಾಡಬಾರದು. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಮಾದಿಗ ಸಮುದಾಯಕ್ಕೆ ಸೇರಿದ ಒಬ್ಬರು ಕುಲಪತಿಗಳಾಗಿಲ್ಲ. ಪ್ರೊ.ಜಿ.ವೆಂಕಟೇಶ ಕುಮಾರ್ ಅವರಿಗೆ ಕುಲಪತಿ ಆಗುವ ಅರ್ಹತೆ ಇದ್ದರೂ ಅವಕಾಶ ದೊರೆಯಲಿಲ್ಲ. ಹುದ್ದೆ ಕೈತಪ್ಪಲು ಕಾರಣವನ್ನು ಮುಂದಿನ ದಿನಗಳಲ್ಲಿ ಬಹಿರಂಗಪಡಿಸುತ್ತೇನೆ ಎಂದರು.

ಸಭೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಸಫಾಯಿ ಕರ್ಮಚಾರಿ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಬಳ್ಳಾರಿ ಹನುಮಂತಪ್ಪ, ಪ್ರೊ.ಜಿ.ವೆಂಕಟೇಶಕುಮಾರ್, ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಮುಖಂಡ ಅರಕಲವಾಡಿ ನಾಗೇಂದ್ರ, ಸರಗೂರು ಪುರಸಭಾ ಸದಸ್ಯರಾದ ವಿಜಯಲಕ್ಷ್ಮೀ, ಮುಖಂಡರಾದ ಹಿರಿಯ ವಕೀಲ ಅರುಣ್‌ಕುಮಾರ್, ಶ್ರೀನಿವಾಸ್, ಸುಂದರ್, ನಾರಾಯಣ, ಮೂಗೂರು ಸಿದ್ದರಾಜು, ವೆಂಕಟೇಶ್, ರಂಗನಾಥ್, ಸ್ವಾಮಿ, ರವಿಕುಮಾರ್, ಬಾಲಕೃಷ್ಣ, ಮಧುರಾಜ್, ಕೃಷ್ಣಕುಮಾರ್ ಇನ್ನಿತರರು ಪಾಲ್ಗೊಂಡಿದ್ದರು.

ಸುಪ್ರೀಂಕೋರ್ಟ್‌ನಲ್ಲಿ ಜ.17ಕ್ಕೆ ವಿಚಾರಣೆ; ಒಳಮೀಸಲಾತಿ ಪರ ತೀರ್ಪು ಬರಲಿದೆ

ವಕೀಲ ಅರುಣ್ ಕುಮಾರ್ ವಿಶ್ವಾಸ



ಮೈಸೂರು,ಡಿ.23(ಪಿಎಂ)– ಒಳ ಮೀಸಲಾತಿ ಸಂಬಂಧಿತ ವಿಚಾರಣೆಯು ಇದೇ (2024) ಜನವರಿ 17ಕ್ಕೆ ಸುಪ್ರಿಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಪೀಠದ ಮುಂದೆ ಬರುತ್ತಿದ್ದು, ಈ ಹಂತದಲ್ಲಿ ಒಳಮೀಸಲಾತಿ ಪರವಾದ ತೀರ್ಪು ಹೊರ ಬೀಳಲಿದೆ ಎಂದು ವಕೀಲ ಅರುಣ್‌ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಮಾದಿಗ ಮುನ್ನಡೆ ಆತ್ಮಗೌರವ ಜಿಲ್ಲಾ ಮಟ್ಟದ ಸಮಾವೇಶದಲ್ಲಿ ಮಾತನಾಡಿದ ಅವರು, ಆಂಧ್ರ ಪ್ರದೇಶದಲ್ಲಿ ಅಲ್ಲಿನ ರಾಜ್ಯ ಸರ್ಕಾರ ಕಾನೂನು ಚೌಕಟ್ಟಿನಲ್ಲಿ ಇದೆ ಎಂದು ಒಳಮೀಸಲಾತಿ ಜಾರಿ ಮಾಡಿತ್ತು (ತೆಲಂಗಾಣ ಪ್ರತ್ಯೇಕ ರಾಜ್ಯವಾಗುವ ಪೂರ್ವದಲ್ಲಿ). ಇದರ ವಿರುದ್ಧ ಪರಿಶಿಷ್ಟ ಜಾತಿಯ ಒಂದು ಪಂಗಡವು ಅಲ್ಲಿನ ಹೈಕೋರ್ಟ್ ಮೆಟ್ಟಿಲೇರಿತು.

ಆಂಧ್ರ ಪ್ರದೇಶ ಹೈಕೋರ್ಟ್‌ನಲ್ಲಿ ಕೂಡ ಒಳಮೀಸಲಾತಿ ಜಾರಿ ಕಾನೂನಾತ್ಮಕವಾಗಿಯೇ ಇದೆ ಎಂದು ಅಲ್ಲಿನ ರಾಜ್ಯ ಸರ್ಕಾರದ ಆದೇಶವನ್ನೇ ಎತ್ತಿ ಹಿಡಿಯಲಾಯಿತು. ಇದನ್ನು ಪ್ರಶ್ನಿಸಿ ಸುಪ್ರಿಂಕೋರ್ಟ್ ಮೆಟ್ಟಿಲು ಹತ್ತಲಾಯಿತು ಎಂದು ವಿವರಿಸಿದರು.


ಈ ಸಂಬಂಧ ಅಂದು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ನೇತೃತ್ವದ ಐದು ಸದಸ್ಯರ ಪೀಠವು ಒಳಮೀಸಲಾತಿ ಜಾರಿಯು ಕಾನೂನುಬಾಹಿರ ಎಂದು ಆದೇಶ ನೀಡಿತು. ಇದಾದ ಬಳಿಕ ಇದೇ ರೀತಿಯಲ್ಲಿ ಪಂಜಾಬ್ ಮತ್ತು ಹರಿಯಾಣದಿಂದಲೂ ಒಳಮೀಸಲಾತಿ ವ್ಯಾಜ್ಯವು ಸುಪ್ರೀಂಕೋರ್ಟ್‌ಗೆ ಬಂದಿತು. ಈ ವ್ಯಾಜ್ಯವು ಅಂದಿನ (2020) ನ್ಯಾಯಮೂರ್ತಿ ಅರುಣ್‌ಮಿಶ್ರ ನೇತೃತ್ವದ ಐವರು ನ್ಯಾಯ ಮೂರ್ತಿಗಳ ಪೀಠದ ಮುಂದೆ ಬಂದಿತು. ಸದರಿ ಪೀಠವು ಒಳಮೀಸಲಾತಿ ಕಾನೂನು ಸಮ್ಮತವಾಗಿದೆ ಅಭಿಪ್ರಾಯಪಟ್ಟಿತು.

ಆದರೆ ಈ ಹಿಂದೆ ಸಂತೋಷ್ ಹೆಗ್ಡೆ ನೇತೃತ್ವದ ಐವರು ಸದಸ್ಯರ ಪೀಠವು ಕಾನೂನುಬಾಹಿರ ಎಂದು ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಏಳು ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾಯಿಸಿತು ಎಂದರು.

ಈ ಏಳು ಸದಸ್ಯರ ಪೀಠದ ಮುಂದೆ ಇದೇ (2024) ಜನವರಿ 17ಕ್ಕೆ ವಿಚಾರಣೆ ನಡೆಯಲಿದೆ. ನಾನು ಕಳೆದ 30 ವರ್ಷಗಳಿಂದ ನ್ಯಾಯಾಂಗ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ನನಗೆ ತಿಳಿದಂತೆ ಸಂತೋಷ್ ಹೆಗ್ಡೆಯವರು ಮಾಡಿದ ಆದೇಶ ಕಾನೂನು ಬಾಹಿರ. ಇದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಸಂತೋಷ್ ಹೆಗ್ಡೆಯವರು ಸಂವಿಧಾನದ 341ನೇ ವಿಧಿಯಡಿ ಒಳಮೀಸಲಾತಿ ಕಾನೂನುಬಾಹಿರ ಎಂದು ಹೇಳಿದ್ದರು. ಆದರೆ ಯಾವುದೇ ಜಾತಿಯನ್ನು ಹೊಸದಾಗಿ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಅಥವಾ ಕೈಬಿಡುವ ವಿಚಾರವು ಸಂವಿಧಾನದ 341 ವಿಧಿಗೆ ಸಂಬಂಧಿಸಿದ್ದಾಗಿದೆ. ಒಳಮೀಸಲಾತಿ ವಿಚಾರದಲ್ಲಿ ಯಾವುದೇ ಜಾತಿಯ ಸೇರ್ಪಡೆ ಅಥವಾ ಕೈಬಿಡುವ ವಿಚಾರವಿಲ್ಲ. ಹಾಗಾಗಿ ಸಂತೋಷ್ ಹೆಗ್ಡೆ ಮಾಡಿದ ಆದೇಶ ತಪ್ಪಾಗಿದೆ. ಈ ಹಿನ್ನೆಲೆಯಲ್ಲಿ ಏಳು ಸದಸ್ಯ ಪೀಠದ ಮುಂದೆ ಒಳಮೀಸಲಾತಿ ಪರವಾದ ತೀರ್ಪು ಬಂದೇ ಬರಲಿದೆ ಎಂದು ಅರುಣ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ನ್ಯಾ.ಸದಾಶಿವ ಆಯೋಗವು ಎಸ್.ಎಂ. ಕೃಷ್ಣ ಸರ್ಕಾರದ ಅವಧಿಯಲ್ಲಿ ರಚನೆಯಾಯಿತಾದರೂ ಅದಕ್ಕೆ 12 ಕೋಟಿ ರೂ. ಅನುದಾನ ಕಲ್ಪಿಸಿದ್ದು ಬಿ.ಎಸ್.ಯಡಿಯೂರಪ್ಪ ಸರ್ಕಾರ. ಆ ಬಳಿಕ ಆಯೋಗ ಕೆಲಸ ಕಾರ್ಯ ಆರಂಭಿಸಲು ಸಾಧ್ಯವಾಯಿತು. ಡಿ.ವಿ.ಸದಾನಂದಗೌಡರ ಸರ್ಕಾರದ ಅವಧಿಯಲ್ಲಿ ಆಯೋಗವು ಒಳ ಮೀಸಲಾತಿ ಪರ ವಿರುವ ವರದಿ ಸಲ್ಲಿಸಿತು. ಬಸವರಾಜ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟರ ಮೀಸಲಾತಿ ಹೆಚ್ಚಳ ಸೇರಿದಂತೆ ಒಳಮೀಸಲಾತಿ ಪರವಾದ ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ಶನಿಮಹಾಶಾಂತಿ; ಶ್ರೀಧರ ಸ್ವಾಮಿ ಜಯಂತ್ಯುತ್ಸವ



ಮೈಸೂರು,ಡಿ.23–ಮೈಸೂರಿನ ದೇವರಾಜ ಮೊಹಲ್ಲಾದ ಶ್ರೀ ಅಮೃತೇಶ್ವರ ಸ್ವಾಮಿ ದೇವಾಲಯದಲ್ಲಿ ಡಿ.26ರಂದು ಹುಣ್ಣಿಮೆ ಪ್ರಯುಕ್ತ ಶ್ರೀಧರ ಸ್ವಾಮಿಗಳ ಜಯಂತ್ಯುತ್ಸವ ಮತ್ತು ಶನಿ ಮಹಾಶಾಂತಿಯನ್ನು ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 7.30ಕ್ಕೆ ಸಂಕಲ್ಪ ಆರಂಭಿಸಿ, 10.30ಕ್ಕೆ ಹೋಮ ಪ್ರಾರಂಭಿಸಿ, 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಈ ವೇಳೆ ಕರ್ಕಾಟಕ ತುಲಾ ಮಕರ ಕುಂಭ ಮೀನ ರಾಶಿಯವರಿಗೆ ವಿಶೇಷ ಸಂಕಲ್ಪದೊಂದಿಗೆ ಮಹಾ ಸುದರ್ಶನ ಹೋಮ ಮತ್ತು ಮಹಾ ಮೃತ್ಯುಂಜಯ ಹೋಮ ಶ್ರೀ ಸತ್ಯನಾರಾಯಣ ಪೂಜೆ ಮತ್ತು ರಾಹು ಕೇತು ಪೂಜಾ ಶಾಂತಿಯನ್ನು ಆಯೋಜಿಸಿದ್ದು, ಹೆಚ್ಚಿನ ವಿವರಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರು 9342183392, 9845183392 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಕುವೆಂಪು ಜನ್ಮದಿನ: ಭಾವಗೀತೆ ಸ್ಪರ್ಧೆ

ಮೈಸೂರು, ಡಿ.23– ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ಮತ್ತು ನೇಗಿಲ ಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ 2023ನೇ ಸಾಲಿನ ರಾಷ್ಟ್ರಕವಿ ಕುವೆಂಪು ಜನ್ಮದಿನದ ಪ್ರಯುಕ್ತ ಅವರು ರಚಿಸಿರುವ ವಿವಿಧ ಕವಿತೆಗಳಿಗೆ ಸಂಬಂಧಿಸಿದಂತೆ ಭಾವಗೀತೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸ್ಪರ್ಧೆಗಳು 10 ವರ್ಷಕ್ಕಿಂತ ಕೆಳಪಟ್ಟ, 11ರಿಂದ 13 ವರ್ಷ, 14ರಿಂದ 16 ವರ್ಷ, 17ರಿಂದ 21 ವರ್ಷ, 21 ವರ್ಷ ಮೇಲ್ಪಟ್ಟ ವಯೋಮಿತಿ ವಿಭಾಗಗಳಲ್ಲಿ ನಡೆಯಲಿವೆ. ಸ್ಪರ್ಧೆಯನ್ನು ಡಿ.30ರಂದು ಬೆಳಗ್ಗೆ 10ರಿಂದ ನಡೆಸಲಾಗುತ್ತದೆ. ಪ್ರವೇಶ ಉಚಿತ. ಆಸಕ್ತರು ತಮ್ಮ ಹೆಸರನ್ನು ಡಿ.29ರೊಳಗೆ ನಿಗದಿತ ನಮೂನೆಯನ್ನು ಭರ್ತಿ ಮಾಡಿ ನೋಂದಾಯಿಸಿಕೊಳ್ಳಬೇಕು. ಸ್ಪರ್ಧಾಳುಗಳು ಕಡ್ಡಾಯವಾಗಿ ಆಧಾರ್‌ಕಾರ್ಡ್ ಅನ್ನು ಅರ್ಜಿಗೆ ಲಗತ್ತಿಸಬೇಕು. ಪ್ರತಿ ವಿಭಾಗದಲ್ಲಿ 3 ಬಹುಮಾನ ಮತ್ತು 1 ಸಮಾಧಾನಕರ ಬಹುಮಾನ ಹಾಗೂ ಪ್ರಮಾಣಪತ್ರ ಹಾಗೂ ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುವುದು. ನೋಂದಣಿ ಮತ್ತು ಮಾಹಿತಿಗಾಗಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನಂ.ಸಿಎ 122, ನೇಗಿಲ ಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯ ಎದುರು, ಮೈಸೂರು–570014, ಬೆಳಗ್ಗೆ 11ರಿಂದ 5ರವರೆಗೆ ಸಂಪರ್ಕಿಸಬಹುದು. ಮೊ. 94834530005, 9900629393, 8073067679.

ಶ್ರೇಷ್ಠ ತೋಟಗಾರಿಕೆ ರೈತ, ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ

ಮೈಸೂರು,ಡಿ.23–2024ರ ಫೆ.10ರಿಂದ 12ರವರೆಗೆ ಬಾಗಲಕೋಟೆಯ ಉದ್ಯಾನಗಿರಿ ಮುಖ್ಯ ಆವರಣದಲ್ಲಿ ತೋಟಗಾರಿಕೆ ಮೇಳ ಹಮ್ಮಿಕೊಳ್ಳಲಾಗಿದೆ. ಮೇಳದಲ್ಲಿ ಬಾಗಲಕೋಟೆ ವ್ಯಾಪ್ತಿಯಲ್ಲಿರುವ 24 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಬ್ಬ ಶ್ರೇಷ್ಠ ತೋಟಗಾರಿಕೆ ರೈತ, ರೈತ ಮಹಿಳೆಯನ್ನು ಆಯ್ಕೆ ಮಾಡಿ, ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ತೋಟಗಾರಿಕೆ ರೈತ, ರೈತ ಮಹಿಳೆಯರು www.uhsbagalkot.karnataka.gov.inನಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಇಲವಾಲದಲ್ಲಿನ ತೋಟಗಾರಿಕೆ ಮಹಾವಿದ್ಯಾಲಯ ಡೀನ್ ಅವರಿಗೆ ಜನವರಿ 1, 2024ರ ಸಂಜೆ 5ರೊಳಗೆ ಸಲ್ಲಿಸುವುದು. ಮಾಹಿತಿಗೆ ಮೊಸಂ: 8147959226, 9341997297 ಸಂಪರ್ಕಿಸಿ.

ನಿಧನ



ಸಿದ್ದಯ್ಯ

ಮೈಸೂರು, ಡಿ.23–ಮೈಸೂರಿನ ಕುವೆಂಪುನಗರ 'ಎಂ' ಬ್ಲಾಕ್ ನಿವಾಸಿಯಾದ ಮೈಸೂರು ನಗರಪಾಲಿಕೆಯ ನಿವೃತ್ತ ಉದ್ಯೋಗಿ ಸಿದ್ದಯ್ಯ(74)ನವರು ಶನಿವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಶನಿವಾರ ಸಂಜೆ ಕೆ.ಜಿ.ಕೊಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಾಸನ ಜಿಲ್ಲಾ ಬಳಗ ಒಂದು ಜಾತ್ಯಾತೀತ, ಭಾವೈಕ್ಯತೆ ಬೆಸೆಯುವ ಬಳಗ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಅಭಿಮತ



ಮೈಸೂರು, ಡಿ.23(ಎಂಟಿವೈ)– ಮೈಸೂರಲ್ಲಿ ಜೀವನ ರೂಪಿಸಿಕೊಂಡಿರುವ ಹಾಸನ ಜಿಲ್ಲಾ ಬಳಗ ಜಾತ್ಯಾತೀತ ಬಳಗವಾಗಿದ್ದು, ಸಮಾಜವನ್ನು ಬೆಸೆಯುಂತಹ ಭಾವೈಕ್ಯತೆಯ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ ಎಂದು ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಹಾಸನ ಜಿಲ್ಲಾ ಬಳಗ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸರ್ವ ಸದಸ್ಯರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಲೋಪದೋಷವಿದೆ. ಇದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಮೌಲ್ಯವುಳ್ಳ ಶಿಕ್ಷಣ ಸಿಗದಂತಾಗಿದೆ. ಈ ಹಿಂದೆ ಶಿಕ್ಷಣ ಜೀವನವನ್ನು ಕಲಿಸುವ ಪಾಕಶಾಲೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ಸಾಮೂಹಿಕವಾಗಿ ಸಾರ್ವತ್ರಿಕತೆ ಇತ್ತು. ಇಂದಿನ ಶಾಲೆಗಳ ಮೂಲಕ ಮಕ್ಕಳು ಮಕ್ಕಳಲ್ಲಿಯೇ ತಾರತಮ್ಯ ಮಾಡಿಕೊಂಡು ಹೋಗುತ್ತಿದ್ದೇವೆ. ನಮ್ಮ ಮಕ್ಕಳಲ್ಲಿ ಸಮಭಾವ ಬೆಳೆಯುತ್ತಿಲ್ಲ ಎಂದು ವಿಷಾದಿಸಿದರು.

ಮಕ್ಕಳಿಗೆ ಮಾನವೀಯ ಮೌಲ್ಯವುಳ್ಳ ಶಿಕ್ಷಣ ದೊರಕದ ಪರಿಣಾಮ ಇಂದು ಬಾಲಾಪರಾಧಿಗಳ ಸಂಖ್ಯೆ ಹೆಚ್ಚಾಗುತ್ತಿದೆ. 20–21ನೇ ಸಾಲಿನಲ್ಲಿ 31,170 ಮಕ್ಕಳು ಬಾಲಾಪರಾಧಿಗಳು ವಿವಿಧ ಕೃತ್ಯಗಳಲ್ಲಿ ಸಿಕ್ಕಿಬಿದ್ದಿದ್ದಾರೆ. ಇದನ್ನು ಪೋಷಕರು ಗಂಭೀರವಾಗಿ ಪರಿಗಣಿಸಬೇಕು. ತಮ್ಮ ಮಕ್ಕಳ ಮೇಲೆ ಗಮನ ಹರಿಸಬೇಕು. ಶಾಲಾ ಶಿಕ್ಷಣದೊಂದಿಗೆ ಮನೆಯಲ್ಲಿ ನೈತಿಕ ಹಾಗೂ ಮಾನವೀಯ ಮೌಲ್ಯ ಕಲಿಸುವತ್ತ ಗಮನ ಹರಿಸಬೇಕು. ಹಾಸನ ಜಿಲ್ಲೆಗೆ ತನ್ನದೇ ಆದ ಇತಿಹಾಸವಿದ್ದು, ಭಾರತದಲ್ಲಿ ಹಾಸನ ಜಿಲ್ಲೆ ಬಿಟ್ಟು ಇತಿಹಾಸ ಬರೆಯಲು ಸಾಧ್ಯವಿಲ್ಲ ಎಂದರು.

ಇದೇ ವೇಳೆ ಹಾಸನ ಜಿಲ್ಲಾ ಬಳಗ ಪ್ರಕಟಿಸಿರುವ 2024ನೇ ಸಾಲಿನ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಅಲ್ಲದೆ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ, ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್ ಗೌಡ, ಬಾಲಾಜಿ ಶೇಖರ್, ಗೌರವ ಅಧ್ಯಕ್ಷ ರಾಮಕೃಷ್ಣ, ಅಧ್ಯಕ್ಷರಾದ ಶ್ರೀಮತಿ ಪಿ.ಶಾರದಮ್ಮ, ಕಾರ್ಯದರ್ಶಿ ಬಿ.ಜಿ. ರಂಗೇಗೌಡ, ರೇವಣ್ಣ, ಮಾಜಿ ಮೇಯರ್ ಮೋದಾಮಣಿ, ರಮೇಶ್, ರಾಮಚಂದ್ರ, ಪುಟ್ಟಸ್ವಾಮಿಗೌಡ, ಅಣ್ಣೇಗೌಡ, ತುಕಾರಾಂ ರಾವ್, ಶಶಿಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಶ್ರೀ ಗೀತಾಪ್ರಚಾರಿಣೀ ಸಭಾ ಟ್ರಸ್ಟ್:** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ರಿಂದ ಸಾಮೂಹಿಕ ಭಗವದ್ಗೀತಾ ಪಾರಾಯಣ, ಬೆಳಗ್ಗೆ 8.30ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ರಥೋತ್ಸವ, ಗಣಪತಿ ಹೋಮ, ವಿಷ್ಣು ಸಹಸ್ರನಾಮ ಹೋಮ, ಶ್ರೀ ಭಾವಸಾರ ಕ್ಷತ್ರಿಯ ಭಜನಾ ಮಂಡಳಿ ಅವರಿಂದ ಅಖಂಡ ಭಜನೆ, ಮಧ್ಯಾಹ್ನ 1ಕ್ಕೆ ಅನ್ನಪೂರ್ಣೇಶ್ವರಿ ಪೂಜೆ, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ವಿಶ್ವ ಸಂಕೇತಿ ಭಾರತಿ ಟ್ರಸ್ಟ್:** ಸಂಕೇತಿ ಬರಹಗಾರರ ರಾಜ್ಯ ಮಟ್ಟದ ಪ್ರಥಮ ಸಾಹಿತ್ಯ ಸಮ್ಮೇಳನ, ಕವಿಗೋಷ್ಠಿ, ಅಧ್ಯಕ್ಷತೆ: ಸಂಕೇತಿ ಸಂಗಮ ಮಾಸಪತ್ರಿಕೆ ಸಂಪಾದಕ ರಾಜಾರಾಮಮೂರ್ತಿ, ಉದ್ಘಾಟನೆ: ನಿವೃತ್ತ ಸ್ಥಾಯಿ ವೈದ್ಯಾಧಿಕಾರಿ ಡಾ.ಮನೋನ್ಮಣಿ, ಸ್ಥಳ: ನಾಚಾರಮ್ಮ ಭವನ, ಜಯನಗರ ಎರಡನೇ ಮುಖ್ಯ ರಸ್ತೆ, ಬೆಳಗ್ಗೆ 8ಕ್ಕೆ.

■ **ಅಜ್ಜನ ಮನೆ ಕಲಾ ಪ್ರಪಂಚ :** ಹರಿದಾಸ ಸ್ಮರಣೆ ದಾಸರ ಕೃತಿ ಗಾಯನ ಸ್ಪರ್ಧೆ, ಸ್ಥಳ : ನಾದಬ್ರಹ್ಮ ಸಭಾಂಗಣ, ಬೆಳಗ್ಗೆ 8 ರಿಂದ.

■ **ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಂಘ:** ಕ್ರೀಡಾಕೂಟ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಪಾಲಿಕೆ ಆಯುಕ್ತ ಆಶಾದ್ ಉರ್‌ರೆಹಮಾನ್ ಶರೀಫ್, ಅಧ್ಯಕ್ಷತೆ: ಸಂಘದ ರಾಜ್ಯಾಧ್ಯಕ್ಷ ಡಾ.ಡಿ.ಚಂದ್ರಶೇಖರಯ್ಯ, ಸ್ಥಳ: ಓವಲ್ ಮೈದಾನ, ಬೆಳಗ್ಗೆ 9ಕ್ಕೆ.

■ **ತರಳಬಾಳು ಶಿಕ್ಷಣ ಕೇಂದ್ರ:** ಬಹುಮಾನ ವಿತರಣೆ, ಪ್ರತಿಭಾ ಪುರಸ್ಕಾರ, ವಾರ್ಷಿಕೋತ್ಸವ ಸಮಾರಂಭ, ಬಹುಮಾನ ವಿತರಣೆ: ಸಾರ್ವಜನಿಕ ಹಾಗೂ ಸಾಕ್ಷರತಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ. ಪಾಂಡು, ಮುಖ್ಯ ಅತಿಥಿಗಳು: ನಿವೃತ್ತ ಸಸ್ಯಶಾಸ್ತ್ರ ಪ್ರಾಧ್ಯಾಪಕ ಡಾ. ಜಿ.ಆರ್.ಶಿವಮೂರ್ತಿ, ಉಪಸ್ಥಿತರು: ತರಳಬಾಳು ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ.ಆನಂದಪ್ಪ, ಅಧ್ಯಕ್ಷತೆ: ತರಳಬಾಳು ಪದವಿಪೂರ್ವ ಕಾಲೇಜು ಪ್ರಾಂಶುಪಾಲ ನಾಗೇಂದ್ರಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ಶ್ರೀ ಪಂಚಶನೇಶ್ವರಸ್ವಾಮಿ ದೇವಸ್ಥಾನ:** ಬೆಳಗ್ಗೆ 9.45ಕ್ಕೆ ಆರಾಧನಾ ಮಹೋತ್ಸವ, ಮಲೆಯಾಳದ ಹುತ್ತೂರಮ್ಮನ ಜಾತ್ರೆ, ಮ. 3ರಿಂದ ವಿದುಷಿ ವಿಜಯಮೂರ್ತಿರಿಂದ ಭರತನಾಟ್ಯ, ಸಂಜೆ 6ರಿಂದ ಮಕ್ಕಳ ಜನಪದ ನೃತ್ಯ, ಮ.12ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ನಜರ್‌ಬಾದ್.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸೋರಿಯಾಸಿಸ್, ಇಸುಬು, ಹುಳಕಡ್ಡಿ ಚರ್ಮರೋಗಗಳಿಗೆ ಆಯುರ್ವೇದ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವೀರಶೈವ ಸಜ್ಜನ ಸಂಘ:** ಶ್ರೀ ಸುಬ್ರಮಣ್ಯಸ್ವಾಮಿ ಷಷ್ಠಿ ಪೂಜಾ ಮಹೋತ್ಸವ, ಮುಖ್ಯ ಅತಿಥಿಗಳು: ಪಟ್ಟದ ಮಠದ ಶ್ರೀ ಬಸವಣ್ಣ ಸ್ವಾಮಿಗಳು, ಅಧ್ಯಕ್ಷತೆ: ಸಂಘದ ಅಧ್ಯಕ್ಷ ರಮಾನಂದ, ಸ್ಥಳ: ಶ್ರೀ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಮಂಡಿ ಮೊಹಲ್ಲಾ, ಬೆಳಗ್ಗೆ 10ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಹನುಮ ಜಯಂತಿ ಪ್ರಯುಕ್ತ ಶ್ರೀ ಅಭಯಾಂಜನೇಯ ಸ್ವಾಮಿ ವಾರ್ಷಿಕ ವಿಶೇಷ ಪೂಜಾ ಮಹೋತ್ಸವ, ಸಾನ್ನಿಧ್ಯ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸಮ್ಮುಖ: ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅಧ್ಯಕ್ಷತೆ: ಮೇಯರ್ ಶಿವಕುಮಾರ್, ಸ್ಥಳ: ರಾಘವೇಂದ್ರನಗರ, ಬೆಳಗ್ಗೆ 11ಕ್ಕೆ.

■ **ಸುಧರ್ಮಾ ಸಂಸ್ಕೃತ ದಿನಪತ್ರಿಕೆ:** ಸುಧರ್ಮಾ ಕನ್ನಡ ದಿನದರ್ಶಿಕೆ–2024 ಲೋಕಾರ್ಪಣೆ ಕಾರ್ಯಕ್ರಮ, ಮುಖ್ಯ ಭಾಷಣ ಮತ್ತು



ಇಂದಿನ ಪಂಚಾಂಗ

24.12.2023 ಭಾನುವಾರ, ಮಳೆ ನಕ್ಷತ್ರ: ಮೂಲ 16.12.2023ರಿಂದ 28.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

ದಿನದರ್ಶಿನಿ ಲೋಕಾರ್ಪಣೆ: ಆರ್‌ಎಸ್‌ಎಸ್ ಹಿರಿಯ ಪ್ರಚಾರಕ ಸು.ರಾಮಣ್ಣ, ಅಧ್ಯಕ್ಷತೆ: ಸುಧರ್ಮಾ ಸಂಸ್ಕೃತ ದಿನಪತ್ರಿಕೆ ಗೌರವ ಸಂಪಾದಕ ವಿದ್ವಾನ್ ಡಾ. ಎಚ್.ವಿ.ನಾಗರಾಜರಾವ್, ಅಭ್ಯಾಗತರು: ಶಾಸಕ ಟಿ.ಎಸ್.ಶ್ರೀವತ್ಸ, ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ, ಸಮ್ಮಾನ ಭಾಜನರು: ವಿದ್ವಾನ್ ಹೆಚ್.ಎಂ.ಸುಧೀರ ಹೆಗ್ಗದ್ದೆ, ವಿದ್ವಾನ್ ಶ್ರೀವತ್ಸಾಚಾರ್ಯ, ಸ್ಥಳ: ಶ್ರೀ ಮನ್ಮಹಾರಾಜ ಸಂಸ್ಕೃತಿ ಮಹಾಪಾಠಶಾಲೆ, ಬೆಳಗ್ಗೆ 10.30ಕ್ಕೆ.

■ **ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ:** ಕನ್ನಡ ರಾಜ್ಯೋತ್ಸವ, ಹೊಯ್ಸಳ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಮಹಾಕವಿ ಡಾ. ಲತಾರಾಜಶೇಖರ್, ಅಧ್ಯಕ್ಷತೆ: ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಗಾನಭಾರತಿ, ಬೆಳಗ್ಗೆ 10.30ಕ್ಕೆ.

■ **ಪರಿಸರ ಬಳಗ, ಸಹಜ ಸಮೃದ್ಧ, ಉಳುಮೆ ಪ್ರತಿಷ್ಠಾನ, ಬೆಳವಲ ಫೌಂಡೇಶನ್ :** ನೈಸರ್ಗಿಕ ಕೃಷಿ ಮತ್ತು ಮಣ್ಣು ಸಂರಕ್ಷಣೆ ಬಗ್ಗೆ ಸಾಧಕರೊಂದಿಗೆ ಮಾತುಕತೆ, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ಕರ್ನಾಟಕ ರಾಜ್ಯ ಸಂಶೋಧಕರ ಸಂಘ, ಕನ್ನಡ ಜಾನಪದ ಪರಿಷತ್, ಮೈಸೂರು ಜಿಲ್ಲಾ ಘಟಕ:** ಅಭಿನಂದನಾ ಸಮಾರಂಭ, ಜಿಲ್ಲಾ ಜಾನಪದ ಪ್ರಪಂಚ, ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಅಧ್ಯಕ್ಷತೆ: ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕ್ಯಾತನಹಳ್ಳಿ ಹೆಚ್. ಪ್ರಕಾಶ್, ಕೆ.ಮರೀಗೌಡ, ಡಾ.ಎಸ್.ಬಾಲಾಜಿ, ಅಭಿನಂದನಾ ನುಡಿ: ಪ್ರೊ. ನಂಜಯ್ಯ ಹೊಂಗನೂರು, ಕಸಾಪ ಮಾಜಿ ಅಧ್ಯಕ್ಷ ನೀ. ಗಿರಿಗೌಡ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಗಾಂಧಿ ಭವನ, ಬೆಳಗ್ಗೆ 10.30ಕ್ಕೆ.

■ **ಸಂವಹನ ಪ್ರಕಾಶಕರು, ಕನ್ನಡ ಸಾಹಿತ್ಯ ಕಲಾಕೂಟ :** ಹಿರಿಯ ವಿಜ್ಞಾನ ಸಾಹಿತಿ ಎಸ್. ರಾಮಪ್ರಸಾದ್ ಅವರ ಮುಪ್ಪಿಗೆ ನೆನಪೇ ಸಂಜೀವಿನಿ ಕೃತಿ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ: ಹಿರಿಯ ಪತ್ರಕರ್ತ ರವೀಂದ್ರ ಭಟ್, ಕೃತಿ ಪರಿಚಯ: ಡಾ.ಎಸ್.ಎ.ಮೋಹನಕೃಷ್ಣ, ಅಧ್ಯಕ್ಷತೆ: ಪ್ರೊ. ನೀಲಗಿರಿ ಎಂ.ತಳವಾರ, ಮುಖ್ಯ ಅತಿಥಿಗಳು: ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಡಿ.ಎನ್.ಲೋಕಪ್ಪ, ಲೇಖಕ ಎಸ್.ರಾಮಪ್ರಸಾದ್, ಸ್ಥಳ: ರೋಟರಿ ಮೈಸೂರು ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ವೈಕುಂಠ ಏಕಾದಶಿ, ಶ್ರೀ ಸ್ವಾಮಿಯವರಿಗೆ ಚತುಷ್ಪಾರ್ಚನೆ, ಪಂಚಾಮೃತ ಅಭಿಷೇಕ, ಬೆಳಗ್ಗೆ 7.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 9ಕ್ಕೆ ಶ್ರೀ ರಾಮತಾರಕ ಹೋಮ, ಶ್ರೀ ಆಂಜನೇಯ ಸಹಸ್ರನಾಮ, ಮ. 11ಕ್ಕೆ ಶ್ರೀ ವೀರಾಂಜನೇಯಸ್ವಾಮಿ ಉತ್ಸವ, ಮಹಾಮಂಗಳಾರತಿ, ಮ. 12.30ಕ್ಕೆ ಅನ್ನಸಂತರ್ಪಣೆ, ಸಂಜೆ 6.30ಕ್ಕೆ ಹಂಸಧ್ವನಿ ಕಲಾನಿಕೇತನ ಸಂಘದವರಿಂದ ಸುಗಮ ಸಂಗೀತ, ಸ್ಥಳ: ದೇವಸ್ಥಾನ, ಬನ್ನಿಮಂಟಪ, ಹನುಮಂತನಗರ.

■ **ಸಮತಾ ಅಧ್ಯಯನ ಕೇಂದ್ರ, ಕವಿ ಪ್ರಕಾಶನ, ಕವಲಕ್ಕಿ:** ಪುಸ್ತಕಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಬಿ.ಸಿ.ಮಂಜುಳಾ, ಪುಸ್ತಕಗಳ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಸ್ಥಳ: ರೋಟರಿ ಕೇಂದ್ರ, ಮ. 3ಕ್ಕೆ.

■ **ಎನ್‌ವಿಎಸ್ ಕ್ರಿಯೇಷನ್ಸ್ :** ಸಾಂಸ್ಕೃತಿಕ ಸ್ಪರ್ಧೆ, ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಡಾ.ರವೀಂದ್ರಕುಮಾರ್, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಅತಿಥಿಗಳು: ಯಶಸ್ವಿನಿ ಲೋಕೇಶ್ವರ್, ಡಾ.ರೇಖಾ ಅರುಣ್, ಡಾ.ರಘುರಾಂ ವಾಜಪೇಯಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಸಂಜೆ 5ಕ್ಕೆ.

■ **ಶ್ರೀ ಕೃಷ್ಣ ಟ್ರಸ್ಟ್:** ಸಂಜೆ 5ಕ್ಕೆ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದಂಗಳವರಿಗೆ ಭವ್ಯ ಸ್ವಾಗತ, ಸಂಜೆ 7ಕ್ಕೆ ಸಾಮೂಹಿಕ ತೊಟ್ಟಿಲು ಪೂಜೆ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ.

■ **ನೃತ್ಯಾತಿ ಕಲಾಶಾಲೆ :** ಕುಮಾರಿ ಡಿ. ಐಸಿರಿ ಅವರಿಂದ ರಂಗಪ್ರವೇಶ, ಉದ್ಘಾಟನೆ: ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಉಪಸ್ಥಿತರು: ಡಾ.ವಸುಂಧರಾ ದೊರೆಸ್ವಾಮಿ, ಡಾ.ಆರ್.ಎಸ್. ನಂದಕುಮಾರ್, ವಿದ್ವಾನ್ ಆರ್. ಕಣ್ಣನ್, ಕೆ. ಸಂದೇಶ್ ಭಾರ್ಗವ್, ಡಾ. ಭುವನೇಶ್ವರಿ, ಡಾ. ಶೀಲಾ ಶ್ರೀಧರ್, ವಿದುಷಿ ಮಿತ್ರಾ ನವೀನ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು, ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಕೃಷ್ಣ ಗಾನಸಭಾ :** ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ರಮಣೀ ಶಂಕರ್ ಅವರಿಂದ ಗಾಯನ, ವಿದ್ವಾನ್ ಎಂ. ಕೇಶವ್–ಪಿಟೀಲು, ವಿದ್ವಾನ್ ವಿ. ರಾದೇಶ್–ಮೃದಂಗ, ವಿದ್ವಾನ್ ಶಮಿತಗೌಡ–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6.30ಕ್ಕೆ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಭಗವದ್ಗೀತಾ ಅಭಿಯಾನ, ಪಂಡಿತ್ ಶ್ರೀ ರಾಮಚಂದ್ರಾಚಾರ್ಯ ಉಮರ್ಜಿರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 13, ಸ್ಥಳ: ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಅಗ್ರಹಾರ, ಸಂಜೆ 6.30 ರಿಂದ.

■ **ನಿರಂತರ ಫೌಂಡೇಶನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು:** ನಿರಂತರ ರಂಗ ಉತ್ಸವ, ಸಂಜೆ 6.30ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು: ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ, ಹಿರಿಯ ರಂಗ ನಿರ್ದೇಶಕ ಪಿ.ಗಂಗಾಧರಸ್ವಾಮಿ, ಹೊನ್ನಳ್ಳಿ ಗಂಗಾಧರ್, ಸಂಜೆ 7ಕ್ಕೆ ನಿರಂತರ ಕಲಾವಿದರಿಂದ ಗೊರೂರು ನಾಟಕ ಪ್ರದರ್ಶನ, ನಿರ್ದೇಶನ: ಮಂಜುನಾಥ ಎಲ್.ಬಡಿಗೇರ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ಬೆಂಗಳೂರು ಸಂಚಾರಿ ಥಿಯೇಟರ್‌ನಿಂದ ಹುತ್ತವ ಬಡಿದರೆ ನಾಟಕ ಪ್ರದರ್ಶನ, ರಚನೆ: ಕೆ.ವಿ.ನಾರಾಯಣ, ನಿರ್ದೇಶನ: ಮಂಗಳ , ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್:** ನೃತ್ಯ ಸಂಭ್ರಮ, ಉದ್ಘಾಟನೆ: ಕಲಾ ಪೋಷಕ ಜಿ.ಆರ್.ನಾಗರಾಜ್, ಮುಖ್ಯ ಅತಿಥಿಗಳು: ವಿದುಷಿ ಲಕ್ಷ್ಮೀಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಅಧ್ಯಕ್ಷತೆ: ಸೆಂಟರ್ ಅಧ್ಯಕ್ಷ ಬಾಲರಾಜ್, ಸ್ಥಳ: ಸೆಂಟರ್ ಆವರಣ, ಬೋಗಾದಿ 2ನೇ ಹಂತ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಕಸಾಂದ್ರ ಮತ್ತು ಸತಿ ನಾಟಕ ಪ್ರದರ್ಶನ, ನಿರ್ದೇಶನ : ಬಿ.ಆರ್. ವೆಂಕಟರಮಣ ಐತಾಳ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ :** ಏಕಾದಶ ಶತ ರುದ್ರಾಭಿಷೇಕ ಕಾರ್ಯಕ್ರಮ, ಸ್ಥಳ: ಮೂಗೂರು ಕರ್ನಾಟಕ ಬ್ರಾಹ್ಮಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 7.30ರಿಂದ.

■ **ಕರ್ನಾಟಕ ಸೇನಾಪಡೆ, ಜಿಲ್ಲಾ ಘಟಕ:** ಕನ್ನಡ ರಾಜ್ಯೋತ್ಸವ, ಸಾನ್ನಿಧ್ಯ: ಪ್ರೊ.ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಎಂಎಲ್‌ಸಿ ಸಿ.ಎನ್.ಮಂಜೇ ಗೌಡ, ಉಪಸ್ಥಿತರು: ಶಾಸಕ ಕೆ.ಹರೀಶ್‌ಗೌಡ, ಹೆಚ್.ವಿ.ರಾಜೀವ್, ಅಧ್ಯಕ್ಷತೆ: ಶಾಸಕ ಶ್ರೀವತ್ಸ, ಸ್ಥಳ: ವಿವೇಕಾನಂದ ವೃತ್ತ, ಸಂಜೆ 7.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಬಿ.ಎಸ್. ರಾಮಕೃಷ್ಣರಾವ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ–ಸೈಬರ್ ಮಿತ್ರ–ಸೈಬರ್ ಸುರಕ್ಷೆವಾರದ ಮಾತು, ಪ್ರಸ್ತುತಿ–ಸತೀಶ್ ಪ್ರಾಯೋಜಕರು cybermitra.in ಮೈಸೂರು, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 6.50 ರೈತರಿಗೆ ಸಲಹೆ, 7.45 ಕ್ಯಾನ್ಸರ್ ರೋಗಿಗಳಲ್ಲಿ ಪೌಷ್ಟಿಕಾಂಶದ ಮಹತ್ವ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಬೆಂಗಳೂರು, 9.40 ನಮ್ಮ ಆರೋಗ್ಯ–ಚಳಿಗಾಲದಲ್ಲಿ ಕಂಡುಬರುವ ಶ್ವಾಸಕೋಶಕ್ಕೆ ಸಂಬಂಧಿಸಿದ ಸಾಮಾನ್ಯ ಸಮಸ್ಯೆಗಳು ಮತ್ತು ಚಿಕಿತ್ಸೆ ಕುರಿತು ಡಾ.ಅರುಣ್ ಎಚ್.ಎಂ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಸೈಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ಮಕ್ಕಳಿಂದ ಕ್ರಿಸ್‌ಮಸ್ ಕುರಿತ ವಿಶೇಷ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಎ.ಆರ್.ರಾಗಿಣಿ, 12.45 ಜನಪದಸಂಗೀತ–ಮಹದೇವಯ್ಯ ಮತ್ತು ಸಂಗಡಿಗರು–ಮಾದೇಶ್ವರನ ಕತೆ, 1.20 ಭಾವಗೀತೆ–ಶೈಲಜಾ ಚಂದ್ರಶೇಖರ್, 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಪಾಂಡು ದಿಗ್ವಿಜಯ, ಪ್ರಸ್ತುತಿ–ಕಾಸರಗೋಡಿನ ಕೆ.ಎ.ಪದ್ಮನಾಭ ಪೂಜಾರಿ ಮತ್ತು ತಂಡದವರು, 6.50 ಕೃಷಿರಂಗ–ಕುರಿ ಸಾಕಾಣಿಕೆ ಕುರಿತು ಸಂವಾದ. ಭಾಗವಹಿಸುತ್ತಾರೆ ಕಾಳಿಸಿದ್ದನಹುಂಡಿಯ ಜಿ.ಬೀರೇಶ್ ಹಾಗೂ ಕೋಟೆಹುಂಡಿ ಬಸಪ್ಪ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ–ಭಾಗವಹಿಸುವವರು–ಸಮಾಜ ಜೀವಿ ಚಾಮರಾಜನಗರದ ಸಿ.ಪಿ.ಹುಚ್ಚೇಗೌಡ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ–ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ರಮ್ಯಾ ಕಿರಣ್ಮಯಿ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 24 ಭಾನುವಾರ 2023

ಸಂಪುಟ: 44 | ಸಂಚಿಕೆ: 247 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಚಾಮುಂಡಿಬೆಟ್ಟಕ್ಕೆ ರೋಪ್‌ವೇ ನಿರ್ಮಾಣಕ್ಕೆ ನಾವು ತಯಾರಿದ್ದೇವೆ ಆದರೆ ಯಾರೂ ಅಡ್ಡಿಪಡಿಸಬಾರದು

● ಹೋಟೆಲ್ ಮಾಲೀಕರ ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಷರತ್ತು ● ಈ ಹಿಂದೆ ಪರಿಸರವಾದಿಗಳು ಅಡ್ಡ ಬಂದರು ● ಮೈಸೂರಿನ ಅಭಿವೃದ್ಧಿಗೆ ಏನೆಲ್ಲಾ ಬೇಕು ಹೇಳಿ ಮಾಡ್ತೇನೆ... ● ಮೈಸೂರಿನಲ್ಲೇ ಫಿಲಂ ಸಿಟಿ ನಿರ್ಮಾಣ; ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಇಲ್ಲ



ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ 'ರಜತ ಮಹೋತ್ಸವ' ಸಮಾರಂಭದಲ್ಲಿ ಹಿರಿಯ ಹೋಟೆಲ್ ಉದ್ಯಮಿಗಳನ್ನು ಸನ್ಮಾನಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ, ಹೊಟೇಲ್ ಉದ್ಯಮಿಗಳು, ಮುಖಂಡರು ಮತ್ತಿತರರಿದ್ದರು.

ಸುವರ್ಣ ಮಹೋತ್ಸವಕ್ಕೂ ಬರುತ್ತೇನೆ....!

ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಉದ್ಘಾಟನೆಯನ್ನು ನಾನೇ ಮಾಡಿದ್ದೇ... ಈಗ ರಜತ ಮಹೋತ್ಸವದ ಉದ್ಘಾಟನೆಯನ್ನೂ ಮಾಡಿದ್ದೇನೆ.. ಸುವರ್ಣ ಮಹೋತ್ಸವ ಆಚರಣೆಗೂ ಬರುವೆ ಎಂದುಕೊಂಡಿದ್ದೀನಿ ಎಂದ ಸಿದ್ದರಾಮಯ್ಯ ಅವರು, ಬಸವೇಗೌಡ(ಮಾಜಿ ಮುಡಾ ಅಧ್ಯಕ್ಷ), ನಾನು ನೂರು ವರ್ಷಕ್ಕಿಂತ ಜಾಸ್ತಿ ಬದುಕಬೇಕು ಎಂದುಕೊಂಡಿದ್ದೇನೆ. ಆದ್ದರಿಂದ ಇನ್ನು 25 ವರ್ಷ ಜಾಸ್ತಿ ಬದುಕುತ್ತೇನೆ ಅಂತ ಅಂದುಕೊಂಡಿದ್ದೀನಿ... ಸಂಘವು ಅಮೃತ ಮಹೋತ್ಸವ ಹಾಗೂ ಶತಮಾನೋತ್ಸವವನ್ನು ಆಚರಣೆ ಮಾಡಲಿ ಎಂದು ಶುಭ ಕೋರಿದರು.

ಈ ಹೋಟೆಲ್ ಮಾಲೀಕರಿಗೂ ನನಗೂ ಬಹಳ ವರ್ಷಗಳಿಂದ ಸಂಬಂಧ ಇದೆ. ಏಕೆಂದರೆ ನಾನು ಓದುವಾಗ ಹೆಚ್ಚಾಗಿ ಹೋಟೆಲ್‌ನಲ್ಲೇ ತಿಂಡಿ–ಊಟ ಮಾಡುತ್ತಿದ್ದೆ. ರಾಜಕೀಯಕ್ಕೆ ಬಂದು ಬೆಂಗಳೂರು ಸೇರಿದ ಮೇಲೆ ಹೋಟೆಲ್‌ಗೆ ಹೋಗುವುದು ಕಡಿಮೆಯಾಯಿತು. ಆದರೂ ಅಭ್ಯಾಸ ಬಲ ನೋಡಿ ಆಗಾಗ ಹೋಗ್ತಾ ಇರ್‌ತ್ತೀನಿ. ನಾನು ಮೈಸೂರಿನಲ್ಲಿ ಓದುವಾಗ, ಲಾಯರ್ ಆಗಿರುವಾಗ ಪ್ರತಿದಿನ ಒಂದೊಂದು ಹೋಟೆಲ್‌ಗೆ ಹೋಗುತ್ತಿದ್ದೆ. ಎಲ್ಲಿ ತಿಂಡಿ ಚೆನ್ನಾಗಿದೆಯೋ ಎಂದು ಹುಡುಕಿಕೊಂಡು ಹೋಗುತ್ತಿದೆ. ಹೆಚ್ಚಾಗಿ ನನ್ನ ಆಫೀಸ್ ಪಕ್ಕದಲ್ಲಿದ್ದ ಇಂದ್ರಕೆಫೆಗೆ ಹೋಗುತ್ತಿದ್ದೆ. ಇನ್ನು ರಾತ್ರಿ ವೇಳೆ ನಾನ್‌ವೆಜ್ ಹೋಟೆಲ್‌ಗಳಿಗೆ ಹುಡುಕುತ್ತಿದ್ದೆ ಎಂದ ಸಿಎಂ, ತಮ್ಮ ಹಳೇ ದಿನಗಳನ್ನು ಮೆಲುಕು ಹಾಕಿದರು.

ಮೈಸೂರು, ಡಿ.23(ಎಂಕೆ)– ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ನಿರ್ಮಾಣಕ್ಕೆ ನಾವು ತಯಾರಿದ್ದೇವೆ. ಆದರೆ ಯಾರೂ ಅಡ್ಡಿಪಡಿಸಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಬಂಟರ ಸಮುದಾಯ ಭವನದಲ್ಲಿ ಹೋಟೆಲ್ ಮಾಲೀಕರ ಸಂಘ, ಹೋಟೆಲ್ ಮಾಲೀಕರ ಧರ್ಮದತ್ತಿ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ 'ರಜತ ಮಹೋತ್ಸವ' ಸಮಾರಂಭವನ್ನು ಉದ್ಘಾಟಿಸಿ ಹೋಟೆಲ್ ಮಾಲೀಕರ ಮನವಿಗೆ ಪ್ರತಿಕ್ರಿಯಿಸಿದ ಅವರು, ನಾನು ಈ ಹಿಂದೆಯೇ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ಹಾಕಬೇಕು ಎಂದಿದ್ದೆ. ಆದರೆ ಪರಿಸರವಾದಿಗಳು ಅಡ್ಡ ಬಂದರು. ಈಗಲೂ ನಾವು ಚಾಮುಂಡಿಬೆಟ್ಟಕ್ಕೆ ರೋಪ್‌ವೇ ಮಾಡಲು ತಯಾರಿದ್ದೇವೆ. ಆದರೆ ಪರಿಸರವಾದಿಗಳು ಸೇರಿದಂತೆ ಯಾರೂ ಅಡ್ಡಿಪಡಿಸಬಾರದು. ನೀವು ಅವರಿಗೆ ತಿಳಿ ಹೇಳಿ ಎಂದು ಹೋಟೆಲ್ ಮಾಲೀಕರಿಗೆ ತಿಳಿಸಿದರಲ್ಲದೆ ಫಿಲಂ ಸಿಟಿಯನ್ನು ಮೈಸೂರಿನಲ್ಲೇ ಮಾಡಲಾಗುವುದು ಎಂದು ಈಗಾಗಲೇ ಬಜೆಟ್‌ನಲ್ಲೇ ಘೋಷಣೆ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡುವುದಿಲ್ಲ ಎಂದರು.

ಪ್ರವಾಸೋದ್ಯಮ ಬೆಳೆಯಲು ಹೋಟೆಲ್ ಉದ್ಯಮ ಬಹಳ ಸಹಕಾರಿಯಾಗಿದೆ. ಪ್ರವಾಸಿಗರ ಕೇಂದ್ರವಾಗಿರುವ ಮೈಸೂರಿನಲ್ಲಿ ಹೋಟೆಲ್ ಉದ್ಯಮ ಬೆಳೆದರೆ ಪ್ರವಾಸಿಗರಿಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಮೈಸೂರನ್ನು ಸಾಂಸ್ಕೃತಿಕ ನಗರವಾಗಿ, ಪ್ರವಾಸೋದ್ಯಮ ಕೇಂದ್ರವಾಗಿ ಇನ್ನಷ್ಟು ಎತ್ತರಕ್ಕೆ ಬೆಳೆಸಲು ▶ 9ನೇ ಪುಟಕ್ಕೆ

ನಿಮ್ಮ ಪತ್ರಗಳು

ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿ ನಮ್ಮದೊಂದು ಮನವಿ

ಮೈಸೂರಿಗೆ ವಿಶ್ವ ದರ್ಜೆಯ ಆರ್ಟ್ ಗ್ಯಾಲರಿ ಕಲ್ಪಿಸಿ

ಮಾನ್ಯರೆ,

ಸಾಂಸ್ಕೃತಿಕ ಮತ್ತು ಪಾರಂಪರಿಕ ನಗರ ಮೈಸೂರಿಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದಾಗಿ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ ಎಂದು ಇಂದಿನ ಪತ್ರಿಕೆಗಳು ವರದಿ ಪ್ರಕಟಿಸಿದ್ದವು.

ಕೊಡಗು ಮೂಲದ, ಮಾಜಿ ಮುಖ್ಯಮಂತ್ರಿ **ಆರ್.ಗುಂಡೂರಾವ್** ತಾವು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಹೇಳಿದ್ದು ನೆನಪಾಗುತ್ತಿದೆ. ಕೊಡಗಿನವರು ತಮಗೆ ಅಗತ್ಯವಿರುವ ಸೌಲಭ್ಯಗಳು ಮತ್ತು ಮೂಲ ಸೌಕರ್ಯಗಳನ್ನು ಕೇಳಬಹುದು ಎಂದು ಅವರು ಹೇಳಿದ್ದರು.

ಆದರೆ ವಿಷಾದವೆಂದರೆ, ಬೆಂಗಳೂರು ಮತ್ತು ಮೈಸೂರು ಕೊಡವ ಸಮಾಜದವರ ಹೊರತುಪಡಿಸಿದರೆ, ಕೊಡಗು ಜನತೆ ಯಾವುದೇ ಮಹತ್ವದ ಬೇಡಿಕೆಗಳನ್ನು ಅವರ ಮುಂದಿಡಲಿಲ್ಲ.

ಆದರೆ ಮೈಸೂರಿನ ವಿಷಯದಲ್ಲಿ ಆ ರೀತಿಯಲ್ಲಿ ಆಗಬಾರದು. ನಾವು ಮೈಸೂರಿಗರು ತಕ್ಷಣ ಕಾರ್ಯಪ್ರವೃತ್ತರಾಗಬೇಕು. ಮುಖ್ಯಮಂತ್ರಿಗಳ ಭರವಸೆಯಂತೆ ನಮಗೆ (ಮೈಸೂರಿಗೆ) ಅಗತ್ಯವಿರುವ ಸೌಲಭ್ಯಗಳ ಪಟ್ಟಿಯನ್ನು ಆದಷ್ಟು ಬೇಗ ಅವರಿಗೆ ಸಲ್ಲಿಸಬೇಕು.

ನನಗೆ ಮತ್ತು ನನ್ನ ಕಲಾವಿದ ಸ್ನೇಹಿತರಿಗಾಗಿ ಅಗತ್ಯವಿರುವ ಒಂದು ಪ್ರಮುಖ ಸೌಲಭ್ಯವೆಂದರೆ ಅದು ವಿಶ್ವ ದರ್ಜೆಯ ಆರ್ಟ್ ಗ್ಯಾಲರಿ (ವಿಶ್ವ ದರ್ಜೆಯ ಕಲಾಸೌಧ). ಇದು, ವರ್ಣಚಿತ್ರ, ಶಿಲ್ಪ ಕಲಾಕೃತಿಗಳು ಮತ್ತು ಅವುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅಗತ್ಯವಿದೆ. ಇದು ಸುವ್ಯವಸ್ಥಿತ ಸಭಾಂಗಣ ಹೊಂದಿರಬೇಕು. ಜೊತೆಗೆ ಗ್ರಂಥಾಲಯ, ಕಾರ್ಯಾಗಾರಕ್ಕಾಗಿ ಸೂಕ್ತ ಸ್ಥಳಾವಕಾಶವೂ ಇರಬೇಕು. ಅಲ್ಲದೆ, ಕ್ಯಾಂಟೀನ್ ಸಹ ಹೊಂದಿರಬೇಕು. ಇದರೊಂದಿಗೆ ಹಸಿರು ಹುಲ್ಲುಹಾಸು ಆವರಣ, ಹೂದೋಟದೊಂದಿಗೆ ಹಸಿರು ವನ ಹೊಂದಿರುವುದರ ಜೊತೆಗೆ ಸಾಕಷ್ಟು ವಾಹನ ನಿಲುಗಡೆಗೆ ಸ್ಥಳಾವಕಾಶ ಹೊಂದಿರುವುದು ಅತ್ಯಗತ್ಯ.

ಸಿದ್ದರಾಮಯ್ಯನವರು ನಮಗೆ ಆರ್ಟ್ ಗ್ಯಾಲರಿ ಕಲ್ಪಿಸಿಕೊಟ್ಟರೆ, ಅವರು ನಮಗೆ ನಿಜವಾಗಿಯೂ ಸ್ವರ್ಗವೊಂದನ್ನು ಕಲ್ಪಿಸಿದಂತೆ. ನಾವು ಅದಕ್ಕೆ **'ಸಿದ್ದರಾಮಯ್ಯ ಆರ್ಟ್ ಗ್ಯಾಲರಿ'** ಎಂದೇ ಹೆಸರಿಸಬಹುದು.

ಆರ್.ಗುಂಡೂರಾವ್ ನಮಗೆ ಕಲಾ ಮಂದಿರ ಕಲ್ಪಿಸಿಕೊಟ್ಟರು. ಇದರಲ್ಲಿ ನನ್ನ ಸಣ್ಣ ಪಾತ್ರವೂ (ಅಳಿಲು ಸೇವೆ) ಇತ್ತು. ಇಷ್ಟರ ನಡುವೆ ಅದಕ್ಕೆ **'ಕರ್ನಾಟಕ ಕಲಾಮಂದಿರ'** ಎಂದು ಹೆಸರಿಡಲಾಗಿದೆಯೇ ಹೊರತು 'ಗುಂಡೂರಾವ್ ಕಲಾ ಮಂದಿರ' ಎಂದಲ್ಲ! ಅದೇ ರೀತಿ ಸಿದ್ದರಾಮಯ್ಯನವರು, ಆರ್ಟ್ ಗ್ಯಾಲರಿ ನಿರ್ಮಿಸಿಕೊಟ್ಟರೆ, ಅದು ಸಹ **'ಮೈಸೂರು ಆರ್ಟ್ ಗ್ಯಾಲರಿ'** ಎಂದು ಕರೆಯಬಹುದು.

–ಡಾ.ಕೆ.ಬಿ.ಗಣಪತಿ,
ಹಿರಿಯ ಪತ್ರಕರ್ತರು.

ಮೈಸೂರು.
23.12.2023

ಹಿಜಾಬ್ ಮೇಲಿನ ನಿಷೇಧ ಹಿಂಪಡೆಯುವ ಕುರಿತು ಚರ್ಚಿಸಿ ನಿರ್ಧಾರ ಸಿಎಂ ಸಿದ್ದರಾಮಯ್ಯ ಯೂಟರ್ನ್

ಮೈಸೂರು: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದರ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ ಮತ್ತು ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಅವರು, ನಾವು ಇನ್ನೂ ಅದನ್ನು (ಹಿಜಾಬ್ ನಿಷೇಧವನ್ನು ಹಿಂತೆಗೆದುಕೊಳ್ಳುವುದು) ಮಾಡಿಲ್ಲ. ಯಾರೋ ನನಗೆ (ಹಿಜಾಬ್ ನಿಷೇಧ ತೆಗೆದು ಹಾಕುವ ಬಗ್ಗೆ) ಪ್ರಶ್ನೆಯನ್ನು ಕೇಳಿದರು. ಹಿಜಾಬ್ ನಿಷೇಧವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರ ಪರಿಗಣಿಸುತ್ತಿದೆ ಎಂದು ನಾನು ಉತ್ತರಿಸಿದೆ. ಈ ಶೈಕ್ಷಣಿಕ ವರ್ಷದಲ್ಲಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

ಉಡುಪು ಪ್ರತಿಯೊಬ್ಬರ ವೈಯಕ್ತಿಕ ಆಯ್ಕೆಯ ವಿಷಯವಾಗಿದ್ದು, ರಾಜ್ಯದಲ್ಲಿ ಹಿಜಾಬ್ ಮೇಲೆ ವಿಧಿಸಲಾಗಿರುವ ನಿರ್ಬಂಧವನ್ನು ಹಿಂಪಡೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಘೋಷಿಸಿದರು. ಪ್ರಧಾನಿ ಮೋದಿಯವರ 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎನ್ನುವುದು ಬೋಗಸ್ ಆಗಿದೆ. ▶ 9ನೇ ಪುಟಕ್ಕೆ

ಮೈಸೂರಲ್ಲಿ ಮತ್ತೊಬ್ಬರಲ್ಲಿ ಸೋಂಕು ಪತ್ತೆ

ಇದರೊಂದಿಗೆ ಕೊರೊನಾ ಸೋಂಕಿತರ ಸಂಖ್ಯೆ 7ಕ್ಕೆ ಏರಿಕೆ



ಮೈಸೂರು, ಡಿ.23(ಬಿಎಲ್‌ಯು)– ಮೈಸೂರಿನಲ್ಲಿ ಮತ್ತೊಬ್ಬ ವ್ಯಕ್ತಿಯಲ್ಲಿ ಕೊರೊನಾ ಸೋಂಕು ಪತ್ತೆಯಾಗಿದ್ದು, ಕೊರೊನಾ ಸೋಂಕಿತರ ಸಂಖ್ಯೆ 7ಕ್ಕೆ ಏರಿಕೆ ಆಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ನಗರದಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರಿನಲ್ಲಿ ನಿನ್ನೆ ತನಕ ಆರು ಕೊರೊನಾ ಸೋಂಕಿತರಿದ್ದರು. ಇಂದು ಮತ್ತೊಬ್ಬ ವ್ಯಕ್ತಿಯಲ್ಲಿ ಕೊರೊನಾ ಪಾಸಿಟಿವ್ ಆಗಿದೆ ಎಂದರು. ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಿದ ಸಂದರ್ಭದಲ್ಲಿ ಪರೀಕ್ಷೆ ವೇಳೆ ಆತನಲ್ಲಿ ಕೂಡ ಕೊರೊನಾ ಸೋಂಕು ಪತ್ತೆಯಾಗಿದ್ದು, ಅವನನ್ನು ಬೆಂಗಳೂರಿಗೆ ಕಳುಹಿಸಲಾಗಿದೆ ಎಂದು ತಿಳಿಸಿದರು. ಈಗ ಪತ್ತೆಯಾಗಿರುವ ಕೊರೊನಾ ಸೋಂಕಿತರ ಟ್ರಾವೆಲ್ ಹಿಸ್ಟ್ರಿ ಇಲ್ಲ. ಆದರೂ ಇವರಿಗೆ ಹೇಗೆ ಕೊರೊನಾ ಬಂದಿದೆ ಎಂದು ತಿಳಿಯುತ್ತಿಲ್ಲ ಎಂದರು.

ಕೊರೊನಾ ಸೋಂಕು ಪತ್ತೆಯಾಗಿರುವ ವ್ಯಕ್ತಿಗಳ ಜೊತೆ ಪ್ರಾಥಮಿಕ ಸಂಪರ್ಕದಲ್ಲಿರುವವರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಹೋಂ ಕ್ವಾರಂಟೈನ್‌ನಲ್ಲಿರುವಂತೆ ಅವರಿಗೆ ಸಲಹೆ ನೀಡಲಾಗಿದೆ. ಜೊತೆಗೆ ಇವರ ಜೊತೆ ಮತ್ಯಾರಾದರೂ ಸಂಪರ್ಕದಲ್ಲಿದ್ದರೆ ಪರೀಕ್ಷೆ ಮಾಡಿಸಿಕೊಳ್ಳುವಂತೆ ಕೂಡ ಸೂಚನೆ ನೀಡಲಾಗಿದೆ ಎಂದು ಡಾ.ರಾಜೇಂದ್ರ ವಿವರಿಸಿದರು. ಆದರೂ ಮೈಸೂರು ಜಿಲ್ಲೆಯಲ್ಲಿ ಕೊರೊನಾ ನಿಯಂತ್ರಣದಲ್ಲಿದೆ. ಕೇರಳ ಮೂಲಕ ಕೊರೊನಾ ಸೋಂಕು ▶ 9ನೇ ಪುಟಕ್ಕೆ

ಕೋವಿಡ್ ರೂಪಾಂತರಕ್ಕೆ ಕಡಿವಾಣ: ಕೇರಳ ಗಡಿ ಭಾಗದಲ್ಲಿ ಕಟ್ಟೆಚ್ಚರ

ನಿತ್ಯ ಐದು ಸಾವಿರ ಪರೀಕ್ಷೆಗೆ ನಿರ್ಧಾರ

● ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ
● ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು ಒಳ್ಳೆಯದು



ಮೈಸೂರು, ಡಿ.23(ಎಂಟಿವೈ)– ರಾಜ್ಯದಲ್ಲಿ ಕೋವಿಡ್ ರೂಪಾಂತರಿ ಜೆಎನ್–1 ತಳಿ ಸೋಂಕು ಹರಡದಂತೆ ಕೇರಳ ಗಡಿಭಾಗದಲ್ಲಿ ತೀವ್ರ ಕಟ್ಟೆಚ್ಚರ ವಹಿಸುವುದರೊಂದಿಗೆ ಪ್ರತಿದಿನ ಐದು ಸಾವಿರ ಆರ್‌ಟಿ–ಪಿಸಿಆರ್ ಟೆಸ್ಟ್‌ಗಳನ್ನು ಮಾಡುವ ಗುರಿ ಹೊಂದಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೇರಳದಲ್ಲಿ ಕೊರೊನಾ ರೂಪಾಂತರಿ ಸೋಂಕು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಇದೀಗ ಕರ್ನಾಟಕದಲ್ಲಿ ಸೋಂಕಿತ ಪ್ರಕರಣಗಳು ಪತ್ತೆಯಾಗುತ್ತಿವೆ. ಕೇರಳ ರಾಜ್ಯ ಹೊರತುಪಡಿಸಿದರೆ ನಮ್ಮ ರಾಜ್ಯದಲ್ಲಿ ಅತೀ ಹೆಚ್ಚು ಆರ್‌ಟಿಪಿಸಿಆರ್ ಟೆಸ್ಟ್ ಮಾಡಲಾಗುತ್ತಿದೆ. ನಾಳೆ(ಡಿ.24)ಯಿಂದಲೇ ರಾಜ್ಯದಲ್ಲಿ ಐದು ಸಾವಿರ ಸ್ವ್ಯಾಬ್ ಟೆಸ್ಟ್ ಮಾಡುವುದಕ್ಕೆ ಗುರಿ ನೀಡಲಾಗಿದೆ ಎಂದು ತಿಳಿಸಿದರು.

ಕೇರಳ ಗಡಿಭಾಗದ ಮಂಗಳೂರು, ಕೊಡಗು, ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ. ಹೆಚ್ಚಿನ ಟೆಸ್ಟ್‌ಗಳನ್ನು ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಕೊರೊನಾ ನಿಯಂತ್ರಣದಲ್ಲಿರುವ ಕಾರಣ ಸ್ಕ್ರೀನಿಂಗ್ ಮಾಡುವ ಅವಶ್ಯಕತೆ ಇಲ್ಲ. ಆದರೆ, ಸೋಂಕು ಹರಡುವಿಕೆ ತಡೆಗೆ ಕೈಗೊಳ್ಳಬೇಕಾದ ಎಲ್ಲಾ ಕ್ರಮ ಕೈಗೊಳ್ಳುವಂತೆ



ಹಾಗೂ ಕಟ್ಟೆಚ್ಚರ ವಹಿಸುವಂತೆ ಸೂಚನೆ ನೀಡಿರುವುದಾಗಿ ವಿವರಿಸಿದರು. ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸ್ಸಿನಂತೆ 60 ವರ್ಷ ಮೇಲ್ಪಟ್ಟವರು ಮಾಸ್ಕ್ ಧರಿಸುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಿ ಓಡಾಡುವಂತೆ ಹೇಳಲಾಗಿದೆ. ▶ 7ನೇ ಪುಟಕ್ಕೆ

ಸ್ಥಳೀಯರಿಗೆ ಕಡ್ಡಾಯವಾಗಿ ಉದ್ಯೋಗ ನೀಡಲೇಬೇಕು

ಮೈಸೂರಲ್ಲಿ ಉದ್ಯಮ ಸ್ಥಾಪಿಸುವ ಕೈಗಾರಿಕೋದ್ಯಮಿಗಳಿಗೆ ಸಿಎಂ ಸಿದ್ದರಾಮಯ್ಯ ಆದೇಶ

● ಕಾರ್ಖಾನೆಗಾಗಿ ಭೂಮಿ ಕೊಟ್ಟ ರೈತರಿಗೆ ಅನ್ಯಾಯ ● ತಿಂಗಳಾಂತ್ಯದಲ್ಲಿ ಬಾಕಿ ಉದ್ಯೋಗ ನೀಡಲು ತಾಕೀತು
● ನೈಪುಣ್ಯತೆ ಇಲ್ಲದಿದ್ದರೆ ತರಬೇತಿ ನೀಡಿ ನೇಮಿಸಿಕೊಳ್ಳಿ ● ಕಾರ್ಮಿಕ ಸಂಘಟನೆಗಳನ್ನು ಯಾವುದೇ ರೀತಿ ಹತ್ತಿಕಬೇಡಿ

ಮೈಸೂರು, ಡಿ.23(ಬಿಎಲ್‌ಯು)– ಮೈಸೂರು, ನಂಜನಗೂಡು ಸೇರಿದಂತೆ ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ಕೈಗಾರಿಕೆಗಳಲ್ಲಿ ಕಡ್ಡಾಯವಾಗಿ ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಗಾರಿಕೋದ್ಯಮಿಗಳಿಗೆ ತಾಕೀತು ಮಾಡಿದ್ದಾರೆ.


ಮೈಸೂರಿನ ನಜರ್‌ಬಾದ್‌ನ ಹೋಟೆಲ್ ಫಾರ್ಚ್ಯೂನ್ ಜೆ.ಪಿ.ಪ್ಯಾಲೇಸ್‌ನಲ್ಲಿ ಇಂದು ನಡೆದ ಕೈಗಾರಿಕೋದ್ಯಮಿಗಳ ಸಭೆಯಲ್ಲಿ ಮಾತನಾಡಿದ ಅವರು, ಸುಳ್ಳು ಕಾರಣ ನೀಡಿ ಸ್ಥಳೀಯರಿಗೆ ಉದ್ಯೋಗ ನಿರಾಕರಿಸಬಾರದು ಎಂದು ಸೂಚನೆ ನೀಡಿದರು.

ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ದೊರೆಯಬೇಕು. ತಾಂತ್ರಿಕ ನೈಪುಣ್ಯತೆ ಹೊಂದಿರುವವರು ಇಲ್ಲಿ ಸಿಗದಿದ್ದರೆ ಮಾತ್ರ ಹೊರಗಿನವರಿಗೆ ಅವಕಾಶ ನೀಡಬೇಕು. ಅದು ಬಿಟ್ಟು ಸ್ಥಳೀಯರಿಗೆ ತಾಂತ್ರಿಕ ನೈಪುಣ್ಯತೆ ಇದ್ದು, ಕೆಲಸ ಮಾಡುವ ಅರ್ಹತೆ ಇದ್ದರೂ ಅವರಿಗೆ ಉದ್ಯೋಗ ನಿರಾಕರಿಸಬಾರದು ಎಂದು ಸಿದ್ದರಾಮಯ್ಯ ಕೈಗಾರಿಕೋದ್ಯಮಿಗಳಿಗೆ ತಿಳಿ ಹೇಳಿದರು. ನಮ್ಮಲ್ಲಿ ಮಾನವ ಸಂಪನ್ಮೂಲ ಇದೆ. ಐಟಿಐ, ಡಿಪ್ಲೊಮಾ, ಪದವಿ ಪಡೆದಿರುವ ಸಾಕಷ್ಟು ಜನರಿದ್ದಾರೆ. ಇಂತಹವರಿಗೆ ಸರ್ಕಾರ ಕೌಶಲ್ಯ ತರಬೇತಿ ನೀಡಿ ಪರಿಣಿತರನ್ನಾಗಿ ಮಾಡಿದೆ. ಈ ಮೂಲಕ ನಮ್ಮ ಜನರು ವೃತ್ತಿಯಲ್ಲಿ ನೈಪುಣ್ಯತೆ ಕೂಡ ಹೊಂದಿದ್ದಾರೆ. ಒಂದು ವೇಳೆ ತಾಂತ್ರಿಕ ನೈಪುಣ್ಯ ಇಲ್ಲದಿದ್ದರೆ ಅವರಿಗೆ ತರಬೇತಿ ನೀಡಿ ನೇಮಕ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಂಜನಗೂಡು, ಚಾಮುಂಡೇಶ್ವರಿ, ವರುಣ ಹಾಗೂ ಹಿಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಿಲ್ಲ ಎಂಬ ದೂರುಗಳಿವೆ. ಆದ ಕಾರಣ ತಕ್ಷಣ ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದು ಹೇಳಿದರು. ಕೈಗಾರಿಕೆ ಸ್ಥಾಪನೆಗೆ ಭೂಮಿ ನೀಡಿದ ರೈತರಿಗೆ ಶಾಶ್ವತ ಉದ್ಯೋಗ ನೀಡಬೇಕು. ಯಾವುದೇ ಕಾರಣಕ್ಕೂ ಬಾಹ್ಯ ಗುತ್ತಿಗೆ ಅಥವಾ ತಾತ್ಕಾಲಿಕ ಉದ್ಯೋಗ ನೀಡಬಾರದು. ಯಾರು ಉದ್ಯೋಗ ನೀಡಿಲ್ಲವೊ ಅವರು ಈ ತಿಂಗಳಾಂತ್ಯಕ್ಕೆ ಉದ್ಯೋಗ ನೀಡಬೇಕು. ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಸಭೆಯಲ್ಲಿ ಆಗಿರುವ ಒಪ್ಪಂದಕ್ಕೆ ನೀವು ಬದ್ಧರಾಗಿ ಎಂದು ಸೂಚನೆ ನೀಡಿದರು. ಈ ಮೂಲಕ ಕಾರ್ಖಾನೆಗಳ ಸ್ಥಾಪನೆಗೆ ಜಮೀನು ನೀಡಿ ಭೂಮಿ ಕಳೆದುಕೊಂಡ ಮಾಲೀಕರ ಕುಟುಂಬದವರಿಗೆ ಪ್ರಮುಖವಾಗಿ ಉದ್ಯೋಗ ನೀಡಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಕಾರ್ಖಾನೆಗಳಿಂದ ರಾಜ್ಯದ ಅಭಿವೃದ್ಧಿಯಾಗುತ್ತದೆ. ಜಿಡಿಪಿ ಬೆಳವಣಿಗೆಗೆ ಇದು ಸಹಕಾರಿಯಾಗಲಿದೆ. ಆದರೆ ಸ್ಥಳೀಯರಿಗೆ ಉದ್ಯೋಗ ಸಿಗಬೇಕೆಂಬ ಉದ್ದೇಶದಿಂದ ಕಾರ್ಖಾನೆಗಳ ಸ್ಥಾಪನೆಗೆ ಸರ್ಕಾರ ಅನುಮತಿ ನೀಡಿದೆ. ಜೊತೆಗೆ ಮೂಲ ಸೌಕರ್ಯವನ್ನು ಒದಗಿಸಿದೆ. ಹೀಗಿರುವಾಗ ▶ 7ನೇ ಪುಟಕ್ಕೆ





ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ

ಮೈಸೂರು ಜಿಲ್ಲೆಯಲ್ಲಿ ಯಾವ ಕಾರ್ಖಾನೆಯಲ್ಲಿ ಎಷ್ಟು ಪ್ರಮಾಣದ ಉದ್ಯೋಗಾವಕಾಶ ಸೃಷ್ಟಿಯಾಗಿದೆ. ಅವರಲ್ಲಿ ಎಷ್ಟು ಮಂದಿ ಸ್ಥಳೀಯರಿಗೆ ಉದ್ಯೋಗ ನೀಡಲಾಗಿದೆ ಎಂಬ ಬಗ್ಗೆ ಪಟ್ಟಿ ಸಿದ್ಧ ಮಾಡಿ ವರದಿ ನೀಡುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿದ್ದಾರೆ.

ಕೈಗಾರಿಕೋದ್ಯಮಿಗಳ ಸಭೆಯ ನಂತರ ಈ ಬಗ್ಗೆ ವಿವರ ನೀಡಿದ ಡಾ.ರಾಜೇಂದ್ರ, ಈ ಬಗ್ಗೆ ಮಾಹಿತಿ ಪಡೆದು ವರದಿ ಸಿದ್ಧಪಡಿಸಲಾಗುವುದು ಎಂದು ಹೇಳಿದರು. ಕೈಗಾರಿಕೆಗಳ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಂಡ ಮೂಲ ಭೂ ಮಾಲೀಕರಿಗೆ ಪರಿಹಾರ ನೀಡಲಾಗಿದೆ. ಆದರೆ ಬೇನಾಮಿ ಮಾಲೀಕರು ಭೂಮಿಯ ಹಕ್ಕು ಕ್ಯಾತೆ ತೆಗೆದು ಕಾರ್ಖಾನೆ ಮಾಲೀಕರಿಗೆ ತೊಂದರೆ ನೀಡುತ್ತಿರುವ ಬಗ್ಗೆ ಕೈಗಾರಿಕೋದ್ಯಮಿಗಳು ಮುಖ್ಯಮಂತ್ರಿಗಳಿಗೆ ದೂರು ನೀಡಿದರು. ಈ ಸಮಸ್ಯೆ ಪರಿಹಾರ ಮಾಡುವಂತೆ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ ಎಂದು ಡಾ.ರಾಜೇಂದ್ರ ತಿಳಿಸಿದರು.

ಶಾಲಾ ಶೌಚಾಲಯ ಸ್ವಚ್ಛತೆಗೆ ವಿದ್ಯಾರ್ಥಿಗಳ ಬಳಸುವುದು ನಿಷಿದ್ಧ

ಬೆಂಗಳೂರು, ಡಿ.23(ಕೆಎಂಶಿ)– ಶಾಲಾ ಶೌಚಾಲಯಗಳನ್ನು ಶುಚಿಗೊಳಿಸಲು ವಿದ್ಯಾರ್ಥಿಗಳನ್ನು ಬಳಸದಂತೆ ಸರ್ಕಾರ ನಿಷೇಧಿಸಿದೆ. ಸರ್ಕಾರಿ ಶಿಕ್ಷಣ ಸಂಸ್ಥೆ ಹಾಗೂ ವಿವಿಧ ಇಲಾಖೆಗಳಡಿ ಬರುವ ವಿದ್ಯಾರ್ಥಿನಿಲಯಗಳಲ್ಲಿ ಶೌಚಾಲಯ ಮತ್ತು ಆವರಣ ಶುಚಿತ್ವ ಕಾಪಾಡಲು ಪ್ರತ್ಯೇಕ ಸಿಬ್ಬಂದಿ ನೇಮಕ ಮಾಡಿಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಅವರು, ಶಾಲೆಯ ಶೌಚಾಲಯಗಳನ್ನು ಶುಚಿಗೊಳಿಸಲು ವಿದ್ಯಾರ್ಥಿಗಳ ಬಳಕೆ ಅತ್ಯಂತ ಹೀನ ಕೃತ್ಯ ಎಂದಿದ್ದಾರೆ. ಇಂತಹ ವ್ಯವಸ್ಥೆಯನ್ನು ಸರ್ಕಾರ ನಿಷೇಧಿಸಿದೆ, ಇದನ್ನು ಮೀರಿ ಯಾವುದೇ ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ತಂದೆ : "ನೀನು ಶಾಲೆಯಲ್ಲಿ ಯಾವುದರಲ್ಲಿ ಮೊದಲಿಗ?"
ಮಗ : "ಶಾಲೆಯ ಗಂಟೆ ಬಾರಿಸಿದ ಕೂಡಲೇ ನಾನೇ ಮೊದಲು ಹೊರಕ್ಕೆ ಬರುವವನಪ್ಪ"

ಮೈಸೂರು ಮಿತ್ರ

ಭಾನುವಾರ, 24 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಶಾಂತಿಯಿಂದ ಸಂಪಾದಿಸಬಹುದಾದ ವಿಜಯ, ಸಂಗ್ರಾಮದಿಂದ ಸಾಧಿಸಬಹುದಾದಕ್ಕಿಂತ ಹೆಚ್ಚು. –ಜಾನ್ ಮಿಲ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಾಟಿಯಿಲ್ಲದೆ ಬುಗುರಿ ಆಡಿಸಿದ ಹಾಗೆ

ನಿಮ್ಮ ಪತ್ರಗಳು

ವೈದ್ಯರ ಮೇಲೆ ಹಲ್ಲೆ, ಖಂಡನೀಯ

ಮಾನ್ಯರೆ,

ಚಾಮರಾಜನಗರದ ಕಾಂಗ್ರೆಸ್ ಮುಖಂಡರೊಬ್ಬರು ಮಂಗಳವಾರ ರಾತ್ರಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆ ತುರ್ತು ಚಿಕಿತ್ಸಾ ವಿಭಾಗದಲ್ಲಿ ವೈದ್ಯರ ಮೇಲೆ ಹಲ್ಲೆ ಮಾಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದು ಅತ್ಯಂತ ಖಂಡನೀಯ. ಅಲ್ಲದೆ ಆಸ್ಪತ್ರೆಗೆ ಕುಡಿದು ಬಂದು ಗಲಾಟೆ ಮಾಡಿರುವುದು ಹೇಯಕೃತ್ಯ. ಒಂದು ರಾಷ್ಟ್ರೀಯ ಪಕ್ಷದ ಸದಸ್ಯನಾಗಿ ಇಂತಹ ಕೃತ್ಯ ಸರಿಯಲ್ಲ.

ಹಗಲು ರಾತ್ರಿ ಎನ್ನದೆ ವೈದ್ಯರು, ಶುಶ್ರೂಷಕಿಯರು ಜನರ ಸೇವೆ ಮಾಡುತ್ತಾರೆ. ಅವರು ನಮ್ಮ ಹಾಗೆ ಮನುಷ್ಯರೆ ಎಂಬುದನ್ನು ತಿಳಿದಿರಬೇಕು. ಇತ್ತೀಚೆಗೆ ಜಿಲ್ಲೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ಇಷ್ಟಿದ್ದರೂ ವಿನಾಕಾರಣ ವೈದ್ಯರು ಮತ್ತು ಸಿಬ್ಬಂದಿಯ ಮೇಲೆ ಹಲ್ಲೆ ಮಾಡುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು ಸರಿಯಲ್ಲ. ಇದರಿಂದ ಇತರೆ ರೋಗಿಗಳ ಮೇಲೂ ಇದರ ಪರಿಣಾಮ ಬೀರುತ್ತದೆ. ಇಂತಹ ಘಟನೆಗಳಿಗೆ ಕಡಿವಾಣ ಅತ್ಯಗತ್ಯ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ಬೆಂಗಳೂರು–ಮೈಸೂರು ಹೈವೆಯಲ್ಲಿ ಹೆಚ್ಚುತ್ತಿರುವ ಅಪಘಾತಗಳು

ಮಾನ್ಯರೆ,

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ಇತ್ತೀಚೆಗೆ ಅಪಘಾತಗಳು ಹೆಚ್ಚುತ್ತಿವೆ. ತುಂಬಾ ಸುರಕ್ಷತೆಯಿಂದ ಕೂಡಿರುವ ಇಂತಹ ರಸ್ತೆಗಳಲ್ಲೂ ಅಪಘಾತಗಳು ಸಂಭವಿಸಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಅಂದರೆ ಅದಕ್ಕೆ ಮುಖ್ಯ ಕಾರಣ ಅತೀತವಾದ ವೇಗ. ಎಂಬತ್ತರಿಂದ ನೂರು ಕಿಮೀ ವೇಗದಲ್ಲಿ ಹೋದರೂ ಒಂದೂವರೆಯಿಂದ ಒಂದು ಮುಕ್ಕಾಲು ಘಂಟೆಯೊಳಗೆ ಬೆಂಗಳೂರಿನಿಂದ ಮೈಸೂರಿಗೆ ಬರಬಹುದು. ಮೊದಲಿಗಿಂತ ಹೆಚ್ಚು ಕಡಿಮೆ ಒಂದೂ ಕಾಲು ಘಂಟೆ ಪ್ರಯಾಣದ ಅವಧಿ ಕಡಿಮೆಯಾಗಿದೆ. ಆದರೂ ಅತಿಯಾದ ವೇಗದಿಂದ ವಾಹನ ಚಲಾಯಿಸಿ ಇನ್ನೂ ಬೇಗ ಹೋಗುವ ತವಕ ಏಕೆ?

ತುಂಬಾ ವರ್ಷಗಳ ನಂತರ ಬಹುಜನರ ನಿರೀಕ್ಷೆಯಂತೆ ಬೆಂಗಳೂರು–ಮೈಸೂರು ಪ್ರಯಾಣಿಕರಿಗೆ ಅನುಕೂಲವಾಗುವಂತಹ ಉತ್ತಮ ರಸ್ತೆ ನಿರ್ಮಾಣಗೊಂಡಿದೆ. ನಾಗರಿಕರು ಅತಿಯಾದ ವೇಗದಿಂದ ವಾಹನ ಚಲಾಯಿಸದೇ,ಈ ರಸ್ತೆ ಪ್ರಯಾಣದ ಅನುಕೂಲ ಸದುಪಯೋಗ ಪಡಿಸಿಕೊಳ್ಳಬೇಕು.

–ರಾಘವೇಂದ್ರ ಜೋಯಿಸ್, ಮೈಸೂರು

ರೈತ ಹೋರಾಟಗಳಿಗೆ ದನಿಯಾಗಿದ್ದ ಎನ್.ನಂಜೇಗೌಡ

ಮಾನ್ಯರೆ,



ರೈತರ ಹೋರಾಟಗಳಿಗೆ ದನಿಯಾಗಿ, ವೃತ್ತಿಯಲ್ಲಿ ರೈತ ವಕೀಲರೆನಿಸಿಕೊಂಡು, ಶ್ರೀಸಾಮಾನ್ಯರ ಕಷ್ಟಗಳಿಗೆ ಸದಾ ಸ್ಪಂದಿಸುತ್ತಾ, ಜೀವಿಸುತ್ತಿದ್ದ ಎನ್.ನಂಜೇಗೌಡರ ಅಕಾಲಿಕ ನಿಧನ ಕುಟುಂಬ ವರ್ಗಕ್ಕೆ ಮಾತ್ರವಲ್ಲ ಹಳ್ಳಿಯ ಬದುಕಿನ ರೈತರ ಸಂಕಷ್ಟಗಳಿಗೆ, ದುಡಿಯುವ ವರ್ಗಕ್ಕೆ ಕಾನೂನಿನ ಮೂಲಕ ಹೋರಾಟ ನಡೆಸುತ್ತಿದ್ದ ರೈತ ಸಂಘಟನೆಗಳಿಗೆ ದೊಡ್ಡ ಆಘಾತವಾಗಿದೆ. ಆಪ್ತರ ವಲಯದಲ್ಲಿ ಎನ್. ನಂಜೇಗೌಡರು ಎನ್‌ಎನ್‌ಜಿ ಎಂದು ಗುರುತಿಸಿಕೊಂಡಿದ್ದರು. ಮನಸ್ಸಿನಲ್ಲಿ ನೋವು ತುಂಬಿದ್ದರೂ, ಉಲ್ಲಾಸದ ನಗೆಯೊಂದಿಗೆ ಸರಳ ಸಜ್ಜನಿಕೆಯ ಹಿರಿಯ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದ ಎನ್.ನಂಜೇಗೌಡರು ರೈತ ಪರ ಹೋರಾಟಗಳು ಸ್ವಾರ್ಥಿಗಳ ಪಾಲಾಗಿ, ರೈತರು ದಿಕ್ಕೆಟ್ಟ ಸಂದರ್ಭದಲ್ಲಿ ರೈತ ಬದುಕಿಗೆ ಸ್ಪಂದಿಸಿ ಹೋರಾಟಗಳಲ್ಲಿ ಭಾಗವಹಿಸಿದ್ದರು. ಬಂಡವಾಳಶಾಹಿಗಳು ರೈತರಿಗೆ ಆಸೆ, ಆಮಿಷಗಳನ್ನು ಒಡ್ಡಿ ಭೂಮಿಯನ್ನು ಕಿತ್ತುಕೊಳ್ಳುವ ಹಾಗೂ ಸರ್ಕಾರಕ್ಕೆ ತೆರಿಗೆಯನ್ನು ಕಟ್ಟದೇ ಮರಳು ದಂಧೆ ನಡೆಸುತ್ತಿದ್ದ ಮಾಫಿಯಾ ವಿರುದ್ಧ ಚಳುವಳಿ ನಡೆಸಿ ಸರ್ಕಾರದ ಕಣ್ತೆರೆಸಿದ್ದರು. ಭೂಮಿ ಹಾಗೂ ಮರಳು ದಂಧೆಯನ್ನು ತಡೆಗಟ್ಟಿ, ರೈತರ ಬಗ್ಗೆ ಮಾಫಿಯಾಗಳು ದಂಧೆ ಮಾಡದಂತೆ ಎಚ್ಚರಿಕೆ ನೀಡಿದ್ದ ನಂಜೇಗೌಡರು ಭೂಸ್ವಾಧೀನ ಪ್ರಕರಣಗಳಲ್ಲಿ ಭೂಮಿಯನ್ನು ಕಳೆದುಕೊಂಡ ಎಷ್ಟೋ ರೈತರಿಗೆ ಸರ್ಕಾರದಿಂದ ಶೀಘ್ರ ಪರಿಹಾರ ದೊರಕಿಸುವುದರ ಜೊತೆಗೆ ಕಾನೂನಿನಲ್ಲಿ ಹೋರಾಟ ನಡೆಸಿ, ಜಪ್ತಿ ಲಾಯರ್ ಎಂದು ಹೆಸರುವಾಸಿ ಗಳಿಸಿದ್ದರು. ರೈತರ ಪರ ನ್ಯಾಯಾಲಯದಲ್ಲಿ ವಕಾಲತ್ತು ವಹಿಸುವ ನ್ಯಾಯವಾದಿ ಎಂದು ಹೆಸರುವಾಸಿಯಾಗಿದ್ದರು. ಮರುಳು, ಗಣಿಗಾರಿಕೆಗಳಿಂದಾಗಿ ಪರಿಸರ ನಾಶವಾಗುವುದನ್ನು ಕಂಡು ನಂಜನಗೂಡು ಮತ್ತು ಚಾಮರಾಜನಗರದ ಸುತ್ತಮುತ್ತಲಿನ ಗ್ರಾಮಗಳಾದ ಬೊಕ್ಕಹಳ್ಳಿ, ಮೂಡಳ್ಳಿ, ಹಾಲಂಬೂರು, ಹದಿನಾರು, ಕುಳ್ಳಕ್ಕನಹುಂಡಿ, ಸಿದ್ದಯ್ಯನಪುರ ಹೀಗೆ ನೀರು ಹರಿಯುವ ನೂರಾರು ಹಳ್ಳಿಗಳಲ್ಲಿ ಸಂಚರಿಸಿ ರೈತರೊಂದಿಗೆ ಸಮಾಲೋಚನೆ ನಡೆಸಿ, ಸುತ್ತಮುತ್ತಲಿನ ನದಿ ಪಾತ್ರದ ಹಳ್ಳಿಗಳನ್ನು ಉಳಿಸುವಲ್ಲಿ ಹೋರಾಟ ನಡೆಸಿದ್ದರು ರೈತ ಮುಖಂಡ ನಂಜೇಗೌಡರು. ನೈಸರ್ಗಿಕ ಕೃಷಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಎನ್.ನಂಜೇಗೌಡರು ಹುಣಸೂರು ತಾಲೂಕಿನ ಸಿಂಗಮಾರನಹಳ್ಳಿಯಲ್ಲಿ 30 ಸಾವಿರ ಮರಗಳನ್ನು ಬೆಳೆಸಿ, ಕಾಡು ಕೃಷಿ ಮಾಡಿ ಸಾವಿರಾರು ರೈತರಿಗೆ ಮಾದರಿಯಾಗಿ ಬದುಕನ್ನು ನಡೆಸಿದ್ದರು. ಇಂತಹ ರೈತಪರ, ಸಾಮಾಜಿಕ ಕಳಕಳಿಯುಳ್ಳ, ನಿಸ್ವಾರ್ಥ ಸೇವೆಯ ರೈತ ನಾಯಕ, ರೈತ ವಕೀಲ ಎನ್.ನಂಜೇಗೌಡರು ನಮ್ಮೆಲ್ಲರ ಬಾಳಿಗೆ ಸ್ಪೂರ್ತಿ, ಮಾರ್ಗದರ್ಶಕ.

–ರಾಜೇಂದ್ರಪ್ರಸಾದ್ ಹೊನ್ನಲಗೆರೆ, ಮೈಸೂರು.

ರಾಷ್ಟ್ರೀಯತೆ

ಮಾನ್ಯರೆ,

"ಅತಿರೇಕದ ರಾಷ್ಟ್ರ ಪ್ರೇಮ ಅಪಾಯಕಾರಿ" – ಎಂ. ಉಮಾಪತಿ (ಮಿತ್ರ ಡಿ. 12). ಸ್ವಾರಸ್ಯದ ಸಂಗತಿಯೊಂದು ನೆನಪಾಗುತ್ತದೆ. ಜಪಾನೀಯರ ದೇಶಭಕ್ತಿ ಪ್ರಸಿದ್ಧವಾದುದು, ತಾನೆ! ಒಮ್ಮೆ ರವೀಂದ್ರನಾಥ ಠಾಗೂರರು ಎಲ್ಲೋ ರಾಷ್ಟ್ರೀಯತೆಯ ವಿರುದ್ಧ ಭಾಷಣ ಮಾಡಿ, ಜಪಾನಿಗೆ ಹೋಗಿ, ಹಡಗಿನಿಂದ ಇಳಿದಾಗ, ಅವರನ್ನು ಸ್ವಾಗತಿಸಲು ಯಾರೂ ಬರಲಿಲ್ಲವಂತೆ!

ಅಮೃತ! – ಸಾಹಿತಿಗಳು, ಕವಿಗಳು ಅಮೃತ ಕುಡಿಯುತ್ತಾರೆಯೇ? ಅವರು ಕುಡಿಯುವುದೂ (ಕಾವೇರಿ) ನೀರೇ ತಾನೆ! ಎಂದ ಮೇಲೆ ಅವರೇಕೆ ಕಾವೇರಿ ಕ್ರಿಯಾ ಸಮಿತಿಯ ಹೋರಾಟದಲ್ಲಿ ಭಾಗವಹಿಸುತ್ತಿಲ್ಲ.

ಬಿಡಿ: "ತಮಿಳುನಾಡಿಗೆ ನೀರು ಬಿಡಿ, ನೀರು ಬಿಡಿ" ಎಂಬ ನಿರಂತರ ಆದೇಶದ ಅರ್ಥವೇನು? "ಪ್ರಾಣಬಿಡಿ" ಎಂದಷ್ಟೆ!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆ ಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿದ ಹಲವಾರು ಮಹನೀಯರು ಎಲೆಮರೆಯ ಕಾಯಿಗಳಂತೆ ಉಳಿದುಹೋಗಿದ್ದಾರೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

ಎರಡು ಪಿಡುಗುಗಳನ್ನು ಸೆಣಸಿದ ವೈದ್ಯ ಡಾ. ಪದ್ಮನಾಭನ್ ಪಲ್ಪು



ಡಾ. ಪದ್ಮನಾಭನ್ ಪಲ್ಪು



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

19ನೇ ಶತಮಾನದ ವೈದ್ಯರೊಬ್ಬರು ಎರಡು ಪಿಡುಗುಗಳ ವಿರುದ್ಧ ಹೋರಾಡಿ ಸಮಾಜಕ್ಕೆ ತಮ್ಮದೇ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಇಂದು ಭಾರತ ಹೇಗೆ ಕೊರೊನಾ ವಿರುದ್ಧ ಲಸಿಕೆ ಕಂಡು ಹಿಡಿದು ವಿಶ್ವಕ್ಕೇ ಮಾದರಿಯಾಯಿತೋ ಅದೇ ರೀತಿ ಈ ವೈದ್ಯರು ಅಂದು ಭಯಂಕರ ಅಂಟುರೋಗಗಳಾಗಿದ್ದ ಪ್ಲೇಗ್, ಸಿಡುಬು ರೋಗಗಳ ವಿರುದ್ಧ ಲಸಿಕೆ ತಯಾರಿಸಿ ಸಾವಿರಾರು ಜನರ ಜೀವ ರಕ್ಷಿಸಿದ್ದಾರೆ. ತಳ ಸಮುದಾಯದವರಾಗಿದ್ದ ಕಾರಣ, ವೃತ್ತಿ, ಶಿಕ್ಷಣ ಗಳಿಸಲು ಹೋರಾಡಬೇಕಾಗಿ ಬಂದರೂ ಗೆಲುವು ಸಾಧಿಸಿ ಕೀರ್ತಿ ಗಳಿಸಿದ್ದಾರೆ. ಈ ಕೀರ್ತಿ ಪಡೆದವರು **ಡಾ. ಪದ್ಮನಾಭನ್ ಪಲ್ಪು** (1863–1950).

ಪ್ಲೇಗ್ ಒಂದು ಕಾಲಕ್ಕೆ ಸಾಂಕ್ರಾಮಿಕ ರೋಗವಾಗಿ ನೂರಾರು ಜನರ ಸಾವಿಗೆ ಕಾರಣವಾಗಿತ್ತು. ಪ್ಲೇಗ್ ಬಂದಾಗ ಜನ ಊರನ್ನೇ ಬಿಟ್ಟು ಹೋಗುತ್ತಿದ್ದರು. ಪ್ಲೇಗಿಗೆ ಕಾರಣವಾಗಿದ್ದ ಮೂಷಿಕಗಳು ಹೆಚ್ಚಾಗಿದ್ದ ಮನೆಗಳನ್ನೇ ಸುಟ್ಟು ಹಾಕಲಾಗುತ್ತಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರು ಕೋಟೆಯೊಳಗಿದ್ದ ಜನರನ್ನು ಊರ ಹೊರಗಿನ ಶಿಬಿರಗಳಿಗೆ ಕಳುಹಿಸಿ ಈ ಮಾರಕ ರೋಗಗಳು ಹೆಚ್ಚಾಗಿ ಹಬ್ಬದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳುತ್ತಿದ್ದರು.

1898ರಲ್ಲಿ ವ್ಯಾಪಿಸಿದ ಭಯಂಕರ ಪ್ಲೇಗ್ ಖಾಯಿಲೆಯಿಂದಾಗಿ 1891ರಲ್ಲಿ ಮೈಸೂರು ಪಟ್ಟಣದಲ್ಲಿದ್ದ 74,048 ಜನಸಂಖ್ಯೆಯು 1901ರಲ್ಲಿ 68,111ಕ್ಕೆ ಇಳಿಯಿತು. 1904ರ ಜೂನ್ ಕೊನೆಯ ವೇಳೆಗೆ ಪ್ಲೇಗ್ ಇಡೀ ರಾಜ್ಯದಲ್ಲಿ 1,06,950 ಜನರನ್ನು ನಾಶ ಮಾಡಿತ್ತು. ಶೇ.2.5ರಷ್ಟು ಜನಸಂಖ್ಯೆಗೆ ಈ ಸೋಂಕು ತಗುಲಿ– ಅಂದರೆ ಸುಮಾರು 1,41,403 ಜನರು– ಅವರಲ್ಲಿ ಶೇ.76ರಷ್ಟು ಮಂದಿ ಸಾವಿಗೀಡಾಗಿದ್ದರು. ಅದು ಮೂರು ವರ್ಷ ಗಳ ಕಾಲ ಕಾಡಿದ ಮೇಲೆ ಇಳಿಮುಖವಾಯಿತು. 1901–02ರಿಂದ 1904–05ರವರೆಗೆ ಹಾಗೂ 1907–09ರಲ್ಲಿ ಪ್ಲೇಗ್ ತೀವ್ರ ಸ್ವರೂಪದ್ದಾಗಿತ್ತು. ಅದೇ 1905–07 ಹಾಗೂ 1908–10ರಲ್ಲಿ ಅದು ಅಷ್ಟು ತೀಕ್ಷ್ಣವಾಗಿರಲಿಲ್ಲ. ಎಲ್ಲ ಕಡೆಗಳಿಗಿಂತ ಪ್ಲೇಗ್ ಮಾರಿ ಹೆಚ್ಚು ವ್ಯಾಪಿಸಿದ್ದು ಮೈಸೂರು ನಗರದಲ್ಲಿ. ಇಲ್ಲಿ ಶೇ 17ರಷ್ಟು ಮಂದಿ ಪ್ಲೇಗ್ ಮಾರಿಗೆ ತುತ್ತಾಗಿದ್ದರು ಎಂದು ದಾಖಲಿಸುತ್ತದೆ 1907–09ರ ಇಂಪೀರಿಯಲ್ ಗೆಜೆಟಿಯರ್.

ಎರಡನೆಯ ವರ್ಷ ಪ್ಲೇಗ್ ಮತ್ತೆ ಕಡಿಮೆಯಾಯಿತು. ಊರಿನಲ್ಲಿದ್ದ ಜನ ಬೇರೆಡೆಗಳಿಗೆ ಹೋಗಿದ್ದುದು, ಮಳೆ ಕಡಿಮೆಯಾಗಿ ವಾತಾವರಣದಲ್ಲಿ ಥಂಡಿ ಇಲ್ಲದಿದ್ದುದು, ಪ್ಲೇಗ್ ವಿರುದ್ಧ ಚುಚ್ಚುಮದ್ದು ನೀಡುತ್ತಿದ್ದುದು, ಮತ್ತು ಒಂದೆಡೆಯಿಂದ ಇನ್ನೊಂದು ಸ್ಥಳಕ್ಕೆ ಹೋಗಲು ಅನುಮತಿ ಪದ್ಧತಿ ಜಾರಿಗೊಳಿಸಿದ್ದು ಬಹುಶಃ ಇದಕ್ಕೆ ಕಾರಣಗಳಾಗಿರಬೇಕು. ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಪ್ಲೇಗ್ ಖಾಯಿಲೆಯನ್ನು ತಡೆಯಲು ಸರ್ಕಾರ "ಪ್ಲೇಗ್ ಕಮೀಷನರ್" ಅವರನ್ನು ನೇಮಿಸಿತು.

ಮಹಾರಾಜರ ಸರ್ಕಾರ ಪ್ಲೇಗ್ ಮಾರಿಯನ್ನು ತಡೆಗಟ್ಟಲು ಆಧುನಿಕ ವೈದ್ಯಕೀಯ ಪ್ರಯತ್ನಗಳನ್ನೂ ಮಾಡದೇ ಇರಲಿಲ್ಲ. ಅಂದು ಇಂದಿನಂತೆ ವೈದ್ಯಕೀಯ ಸೌಲಭ್ಯಗಳಿರಲಿಲ್ಲ. ಹಲವಾರು ರೋಗಗಳಿಗೆ ಔಷಧಿಗಳಿರಲಿಲ್ಲ. ಆಧುನಿಕ ವೈದ್ಯಕೀಯ ಸೌಲಭ್ಯಗಳು ಇನ್ನೂ ಪ್ರಾರಂಭವಾಗುತ್ತಿದ್ದ ದಿನಗಳು ಅವು. ಈ ಸಂದರ್ಭದಲ್ಲಿ ಅಂದಿನ ತಿರುವಾಂಕೂರು ರಾಜ್ಯದಲ್ಲಿ ಜನಿಸಿದ್ದ ಪಿ. ಪದ್ಮನಾಭನ್ ಪಲ್ಪು ಅವರು ಮಹಾರಾಜರ ಸರ್ಕಾರದಲ್ಲಿ ಉದ್ಯೋಗಕ್ಕೆ ಸೇರಿದರು. ಪಲ್ಪು ಕೇರಳದ ಭಗವತಿ ಪದ್ಮನಾಭನ್ ಮತ್ತು ಮಾತಾ ಪೆರುಮಾಳ್ ಅವರ ಎರಡನೇ ಪುತ್ರರು.

1863ರ ನವೆಂಬರ್ 2ರಂದು ಜನಿಸಿದ್ದ ಅವರು ತಿರುವನಂತಪುರದ ಪೆಟ್ಟಾ ಗ್ರಾಮದಲ್ಲಿ ಹಾಗೂ ಇಂಗ್ಲಿಷ್ ಪ್ರೈಮರಿ ಶಾಲೆಯಲ್ಲಿ ಓದಿದರು. ಅವರು ಶಾಲೆಯ ಫೀಜು ಕೊಡಲಾಗದೆ ಹೋದಾಗ ಶಾಲೆಯ ಉಪಾಧ್ಯಾಯರು ಅವರಿಗೆ ಶುಲ್ಕವನ್ನು ಮಾಫಿ ಮಾಡಿ ಅವರಿಗೆ ಬೇಕಾದ ಪುಸ್ತಕಗಳನ್ನು ಕೊಡುವ ಔದಾರ್ಯ ತೋರಿದರು. ಅಲ್ಲಿ ಅವರು ಮೂರು ವರ್ಷ ಓದಿ ಸರ್ಕಾರಿ ಪ್ರೌಢಶಾಲೆಗೆ ಸೇರಲು ಹೋದಾಗ 'ಕೀಳು ದರ್ಜೆ'ಯ ಪಲ್ಪು ಅವರನ್ನು ಸೇರಿಸಿಕೊಳ್ಳಲು ವಿರೋಧಗಳೆದ್ದವು. ಆದರೆ ಶಾಲೆಯ ಆಂಗ್ಲ ಮುಖ್ಯೋಪಾಧ್ಯಾಯರು ವಿರೋಧಗಳ ನಡುವೆಯೂ ಪಲ್ಪು ಅವರನ್ನು ಶಾಲೆಗೆ ಸೇರಿಸಿಕೊಂಡು ಅವರು ಓದು ಮುಂದುವರಿಸಿಕೊಂಡು ಹೋಗಲು ಅವಕಾಶ ನೀಡಿದರು. ನಂತರ ಕಾಲೇಜಿಗೆ ಸೇರಿದರಾದರೂ ಫೀಸು ಕಟ್ಟಲಾಗದೆ ಓದನ್ನು ನಿಲ್ಲಿಸಿ, ಆಂಗ್ಲರ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಟ್ಟು ಅಗತ್ಯ ಹಣ ಸಂಪಾದನೆ ಮಾಡಿದರು. ಕಾಲೇಜಿನಲ್ಲಿ ಓದುತ್ತಿದ್ದಾಗ ಅಲ್ಲಿಯೇ ಉಪಾಧ್ಯಾಯರಾಗಿ ಕೆಲಸ ಮಾಡಿ ಕಾಲೇಜಿನ ಖರ್ಚುವೆಚ್ಚಗಳನ್ನು ಸರಿದೂಗಿಸಿಕೊಂಡರು. ಇದೇ ಸಂದರ್ಭದಲ್ಲಿ ಆಗ ತಾನೇ ಹೊಸದಾಗಿ ಪ್ರಾರಂಭಿಸಲಾದ ವೈದ್ಯಕೀಯ ಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿ ಮುಂಚೂಣಿಯಲ್ಲಿ ನಿಂತರು. ಆದರೆ ಪಲ್ಪು ಅವರನ್ನು ಸೇರಿಸಿಕೊಳ್ಳಲು ತೀವ್ರ ವಿರೋಧಗಳೆದ್ದು ಶಾಲೆಗೆ ಸೇರುವ ಅವಕಾಶವನ್ನು ಅವರಿಗೆ ತಿರಸ್ಕರಿಸಲಾಯಿತು. ಇದರಿಂದ ಪಲ್ಪು ಅವರ ಮನೋನಿರ್ಧಾರ ಇನ್ನಷ್ಟು ಬಲಗೊಂಡು, ಮದ್ರಾಸ್ ವೈದ್ಯಕೀಯ ಕಾಲೇಜಿನಲ್ಲಿ ಎಲ್. ಎಂ. ಎಸ್. ಶಿಕ್ಷಣ ಪಡೆದರು.

ಅಣ್ಣ ವೇಲಾಯುಧನ್ ಸಹಕಾರದಿಂದ ಪಲ್ಪು 1890ರಲ್ಲಿ ಮದ್ರಾಸ್ ಸರ್ಕಾರದ ವಿಶೇಷ ವ್ಯಾಕ್ಸೀನ್ ಡಿಪೋವಿನಲ್ಲಿ ಸೂಪರಿಂಟೆಂಡೆಂಟ್ ಕೆಲಸ ಪಡೆದುಕೊಂಡರಾದರೂ, ಅಲ್ಲಿ ಕೆಲಸ ಮಾಡುತ್ತಿದ್ದಾಗ ಡಿಪೋವನ್ನು ಬೆಂಗಳೂರಿಗೆ ವರ್ಗಾಯಿಸಲಾಗಿ ಪಲ್ಪು ಅವರೂ ಬೆಂಗಳೂರಿಗೆ ಬರಬೇಕಾಯಿತು. ಆದರೆ ಇಲ್ಲಿಯ ಆಂಗ್ಲ ಅಧಿಕಾರಿಯೊಬ್ಬ ತನ್ನ ಸಹೋದ್ಯೋಗಿಯ ಮೇಲಿನ ಮಾತ್ಸರ್ಯದಿಂದಾಗಿ ಡಿಪೋವಿನಲ್ಲಿ ತಯಾರಿಸುತ್ತಿರುವ ವ್ಯಾಕ್ಸೀನ್ ಕಳಪೆಯದ್ದು ಎಂದು ಆರೋಪ ಮಾಡಲಾರಂಭಿಸಿದ. ಇದು ಡಿಪೋವಿನ ಚಟುವಟಿಗೆಗಳಿಗೆ ಅಡ್ಡಿ ತಂದು ಕೊನೆಗೆ ಡಿಪೋವನ್ನೇ ಮುಚ್ಚಬೇಕಾಯಿತು. ವಿಧಿಯಿಲ್ಲದೆ ಪಲ್ಪು ಅವರು ಕೇರಳಕ್ಕೆ ಹಿಂತಿರುಗಿದರು. ಆದರೆ ಇಲ್ಲಿ ಅವರು ಸುಮ್ಮನೆ ಕೂರಲಿಲ್ಲ. ಕೇರಳದಲ್ಲಿ ತುಳಿತಕ್ಕೆ ಒಳಗಾಗಿದ್ದ ಸಮುದಾಯದ ಜನರ ಏಳಿಗೆಗಾಗಿ ಶ್ರಮಿಸಲಾರಂಭಿಸಿದರು.

ಈ ಸಮಯದಲ್ಲಿ ಮೈಸೂರು ಸರ್ಕಾರದಲ್ಲಿ ಹಿರಿಯ ಸರ್ಜನ್ ಆಗಿದ್ದ ಡಾ. ಬೆನ್ಸನ್ ಅವರು ಬೆಂಗಳೂರಿನಲ್ಲಿ ಒಂದು ವ್ಯಾಕ್ಸೀನ್ ಡಿಪೋ ಪ್ರಾರಂಭಿಸಲು ಡಾ. ಪಲ್ಪು ಅವರೇ ಸರಿಯಾದ ವ್ಯಕ್ತಿಯೆಂದು ಅರಿತು ಮೈಸೂರು ಸರ್ಕಾರದಲ್ಲಿ ಕೆಲಸಕ್ಕೆ ಸೇರುವಂತೆ ಅವರಿಗೆ ಆಹ್ವಾನ ನೀಡಿದರು. ಡಾ. ಪಲ್ಪು ಅವರಿಗೆ ಆಗ ತಾನೆ ಭಗವತಿ ಅಮ್ಮನ ಜೊತೆ ಮದುವೆಯಾಗಿತ್ತು. 1891ರ ಸೆಪ್ಟೆಂಬರ್ 20ರಂದು ಕೆಲಸಕ್ಕೆ ಸೇರಿದ ಡಾ. ಪಲ್ಪು ಅವರು ಮೈಸೂರು ಸರ್ಕಾರಕ್ಕೆ ಲಸಿಕೆಯನ್ನು ತಯಾರಿಸುವ ಬಗ್ಗೆ ಮನವೊಲಿಸಿದರು. ಬೆಂಗಳೂರಿನ ವ್ಯಾಕ್ಸೀನ್ ಸಂಸ್ಥೆಯಲ್ಲಿ ತಯಾರಿಸಲಾದ ಈ ಲಸಿಕೆ ಅತ್ಯುತ್ತಮ ಗುಣಮಟ್ಟದ್ದೆಂದು ವಿಮರ್ಶೆಯಲ್ಲಿ ಪ್ರಶಂಸೆ ಪಡೆಯಿತು. ಆ ಲಸಿಕೆಗಳು ಎಷ್ಟು ಉತ್ತಮವಾಗಿದ್ದವೆಂದರೆ ಅವುಗಳ ತಯಾರಿಕೆ ಪ್ರಾರಂಭವಾದ ಒಂದು ವರ್ಷದಲ್ಲೇ ಅವು ಭಾರತದಲ್ಲಿ ಮಾತ್ರ ಬಳಕೆಗೆ ಬಂದದ್ದಲ್ಲದೆ ಆಫ್ಘಾನಿಸ್ಥಾನ, ದಕ್ಷಿಣ ಆಫ್ರಿಕಾ, ಪರ್ಶಿಯನ್ ದೇಶಗಳಿಗೂ ರಫ್ತಾದವು. ಲಸಿಕೆಯಿಂದಾಗಿ ಸಾವಿರಾರು ಜನರ ಜೀವ ಉಳಿಯಿತು. ಪ್ಲೇಗ್ ಮಾರಿ ಹತೋಟಿಗೆ ಬಂದಿತು.

ಹೊಸದಾಗಿ ಬಂದ ಅಧಿಕಾರಿಗೆ ಲಸಿಕೆ ತಯಾರಿಸುವ ಬಗ್ಗೆ ಆಸಕ್ತಿಯಿಲ್ಲದ ಕಾರಣ ಡಾ. ಪಲ್ಪು ಅವರನ್ನು ಸರ್ಕಾರದ ವೈದ್ಯಕೀಯ ಇಲಾಖೆಯ ಅಸಿಸ್ಟೆಂಟ್ ಸರ್ಜನ್ ಆಗಿ ನೇಮಿಸಲಾಯಿತು. ಅವರಿಗೆ ಮನೋರೋಗ, ಕುಷ್ಠರೋಗ ಆಸ್ಪತ್ರೆಗಳ ಹಾಗೂ ವೈದ್ಯಕೀಯ ಸ್ಟೋರ್ಸ್‌ಗಳ ಜವಾಬ್ದಾರಿ ವಹಿಸಲಾಯಿತು. ಬೆಂಗಳೂರಿನ ಸೇಂಟ್ ಮಾರ್ಥಾ ಆಸ್ಪತ್ರೆಯಲ್ಲಿಯೂ ಡಾ. ಪಲ್ಪು ಕೆಲಸ ಮಾಡಿದರು. ಸಾಂಕ್ರಾಮಿಕ ರೋಗಗಳು ಮತ್ತೆ ಕಾಣಿಸಿಕೊಳ್ಳಲಾರಂಭಿಸಿದಾಗ 1895ರಲ್ಲಿ ದಿವಾನ್ ಕೆ. ಶೇಷಾದ್ರಿ ಅಯ್ಯರ್ ಅವರು ವ್ಯಾಕ್ಸೀನ್ ತಯಾರಿಕೆಯನ್ನು ಮತ್ತೆ ಕಾರ್ಯಾರಂಭಗೊಳಿಸಲು ನಿಶ್ಚಯಿಸಿದರು. ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟ್ ಆಗಿ ನೇಮಕಗೊಂಡ ಡಾ. ಪಲ್ಪು ಅವರಿಗೆ ವ್ಯಾಕ್ಸೀನ್ ಸಂಸ್ಥೆಯ ಜವಾಬ್ದಾರಿಯನ್ನೂ ವಹಿಸಲಾಯಿತು. ಈ ಹುದ್ದೆಗಳಲ್ಲಿ ಅವರು ಆಗಸ್ಟ್ 1898ರವರೆಗೂ ಮುಂದುವರಿದರು. ಈ ಮಧ್ಯೆ ಡಾ. ಪಲ್ಪು ಅವರು ತಮ್ಮ ಜನಾಂಗದ ಏಳಿಗೆಗಾಗಿ ಶ್ರಮವಹಿಸುವುದನ್ನು ಮುಂದುವರಿಸುತ್ತಾ ಬಂದರು.

1898ರಲ್ಲಿ ಪ್ಲೇಗ್ ಭೀಕರವಾಗಿ ಹರಡಲು ಪ್ರಾರಂಭವಾಯಿತು. ರೋಗಿಗಳನ್ನು ನೋಡಲು ಹಿಂಜರಿದ ಅನೇಕ ವೈದ್ಯರು ಬೆಂಗಳೂರನ್ನೇ ಬಿಟ್ಟುಹೋದರು. ಆದರೆ ಡಾ. ಪಲ್ಪು ಅವರು ರೋಗಿಗಳ ಚಿಕಿತ್ಸೆಗೆ ನಿಂತರು. ಅವರನ್ನು ಪ್ಲೇಗ್ ಕ್ಯಾಂಪ್‌ಗಳ ಸೂಪರಿಂಟೆಂಡೆಂಟ್ ಆಗಿ ನೇಮಿಸಲಾಯಿತು. ಶಿಬಿರದಲ್ಲಿ ಸುಮಾರು 500 ರೋಗಿಗಳು ಸಾವು ಬದುಕಿನ ನಡುವೆ ಹೋರಾಡುತ್ತಿದ್ದರು. ಜನ ಇಲಿಗಳಂತೆ ಸಾಯುತ್ತಿದ್ದರು. ಪ್ರತಿದಿನ ಸುಮಾರು 50 ಮಂದಿ ಪ್ಲೇಗ್ ರೋಗಕ್ಕೆ ತುತ್ತಾಗುತ್ತಿದ್ದರು. ಕೆಲವು ದಿನಗಳಲ್ಲಿ ಅದು 150ಕ್ಕೂ ಹೆಚ್ಚುತ್ತಿತ್ತು ಪರಿಸ್ಥಿತಿ ಎಷ್ಟು ಭೀಕರವಾಗಿತ್ತೆಂದರೆ ಕೆಲವು ದಿನಗಳಲ್ಲಿ ಹೆಣಗಳು, ರೋಗಿಗಳ ಮಧ್ಯೆ ಪಲ್ಪು ಅವರೊಬ್ಬರೇ ಶಿಬಿರದಲ್ಲಿ ಇರಬೇಕಾಗುತ್ತಿತ್ತು. ಕ್ಯಾಂಪಿನಲ್ಲಿ 150ಕ್ಕೂ ಹೆಚ್ಚು ಹೆಣಗಳಿದ್ದು ಬಳಿಯಲ್ಲೇ ಇದ್ದ ಸ್ಮಶಾನಕ್ಕೆ ತೆಗೆದುಕೊಂಡು ಹೋಗಲು ಅವು ಕಾಯುತ್ತಿದ್ದವು. ಕ್ಯಾಂಪಿನ ಹೊರಗಡೆಯೇ ಹೆಣಗಳನ್ನು ಸುಡಲಾಗುತ್ತಿತ್ತು. ಇಂತಹ ಭೀಕರ ಪರಿಸ್ಥಿತಿಯಲ್ಲಿ ಡಾ. ಪಲ್ಪು ಒಬ್ಬರೇ ರೋಗಿಗಳನ್ನು ನೋಡಿಕೊಳ್ಳುತ್ತಿದ್ದರು.

ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದ ಹನುಮ ಜಯಂತಿ ಮಹೋತ್ಸವಕ್ಕೆ ಚಾಲನೆ; ವೈಕುಂಠ ಏಕಾದಶಿ



ಮೈಸೂರು,ಡಿ.23–ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿಯ ಮಹೋತ್ಸವವು ಡಿಸೆಂಬರ್ 23ರಿಂದ ಜನವರಿ 1ರವರೆಗೂ ಪ್ರತಿದಿನ ಪಂಚಮುಖಿ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಹೋಮ, ಹವನ ಇತ್ಯಾದಿಗಳು ಹಮ್ಮಿಕೊಳ್ಳಲಾಗಿದೆ.

ವೈಕುಂಠ ಏಕಾದಶಿಯ ಪ್ರಯುಕ್ತ ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಮಹಾಸಂಕಲ್ಪ ಪುಣ್ಯಾವಚನ ರಕ್ಷಾ ಬಂಧನ, ಸ್ವಾಮಿಗೆ ಪಂಚಾಮೃತ ಸ್ನಾಪನ, ವಿಶೇಷ ದ್ರವ್ಯಗಳಿಂದ ಅಭಿಷೇಕ, ವಿಶೇಷ ಅಲಂಕಾರ, ಗರುಡ ದೇವರಿಗೆ ವಿಶೇಷ ಪೂಜೆ, ಧ್ವಜಾರೋಹಣ, ಕೆಲಸ ಪ್ರತಿಷ್ಠೆ ಹಾಗೂ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿತರಿಸಲಾಯಿತು. ಭಕ್ತಾದಿಗಳಾದ ದೇವೇಂದ್ರ ಆಚಾರ್ಯ, ಜಲಜಾಕ್ಷಿ, ಮಧುಸೂದನ್, ಸುಚಿತ್ರ, ಜಯದೇವ್, ಗಾಯಿತ್ರಿ, ಯೋಗಲಕ್ಷ್ಮಿ, ವೆಂಕಟೇಶ್, ಶಿವಕುಮಾರ್ ಇನ್ನಿತರರು ಹಾಜರಿದ್ದರು.

ಗಿಫ್ಟ್ ಸಿಟಿಯಲ್ಲಿ ಮದ್ಯ ನಿಷೇಧ ತೆರವುಗೊಳಿಸಿದ ಗುಜರಾತ್ ಸರ್ಕಾರ

ವೈನ್ ಮತ್ತು ಡೈನ್‌ಗೆ ಅನುಮತಿ



ಅಹಮದಾಬಾದ್: ಗುಜರಾತ್ ಇಂಟರ್ ನ್ಯಾಷನಲ್ ಫೈನಾನ್ಸ್ ಟೆಕ್–ಸಿಟಿ(GIFT ಸಿಟಿ) ಯಲ್ಲಿ 'ಜಾಗತಿಕ ವ್ಯಾಪಾರ ಪರಿಸರ ವ್ಯವಸ್ಥೆ'ಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಗುಜರಾತ್ ಸರ್ಕಾರ, ಶುಕ್ರವಾರ ಈ ಪ್ರದೇಶದಲ್ಲಿ ಮದ್ಯ ನಿಷೇಧ ಆದೇಶವನ್ನು ಹಿಂಪಡೆದಿದೆ.

ಮಹಾತ್ಮಾ ಗಾಂಧಿಯವರು ಜನಿಸಿದ ರಾಜ್ಯವಾಗಿರುವುದರಿಂದ, ಗುಜರಾತ್ ರಚನೆಯಾದಾಗಿನಿಂದ ರಾಜ್ಯದಲ್ಲಿ ಮದ್ಯದ ಪಾನೀಯಗಳ ತಯಾರಿಕೆ, ಸಂಗ್ರಹಣೆ, ಮಾರಾಟ ಮತ್ತು ಸೇವನೆಯನ್ನು ನಿಷೇಧಿಸಲಾಗಿದೆ.

ಈ ಹಿಂದೆ ರಾಜ್ಯದ ಯಾವುದೇ ಪ್ರದೇಶದಲ್ಲಿ ಇಂತಹ ವಿನಾಯಿತಿ ನೀಡಿರಲಿಲ್ಲ. ಆದರೆ 'ಗಿಫ್ಟ್ ಸಿಟಿ ಜಾಗತಿಕ ಆರ್ಥಿಕ ಮತ್ತು ತಾಂತ್ರಿಕ ಕೇಂದ್ರವಾಗಿ ಹೊರಹೊಮ್ಮಿದೆ. ಇದು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದೆ. ಜಾಗತಿಕ ವ್ಯಾಪಾರ ಪರಿಸರ ವ್ಯವಸ್ಥೆಯನ್ನು ಕಲ್ಪಿಸಲು ಗಿಫ್ಟ್ ಸಿಟಿ ಪ್ರದೇಶದಲ್ಲಿ 'ವೈನ್ ಮತ್ತು ಡೈನ್' ಸೌಲಭ್ಯಕ್ಕೆ ಅನುಮತಿ ನೀಡುವ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ರಾಜ್ಯ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ. "ಈ ಹೊಸ ವ್ಯವಸ್ಥೆಯಡಿಯಲ್ಲಿ, ಗಿಫ್ಟ್ ಸಿಟಿ ಪ್ರದೇಶದಲ್ಲಿರುವ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಕ್ಲಬ್‌ಗಳಿಗೆ (ಅಸ್ತಿತ್ವದಲ್ಲಿರುವ ಮತ್ತು ಮುಂದೆ ಬರಲಿರುವ) ವೈನ್ ಮತ್ತು ಡೈನ್ ಸೌಲಭ್ಯಕ್ಕೆ ಪರವಾನಗಿಗಳನ್ನು ನೀಡಲಾಗುತ್ತದೆ' ಎಂದು ಪ್ರಕಟಣೆ ಹೇಳಿದೆ.

ಆದಾಗ್ಯೂ, ಅಂತಹ ಹೋಟೆಲ್‌ಗಳು, ರೆಸ್ಟೋರೆಂಟ್ ಮತ್ತು ಕ್ಲಬ್‌ಗಳು ಜನರಿಗೆ ಮದ್ಯದ ಬಾಟಲಿಗಳನ್ನು ಮಾರಾಟ ಮಾಡಲು ಅನುಮತಿಯಿಲ್ಲವೆಂದು ಸರ್ಕಾರ ಸ್ಪಷ್ಟಪಡಿಸಿದೆ.

ಕೆನಡಾ ಬಳಿಕ ಅಮೆರಿಕಾದಲ್ಲೂ ಹಿಂದೂ ದೇವಾಲಯ ಧ್ವಂಸ

ಭಾರತ ವಿರೋಧಿ ಘೋಷಣೆ ಬರೆದ ಖಲಿಸ್ತಾನಿಗಳು



ಕ್ಯಾಲಿಫೋರ್ನಿಯಾ: ಅಮೆರಿಕಾದ ಕ್ಯಾಲಿಫೋರ್ನಿಯಾದ ನೆವಾರ್ಕ್‌ನಲ್ಲಿರುವ ಹಿಂದೂ ದೇವಾಲಯದ ಮೇಲೆ ಖಲಿಸ್ತಾನಿ ಬೆಂಬಲಿಗರು ದಾಳಿ ನಡೆಸಿದ್ದು, ದೇವಾಲಯದ ಗೋಡೆಗಳ ಮೇಲೆ ಭಾರತ ವಿರೋಧಿ ಮತ್ತು ಖಲಿಸ್ತಾನ್ ಪರ ಘೋಷಣೆಗಳನ್ನು ಬರೆದು ಹಾನಿ ಮಾಡಲಾಗಿದೆ.

ಹಿಂದೂ ಅಮೇರಿಕನ್ ಫೌಂಡೇಶನ್, ಕ್ಯಾಲಿಫೋರ್ನಿಯಾದ ನೆವಾರ್ಕ್‌ನಲ್ಲಿರುವ ಸ್ವಾಮಿನಾರಾಯಣ ಮಂದಿರ ವಸನಾ ಸಂಸ್ಥೆಯನ್ನು ಖಲಿಸ್ತಾನ್ ಪರ ಘೋಷಣೆಗಳಿಂದ ವಿರೂಪಗೊಳಿಸಲಾಗಿದೆ.ಘಟನೆ ಕುರಿತು ಪ್ರತಿಕ್ರಿಯೆ ನೀಡಿರುವ ಅಮೆರಿಕಾ, ಇದು ದ್ವೇಷದ ಅಪರಾಧ ಎಂದು ಪರಿಗಣಿಸಲಾಗಿದ್ದು, ಸಂಪೂರ್ಣ ತನಿಖೆ ನಡೆಸುವ ಭರವಸೆ ನೀಡಿದೆ.

ಈ ಹಿಂದೆ ಜನವರಿ 31 ರಂದು, ಕೆನಡಾದ ಬ್ರಾಂಪ್ಟನ್‌ನಲ್ಲಿರುವ ಪ್ರಮುಖ ಹಿಂದೂ ದೇವಾಲಯವನ್ನು ಭಾರತ ವಿರೋಧಿ ಗೀಚುಬರಹದೊಂದಿಗೆ ಧ್ವಂಸಗೊಳಿಸಲಾಗಿತ್ತು. ಈ ಕೃತ್ಯಕ್ಕೆ ಭಾರತೀಯ ಸಮುದಾಯದಿಂದ ತೀವ್ರ ಆಕ್ರೋಶಗಳು ವ್ಯಕ್ತವಾಗಿತ್ತು.

ಈ ವರ್ಷದ ಏಪ್ರಿಲ್‌ನಲ್ಲಿ, ಕೆನಡಾದ ಒಂಟಾರಿಯೊದಲ್ಲಿರುವ ಮತ್ತೊಂದು ಹಿಂದೂ ದೇವಾಲಯದಲ್ಲಿ ಭಾರತ ವಿರೋಧಿ ಬರಹವನ್ನು ಹಾಕಲಾಗಿತ್ತು. ಇದೀಗ ಅಮೆರಿಕಾದಲ್ಲೂ ಇಂತಹದ್ದೇ ಕೃತ್ಯ ನಡೆದಿದ್ದು, ಇಂದು ಭಾರತೀಯರ ಕಣ್ಣು ಕೆಂಪಗಾಗುವಂತೆ ಮಾಡಿದೆ

ಜ.7ಕ್ಕೆ ಗಾಯನ ಸ್ಪರ್ಧೆ; ಸ್ಪರ್ಧಿಗಳಿಂದ ಅರ್ಜಿ ಆಹ್ವಾನ

ಮೈಸೂರು,ಡಿ.23(ಪಿಎಂ)– ಶ್ರುತಿ ಮಂಜರಿ ಪ್ರತಿಷ್ಠಾನದ 26ನೇ ಕರ್ನಾಟಕ ಶಾಸ್ತ್ರೀಯ ಸಂಗೀತೋತ್ಸವ–2024ರ ಪ್ರಯುಕ್ತ ರಾಜ್ಯ ಮಟ್ಟದ ಮೊಸಳೆ ಕೃಷ್ಣಮೂರ್ತಿ ಸ್ಮಾರಕ 'ರಾಗ–ತಾನ–ಪಲ್ಲವಿ' ಗಾಯನ ಸ್ಪರ್ಧೆಯನ್ನು 2024ರ ಜ.7ರಂದು ಬೆಳಗ್ಗೆ 10ಕ್ಕೆ ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದವರಿಗೆ 5 ಸಾವಿರ ನಗದು ಬಹುಮಾನ ಕೊಡುವ ಜೊತೆಗೆ ಪ್ರತಿಷ್ಠಾನದ ವಾರ್ಷಿಕೋತ್ಸವದ ಸಂಗೀತ ಕಚೇರಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಅರ್ಜಿ ಸಲ್ಲಿಸಲು ಜ.3 ಕೊನೆ ದಿನ. ಅರ್ಜಿ ಮತ್ತು ವಿವರಗಳಿಗೆ ಡಾ.ಆರ್.ಎನ್.ಶ್ರೀಲತ, ಕೆ.ಎಸ್.ಸುರೇಶ್ (ಮೊ.ಸಂ.9945124825, 9449622466) ಅವರನ್ನು ಸಂಪರ್ಕಿಸಬಹುದು. ವಿದ್ವಾನ್ ದರ್ಜೆ ಅಭ್ಯಸಿಸುತ್ತಿರುವ ಮಕ್ಕಳನ್ನು ಸ್ಪರ್ಧೆಗೆ ಕಳುಹಿಸಬೇಕೆಂದು ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಕೆ.ಸೀತಾರಾಮ್ ಪ್ರಕಟಣೆಯಲ್ಲಿ ಕೋರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಮಂಡ್ಯ ಜಿಲ್ಲೆಯ ಶೈಕ್ಷಣಿಕ, ಆರ್ಥಿಕ, ಧಾರ್ಮಿಕ, ಆರೋಗ್ಯ ಕ್ಷೇತ್ರದಲ್ಲಿ ಸ್ಮರಣೀಯ ಸೇವೆ ಸಲ್ಲಿಸಿದ್ದ,
ರಾಜ್ಯದ ಹಿರಿಯ ಮುತ್ಸದ್ದಿ, ಅಪ್ಪಟ ಗಾಂಧೀವಾದಿ, ಹಳ್ಳಿಗಾಡಿನ ರೂವಾರಿಯಾಗಿದ್ದ
ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದ ಮಾಜಿ ಸಂಸದರು, ಸಚಿವರಾಗಿದ್ದ
ದಿವಂಗತ ಡಾ.ಜಿ.ಮಾದೇಗೌಡರ
ಸುಪುತ್ರರು, ಕ್ರಿಯಾಶೀಲ ಯುವ ನಾಯಕರು, ಭಾರತೀ ಎಜುಕೇಷನ್ ಟ್ರಸ್ಟ್ (ರಿ.) ಮತ್ತು
ಮಹಾತ್ಮಗಾಂಧೀ ಸ್ಮಾರಕ ಟ್ರಸ್ಟ್‌ನ (ರಿ.) ಅಧ್ಯಕ್ಷರಾದ
ಶ್ರೀ ಮಧು ಜಿ.ಮಾದೇಗೌಡ
ಶಾಸಕರು, ಕರ್ನಾಟಕ ವಿಧಾನ ಪರಿಷತ್, ಕರ್ನಾಟಕ ಸರ್ಕಾರ
ಅವರಿಗೆ
59ನೇ ಹುಟ್ಟುಹಬ್ಬದ
ಹಾರ್ಧಿಕ
ಶುಭಾಶಯಗಳು
ಆಶಯ್ ಜಿ.ಮಧು
ಕಾರ್ಯನಿರ್ವಾಹಕ ಟ್ರಸ್ಟಿ ಮತ್ತು ಸಿ.ಇ.ಓ, ಬಿಇಟಿ (ರಿ)
ಶುಭಕೋರುವವರು
ಪದಾಧಿಕಾರಿಗಳು ಮತ್ತು ಟ್ರಸ್ಟಿಗಳು
ಬಿ. ಬಸವರಾಜು
ಕಾರ್ಯಾಧ್ಯಕ್ಷರು
ಬಿ.ಇ.ಟಿ.(ರಿ)
ಬಿ.ಎಂ. ನಂಜೇಗೌಡ
ಕಾರ್ಯದರ್ಶಿ
ಬಿ.ಇ.ಟಿ.(ರಿ)
ಸಿದ್ದೇಗೌಡ
ಕಾರ್ಯದರ್ಶಿ
ಹನುಮಂತನಗರ ಕ್ಯಾಂಪಸ್
ಕೆ.ಬಿ. ಮಹದೇವಪ್ಪ
ಕಾರ್ಯದರ್ಶಿ
ಕಿರುಗಾವಲು ಕ್ಯಾಂಪಸ್
ಎಸ್. ಬಸವೇಗೌಡ
ಟ್ರಸ್ಟಿ
ಬಿ.ಇ.ಟಿ. (ರಿ)
ಕೆ.ಲಿಂಗೇಗೌಡ ಪಾಪಣ್ಣ
ಟ್ರಸ್ಟಿ
ಬಿ.ಇ.ಟಿ.(ರಿ)
ಮುದ್ದಯ್ಯ
ಟ್ರಸ್ಟಿ
ಬಿ.ಇ.ಟಿ. (ರಿ)
ಎಸ್.ಜಯರಾಮು
ಟ್ರಸ್ಟಿ
ಬಿ.ಇ.ಟಿ. (ರಿ)
ಭಾರತೀನಗರ ಕ್ಯಾಂಪಸ್
1. ಭಾರತೀ ಪೂರ್ವ ಪ್ರಾಥಮಿಕ ಶಾಲೆ (ಕಿಡ್‌ಜೀ)
2. ಭಾರತೀ ಹಿರಿಯ ಪ್ರಾಥಮಿಕ ಶಾಲೆ
3. ಭಾರತೀ ಆಂಗ್ಲಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ (ಎಕ್ಸಲೆನ್ಸ್)
4. ಭಾರತೀ ಪ್ರೌಢಶಾಲೆ
5. ಭಾರತೀ ಆಂಗ್ಲ ಮಾಧ್ಯಮ ಪ್ರೌಢಶಾಲೆ (ಎಕ್ಸಲೆನ್ಸ್)
6. ಭಾರತೀ ಪದವಿ ಪೂರ್ವ ಕಾಲೇಜು
7. ಭಾರತೀ ಸಂಯುಕ್ತ ಪದವಿ ಪೂರ್ವ ಕಾಲೇಜು (ಎಕ್ಸಲೆನ್ಸ್)
8. ಭಾರತೀ ಕಾಲೇಜು (ಸ್ವಾಯತ್ತ)
9. ಭಾರತೀ ಸ್ನಾತಕೋತ್ತರ (ಸ್ವಾಯತ್ತ) ಮತ್ತು ಸಂಶೋಧನಾ ಕೇಂದ್ರ
10. ಡಾ|| ಜಿ.ಮಾದೇಗೌಡ ಕಾಲೇಜ್ ಆಫ್ ಎಕ್ಸಲೆನ್ಸ್
11. ಭಾರತೀ ಶಿಕ್ಷಣ ಮಹಾವಿದ್ಯಾಲಯ
12. ಬಿ.ಇ.ಟಿ.ಪಾಲಿಟೆಕ್ನಿಕ್
13. ಜಿ.ಮಾದೇಗೌಡ ತಾಂತ್ರಿಕ ಮಹಾವಿದ್ಯಾಲಯ (ಜಿ.ಎಂ.ಐ.ಟಿ)
14. ಭಾರತೀ ಔಷಧ ವಿಜ್ಞಾನ ಮಹಾವಿದ್ಯಾಲಯ
15. ಶ್ರೀಮತಿ ಪದ್ಮ ಜಿ.ಮಾದೇಗೌಡ ಕಾಲೇಜ್ ಆಫ್ ನರ್ಸಿಂಗ್
16. ಜಿ.ಮಾದೇಗೌಡ ಕಾಲೇಜ್ ಆಫ್ ಫಿಸಿಯೋಥೆರಪಿ
17. ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್
18. ಭಾರತೀ ಐ.ಎ.ಎಸ್. ಅಕಾಡೆಮಿ
19. ಭಾರತೀ ವಸತಿ ನಿಲಯ
20. ಭಾರತೀ ಉದ್ಯೋಗಸ್ಥ ಮಹಿಳಾ ವಸತಿ ನಿಲಯ
21. ಭಾರತೀ ವಿವಿದ್ದೋದೇಶ ಸಹಕಾರ ಸಂಘ (ರಿ.)
22. ಭಾರತೀ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ರಿ.)
23. ಭಾರತೀ ಗೃಹ ನಿರ್ಮಾಣ ಸಹಕಾರ ಸಂಘ (ರಿ.)
24. ಡಾ|| ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
25. ಭಾರತೀ ಜನೌಷಧಿ ಕೇಂದ್ರ (ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ)
26. ಜಿ.ಮಾದೇಗೌಡ ಇನ್‌ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸಸ್ (ಜಿ.ಎನ್.ವೈ.ಎಸ್)
ಹನುಮಂತನಗರ ಕ್ಯಾಂಪಸ್
27. ಶ್ರೀ ಆತ್ಮಲಿಂಗೇಶ್ವರ ಪುಣ್ಯಕ್ಷೇತ್ರ
28. ಯಾತ್ರಿ ನಿವಾಸ
29. ಶ್ರೀ ಆತ್ಮಲಿಂಗೇಶ್ವರ ನಿಸರ್ಗಧಾಮ ಮತ್ತು ಮಕ್ಕಳ ರೈಲು
30. ದಾಸೋಹ ಭವನ
31. ಭಾರತಿ ವಸತಿ ಹಿರಿಯ ಪ್ರಾಥಮಿಕ ಶಾಲೆ
32. ಭಾರತೀ ವಸತಿ ಸಂಯುಕ್ತ ಪದವಿಪೂರ್ವ ಕಾಲೇಜು
33. ಪ್ರಕೃತಿ ಆರೋಗ್ಯಧಾಮ (ಪ್ರಕೃತಿ ಚಿಕಿತ್ಸಾ ಕೇಂದ್ರ)
34. ಭಾರತೀ ಈಜುಕೊಳ
ಕಿರುಗಾವಲು ಕ್ಯಾಂಪಸ್
35. ಭಾರತೀ ಪಿ.ಯು.ಕಾಲೇಜು
36. ಭಾರತೀ ಪದವಿ ಕಾಲೇಜು
37. ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಫಾರ್ಮಸುಟಿಕಲ್ ಸೈನ್ಸಸ್
38. ಜಿ.ಮಾದೇಗೌಡ ಇನ್ಸಿಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್
ಅಂಗಸಂಸ್ಥೆಗಳ ಮುಖ್ಯಸ್ಥರು
ಡಾ.ಪಿ.ನಾಗೇಂದ್ರ
ಪ್ರಾಂಶುಪಾಲರು
ಭಾರತೀ ಕಾಲೇಜು
ಪ್ರೊ. ಎಸ್.ನಾಗರಾಜು
ನಿರ್ದೇಶಕರು, ಭಾರತೀ ಸ್ನಾತಕೋತ್ತರ
ಮತ್ತು ಸಂಶೋಧನಾ ಕೇಂದ್ರ
ಡಾ. ಎಸ್.ಎಲ್.ಸುರೇಶ್
ಪ್ರಾಂಶುಪಾಲರು
ಭಾರತೀ ಶಿಕ್ಷಣ ಮಹಾವಿದ್ಯಾಲಯ
ಡಾ. ಟಿ.ತಮಿಜ್‌ಮಣಿ
ನಿರ್ದೇಶಕರು
ಭಾರತೀ ಹೆಲ್ತ್ ಸೈನ್ಸಸ್
ಡಾ.ಟಿ.ಬಾಲಸುಬ್ರಮಣ್ಯಂ
ಪ್ರಾಂಶುಪಾಲರು
ಭಾರತೀ ಔಷಧ ವಿಜ್ಞಾನ ಮಹಾವಿದ್ಯಾಲಯ
ಡಾ. ಬಿ.ಆರ್.ಚಂದನ್
ಪ್ರಾಂಶುಪಾಲರು, ಜಿ.ಮಾದೇಗೌಡ
ತಾಂತ್ರಿಕ ಮಹಾವಿದ್ಯಾಲಯ
(ಜಿ.ಎಂ.ಐ.ಟಿ)
ಜಿ.ಕೃಷ್ಣ
ಪ್ರಾಂಶುಪಾಲರು
ಬಿ.ಇ.ಟಿ.ಪಾಲಿಟೆಕ್ನಿಕ್
ಪಿ.ನಾಗಮಾದಯ್ಯ
ಪ್ರಾಂಶುಪಾಲರು
ಭಾರತೀ ಪದವಿ ಪೂರ್ವ ಕಾಲೇಜು
ಸಿ.ವಿ.ಮಲ್ಲಿಕಾರ್ಜುನ
ಪ್ರಾಂಶುಪಾಲರು, ಭಾರತೀ ಸಂಯುಕ್ತ
ಪದವಿ ಪೂರ್ವ ಕಾಲೇಜು (ಎಕ್ಸಲೆನ್ಸ್)
ಪಿ.ರಾಜೇಂದ್ರ ರಾಜೇ ಅರಸ್
ಮುಖ್ಯೋಪಾಧ್ಯಾಯರು
ಭಾರತೀ ಪ್ರೌಢಶಾಲೆ
ಹೆಚ್.ಪಿ.ಪ್ರತಿಮಾ
ಮುಖ್ಯೋಪಾಧ್ಯಾಯರು,ಭಾರತೀ ಆಂಗ್ಲಮಾಧ್ಯಮ
ಹಿರಿಯ ಪ್ರಾಥಮಿಕ ಪಾಠಶಾಲೆ (ಎಕ್ಸಲೆನ್ಸ್)
ಹೆಚ್.ರಮೇಶ್
ಮುಖ್ಯೋಪಾಧ್ಯಾಯರು
ಭಾರತೀ ಹಿರಿಯ ಪ್ರಾಥಮಿಕ ಪಾಠಶಾಲೆ
ಮಹೇಶ್ ಜಿ.ಲೋಣಿ
ಪ್ರಾಂಶುಪಾಲರು, ಶ್ರೀಮತಿ ಪದ್ಮ
ಜಿ.ಮಾದೇಗೌಡ ಕಾಲೇಜ್ ಆಫ್ ನರ್ಸಿಂಗ್
ಕೆ.ಎಂ.ಮಹೇಂದ್ರ
ಪ್ರಾಂಶುಪಾಲರು, ಜಿ.ಮಾದೇಗೌಡ
ಇನ್ಸಿಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್
ಮಂಜು ಎಂ.ಜೇಕಬ್
ಪ್ರಾಂಶುಪಾಲರು, ಜಿ.ಮಾದೇಗೌಡ
ಕಾಲೇಜ್ ಆಫ್ ಫಿಸಿಯೋಥೆರಪಿ
ಜಗದೀಶ್
ಪ್ರಾಂಶುಪಾಲರು,ಜಿ.ಮಾದೇಗೌಡ
ಇನ್ಸಿಟಿಟ್ಯೂಟ್ ಆಫ್
ಫಾರ್ಮಸುಟಿಕಲ್ ಸೈನ್ಸಸ್, ಕಿರುಗಾವಲು
ಜಿ.ಎನ್.ಜಗದೀಶ್
ನಿಲಯ ಪಾಲಕರು
ಭಾರತೀ ವಸತಿ ನಿಲಯ
ಟಿ.ಪ್ರಮೀಳಾ
ನಿಲಯ ಪಾಲಕರು
ಭಾರತೀ ಉದ್ಯೋಗಸ್ಥ
ಮಹಿಳಾ ವಸತಿ ನಿಲಯ
ಕೆ.ಹೆಚ್.ಪ್ರಸನ್ನಕುಮಾರ್
ಸಂಯೋಜಕರು
ಭಾರತೀ ಐಎಎಸ್ ಅಕಾಡೆಮಿ
ಪುಟ್ಟಸ್ವಾಮಿ
ಪ್ರಾಂಶುಪಾಲರು, ಭಾರತೀ ವಸತಿ
ಸಂಯುಕ್ತ ಪದವಿಪೂರ್ವ
ಕಾಲೇಜು, ಹನುಮಂತನಗರ
ಡಾ.ಜಿ.ಶಾಂತಕುಮಾರ್
ಪ್ರಾಂಶುಪಾಲರು, ಜಿ.ಮಾದೇಗೌಡ
ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸಸ್
(ಜಿ.ಎನ್.ವೈ.ಎಸ್)
ಕೆ.ಎಸ್.ಗೋಪಾಲಕೃಷ್ಣ
ಪ್ರಾಂಶುಪಾಲರು,
ಭಾರತೀ ಕಾಲೇಜು, ಕಿರುಗಾವಲು
ಪುಟ್ಟಲಿಂಗಯ್ಯ
ಪ್ರಾಂಶುಪಾಲರು
ಭಾರತೀ ಪಿ.ಯು.ಕಾಲೇಜು
ಅಂಗಸಂಸ್ಥೆಗಳ ಬೋಧಕರು, ಬೋಧಕೇತರರು ಹಾಗೂ ವಿದ್ಯಾರ್ಥಿ ವೃಂದ.ಭಾರತಿ ಎಜುಕೇಷನ್ ಟ್ರಸ್ಟ್ (ರಿ)
8105367007

ಮೈಸೂರಲ್ಲಿ ಶ್ರದ್ಧಾಭಕ್ತಿಯ ವೈಕುಂಠ ಏಕಾದಶಿ

ವೆಂಕಟೇಶ್ವರಸ್ವಾಮಿ ದೇವಾಲಯಗಳಲ್ಲಿ ವಿಶೇಷ ವೈಕುಂಠ ದ್ವಾರ ನಿರ್ಮಾಣ

ಇನ್ನಿತರೆ ದೇವಾಲಯಗಳಲ್ಲೂ ವೈಕುಂಠ ಏಕಾದಶಿ ವಿಶೇಷ ಪೂಜೆ

ಒಂಟಿಕೊಪ್ಪಲಿನ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಭಕ್ತ ಸಾಗರ

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಒಂಟಿಕೊಪ್ಪಲಿನ ಶ್ರೀ ಲಕ್ಷ್ಮೀ ವೆಂಕಟ ರಮಣ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ವಿಶೇಷ ಪೂಜಾ ಕಾರ್ಯ ವಿಜೃಂಭಣೆಯಿಂದ ನೆರವೇರಿತು. ಪ್ರತಿ ವರ್ಷವೂ ಈ ದೇವಾಲಯದಲ್ಲಿ ವೈಕುಂಠ ಏಕಾದಶಿಯ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಲಿದ್ದು, ಅಪಾರ ಸಂಖ್ಯೆಯ ಭಕ್ತವೃಂದ ದೇವರ ದರ್ಶನ ಪಡೆಯಿತು. ದೇವಾಲಯದ ಪ್ರವೇಶ ದ್ವಾರದ ಬಳಿ ವೈಕುಂಠ ದ್ವಾರ ನಿರ್ಮಿಸಲಾಗಿತ್ತು. ಅಲ್ಲದೆ ವೆಂಕಟೇಶ್ವರ ಮೂರ್ತಿಗೂ ಹೂವಿನ ಅಲಂಕಾರ ಮಾಡಲಾಗಿತ್ತು.





ಮೈಸೂರು, ಡಿ.23(ಎಂಟಿವೈ)– ಮೈಸೂರಿನ ವಿವಿಧೆಡೆಯಿರುವ ವೆಂಕಟೇಶ್ವರ ಸ್ವಾಮಿ ದೇವಾಲಯಗಳಲ್ಲಿ ಶನಿವಾರ ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ವಿಶೇಷ ಪೂಜಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ದೇವಾಲಯಗಳಲ್ಲಿ ನಿರ್ಮಿಸಿದ್ದ ವೈಕುಂಠ ದ್ವಾರದ ಮೂಲಕ ಅಪಾರ ಸಂಖ್ಯೆಯ ಭಕ್ತರು ದೇವಾಲಯ ಪ್ರವೇಶಿಸಿ ಭಕ್ತಿಯಿಂದ ನಮಿಸಿ, ಪ್ರಾರ್ಥನೆ ಸಲ್ಲಿಸಿದರು.

ಹಿಂದೂ ಸಂಪ್ರದಾಯದಲ್ಲಿ ವೈಕುಂಠ ಏಕಾದಶಿ ದಿನದಂದು ವೆಂಕಟೇಶ್ವರ ದೇವಾಲಯಕ್ಕೆ ತೆರಳಿ ದೇವರ ದರ್ಶನ ಪಡೆದರೆ ಒಳಿತಾಗಲಿದೆ ಎಂಬ ಪ್ರತೀತಿ ಇದ್ದು, ಈ ಹಿನ್ನೆಲೆಯಲ್ಲಿ ಭಕ್ತರಿಗಾಗಿ ವೆಂಕಟೇಶ್ವರನ ಎಲ್ಲಾ ದೇವಾಲಯಗಳಲ್ಲಿ ವೈಕುಂಠ ದ್ವಾರ ನಿರ್ಮಿಸಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ಬೆಳಗ್ಗೆಯಿಂದಲೇ ಮೈಸೂರಿನ ವೆಂಕಟೇಶ್ವರನ ದೇವಾಲಯಗಳು, ಇಸ್ಕಾನ್ ದೇವಾಲಯ, ಯೋಗನರಸಿಂಹ ಸ್ವಾಮಿ ದೇವಾಲಯದಲ್ಲಿ ವೈಕುಂಠ ದ್ವಾರ ನಿರ್ಮಿಸಿ, ದೇವಾಲಯವನ್ನು ಹೂವಿನಿಂದ ಅಲಂಕಾರ ಮಾಡಲಾಗಿತ್ತು. ಮುಂಜಾನೆಯಿಂದಲೇ ಭಕ್ತರು ದೇವಾಲಯಕ್ಕೆ ಬಂದು ದೇವರ ದರ್ಶನ ಪಡೆದು ಪುನೀತರಾದರು.

ಗಣಪತಿ ಸಚ್ಚಿದಾನಂದ ಆಶ್ರಮ: ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ವೈಕುಂಠ ಏಕಾದಶಿಯ ಪೂಜಾ ಸಂಭ್ರಮ ಮನೆ ಮಾಡಿತ್ತು. ದೇವಾಲಯವನ್ನು ಅಲಂಕರಿಸಿ, ವೈಕುಂಠ ದ್ವಾರ ರೂಪಿಸಲಾಗಿತ್ತು. ಈ ದ್ವಾರದ ಮೂಲಕ ದೇವಾಲಯ ಪ್ರವೇಶಿಸಲು ಅಪಾರ ಸಂಖ್ಯೆಯ ಭಕ್ತರು ವಿವಿಧೆಡೆಯಿಂದ ಆಗಮಿಸಿದ್ದರು. ಬೆಳಗ್ಗಿನಿಂದ ರಾತ್ರಿವರೆಗೂ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಇಷ್ಟಾರ್ಥಸಿದ್ಧಿಗಾಗಿ ಪ್ರಾರ್ಥಿಸಿದರು.

ಶ್ರೀಗಳಿಂದ ಆಶೀರ್ವಚನ : ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವೈಕುಂಠ ಏಕಾದಶಿಯ ಪ್ರವಚನ ನೀಡಿ, ಉತ್ತರ ದ್ವಾರ ದರ್ಶನ ಎಂದರೆ ಪಿತೃ ದೇವತೆಗಳು ಮತ್ತು ಮಹಾತ್ಮರೆಲ್ಲರೂ ಕಾಯುತ್ತಿರುವ ದಿನ, ಸ್ವಾಮಿ ಯೋಗದಿಂದ ಕೂಡಿರುವ ದಿನವೂ ಆಗಿದೆ. ಉತ್ತರ ದ್ವಾರ ದರ್ಶನ ಎಂದರೆ ಸ್ವಾಮಿಯು ಯೋಗ ಮುಗಿಸಿ ಬಾಗಿಲು ತೆರೆಯುವ ದಿನವಾಗಿದೆ. ಇದು ಅತ್ಯಂತ ಪವಿತ್ರ ದಿನ. ಇಂತಹ ದಿನ ಭಗವಂತನ ಧ್ಯಾನ ಮಾಡುತ್ತಾ, ಮನೆ ದೇವರನ್ನು ಸ್ಮರಿಸಿ, ಗೋವಿಂದ ನಾಮಸ್ಮರಣೆ ಮಾಡುತ್ತಾ ಧ್ಯಾನ ಮಾಡಿದರೆ ಭಗವಂತ ನಮಗೆ ಜೀವನದ ದಾರಿ ತೋರುತ್ತಾರೆ ಎಂಬ ನಂಬಿಕೆ ಇದೆ ಎಂದರು.

ಭಗವಂತನ ನಾಮಸ್ಮರಣೆಯೊಂದಿಗೆ ಪ್ರಾಣಿ ಪಕ್ಷಿಗಳಿಗೆ ಮತ್ತು ಬಡ ಜನರಿಗೆ ಸ್ವಲ್ಪವಾದರೂ ಅನ್ನದಾನ ಮಾಡಿದರೆ ಸಕಲ ಶುಭ, ಸಕಲ ಮಂಗಳ ಪ್ರಾಪ್ತವಾಗುತ್ತದೆ. ಕನ್ನಡ ನಾಡಿನ ಇಡೀ ಪ್ರಜೆಗಳಿಗೆ ದೇವರು ಆರೋಗ್ಯ ಭಾಗ್ಯ ಕೊಟ್ಟು ಕಾಪಾಡಲಿ ಈ ವೈಕುಂಠ ಏಕಾದಶಿಯ ಶುಭದಿನ ಎಲ್ಲರಿಗೂ ಒಳಿತಾಗಲಿ. ನಮ್ಮಲ್ಲಿ ನಾಲ್ಕೈದು ಕಡೆ ವೆಂಕಟರಮಣ ಸ್ವಾಮಿ ಸ್ಥಾಪನೆ ಮಾಡಿದ್ದೇವೆ. ಆದರೂ ಈ ಬಾರಿ ಮೈಸೂರಿನಲ್ಲಿ ನಾವು ಇರಬೇಕೆಂಬ ಸಂಕಲ್ಪ ಆಗಿರುವುದರಿಂದ ಈ ವರ್ಷ ಮೈಸೂರಿನಲ್ಲೇ ಇದ್ದು ಸ್ವಾಮಿಯ ಉತ್ತರ ದ್ವಾರದರ್ಶನ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಯೋಗ ನರಸಿಂಹಸ್ವಾಮಿ ದೇವಾಲಯ: ಮೈಸೂರಿನ ವಿಜಯನಗರದಲ್ಲಿರುವ ಯೋಗನರಸಿಂಹ ಸ್ವಾಮಿ ದೇವಾಲಯದಲ್ಲೂ ವೈಕುಂಠ ಏಕಾದಶಿಯ ವಿಶೇಷ ಪೂಜಾ ಮಹೋತ್ಸವ ಜರುಗಿತು. ದೇವಾಲಯವನ್ನು ಅಲಂಕಾರ ಮಾಡಿ, ವೈಕುಂಠ ದ್ವಾರ ನಿರ್ಮಿಸಲಾಗಿತ್ತು. ಉತ್ತರ ದ್ವಾರದ ಮೂಲಕ ದೇವಾಲಯ ಪ್ರವೇಶಿಸಲು ಭಕ್ತರು ಸಾಲುಗಟ್ಟಿ ನಿಂತಿದ್ದರು. ದೇವಾಲಯದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿ, ದೇವಾಲಯದ ಆಡಳಿತಾಧಿಕಾರಿ ಶ್ರೀನಿವಾಸ್ ಸೇರಿದಂತೆ ಇನ್ನಿತರರು ವೈಕುಂಠ ಏಕಾದಶಿ ಪೂಜಾ ಮಹೋತ್ಸವದಲ್ಲಿ ಪಾಲ್ಗೊಂಡು ಯೋಗ ನರಸಿಂಹ ಸ್ವಾಮಿಗೆ ಪೂಜೆ ಸಲ್ಲಿಸಿದರು.

ಇಸ್ಕಾನ್ ಮಂದಿರದಲ್ಲಿ ಸಂಭ್ರಮ: ಮೈಸೂರಿನ ಜಯನಗರದಲ್ಲಿರುವ ಇಸ್ಕಾನ್‌ನಲ್ಲಿ ವೈಕುಂಠ ಏಕಾದಶಿ ಅಂಗವಾಗಿ ವೈಕುಂಠ ದ್ವಾರ ನಿರ್ಮಿಸಿ, ವಿವಿಧ ಧಾರ್ಮಿಕ ಕಾರ್ಯಕ್ರಮ ನೆರವೇರಿತು. ಬೆಳಗ್ಗೆ 6.30ಕ್ಕೆ ವೈಕುಂಠ ದ್ವಾರ ಪೂಜೆ ನೆರವೇರಿಸಲಾಯಿತು. ನಂತರ ವೈಕುಂಠ ದ್ವಾರ ಪ್ರವೇಶಿಸಿದ ಭಕ್ತರು ಕೃಷ್ಣ ಬಲರಾಮರ ದರ್ಶನ ದರ್ಶನ ಪಡೆದರು. ಬೆಳಗ್ಗೆ 7.15ಕ್ಕೆ ಶೃಂಗಾರ ಆರತಿ ಮಾಡಲಾಯಿತು. ಬೆಳಗ್ಗೆ 8.30ಕ್ಕೆ ಮಂದಿರದ ಆವರಣದಲ್ಲಿ ಪಲ್ಲಕ್ಕಿ ಉತ್ಸವ ನೆರವೇರಿಸಲಾಯಿತು. ಇಸ್ಕಾನ್ ಪ್ರಧಾನ ವ್ಯವಸ್ಥಾಪಕ ಪಂಕಜಾಂಘ್ರಿ ದಾಸ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಭಕ್ತರಿಗೆ ಲಾಡು ವಿತರಣೆ: ಮೈಸೂರಿನ ಕಲ್ಯಾಣಗಿರಿ ರಾಜಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಪೂಜೆ ಏರ್ಪಡಿಸಲಾಗಿತ್ತು. ದೇವಾಲಯದಲ್ಲಿ ತೋಮಲೆ ಸೇವೆ ಹಾಗೂ ವೆಂಕಟರಮಣ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ದೇವಾಲಯಕ್ಕೆ ಬಂದ ಭಕ್ತರಿಗೆ ಲಾಡು ವಿತರಿಸಲಾಯಿತು. ದೇವಾಲಯದ ಸಂಸ್ಥಾಪಕ ಹೆಚ್.ಜಿ.ಗಿರಿಧರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.


ವಿವಿಧೆಡೆ ಪೂಜೆ: ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಮಂಜುನಾಥ ಸ್ವಾಮಿ ದೇವಾಲಯ, ಕುವೆಂಪುನಗರ, ಮಂಡಿಮೊಹಲ್ಲಾ ಸೇರಿದಂತೆ ವಿವಿಧೆಡೆ ಇರುವ ವೆಂಕಟೇಶ್ವರ ದೇವಾಲಯಗಳಲ್ಲಿ ವೈಕುಂಠ ದ್ವಾರ ನಿರ್ಮಿಸಿ, ವೈಕುಂಠ ಏಕಾದಶಿಯ ವಿಶೇಷ ಪೂಜಾ ಮಹೋತ್ಸವ ಆಯೋಜಿಸಲಾಗಿತ್ತು. ಬಹುತೇಕ ಎಲ್ಲಾ ದೇವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ದರ್ಶನ ಪಡೆದು ಸಂಭ್ರಮಿಸಿದರು.




ಯೋಗ ನರಸಿಂಹಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಪ್ರೊ.ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ನಡೆಯಿತು.



ಮೈಸೂರಿನ ಜಯನಗರದ ಶ್ರೀರಾಮ ಮಂದಿರದಲ್ಲಿ ಭಕ್ತಿ ಭಾವದಿಂದ ವೈಕುಂಠ ಏಕಾದಶಿಯನ್ನು ಆಚರಿಸಲಾಯಿತು. ಬೆಳಗ್ಗೆಯಿಂದ ರಾತ್ರಿವರೆಗೂ ಭಕ್ತರು ಭೇಟಿ ನೀಡಿ, ದೇವರ ದರ್ಶನ ಪಡೆದರು.





ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವೈಕುಂಠ ಏಕಾದಶಿಯ ಪ್ರವಚನ ನೀಡಿದರು.

ಬಿಜೆಪಿ ರಾಜ್ಯ ಘಟಕ ಪುನರ್ರಚನೆ

ನಿರಾಣಿ, ಭೈರತಿ ಬಸವರಾಜ್, ಹರತಾಳು ಹಾಲಪ್ಪ, ರಾಜೇಂದ್ರ ಇತರರು ಉಪಾಧ್ಯಕ್ಷರು; ಪ್ರೀತಮ್‌ಗೌಡ ಪ್ರಧಾನ ಕಾರ್ಯದರ್ಶಿ

ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಗಿ ರಘು ಕೌಟಿಲ್ಯ, ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾಗಿ ಅನಿಲ್ ಥಾಮಸ್ ನೇಮಕ



ಎಂ.ರಾಜೇಂದ್ರ



ರಘು ಕೌಟಿಲ್ಯ



ಅನಿಲ್ ಥಾಮಸ್



ಜೆ.ಪ್ರೀತಂಗೌಡ



ಲಕ್ಷ್ಮಿ ಗೌಡ



ಎನ್.ಮಹೇಶ್

ಬೆಂಗಳೂರು, ಡಿ.23(ಕೆಎಂಶಿ)– ಬಿಜೆಪಿ ರಾಜ್ಯ ಘಟಕವನ್ನು ವರಿಷ್ಠರು ಪುನಾರಚನೆ ಮಾಡಿದ್ದು, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಬೆಂಬಲಿಗರಿಗೆ ಸಿಂಹಪಾಲು ದೊರೆತಿದೆ.

ಈ ಮೂಲಕ ಯಡಿಯೂರಪ್ಪ ಕರ್ನಾಟಕದ ಮಟ್ಟಿಗೆ ಪಕ್ಷದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದಂತಾಗಿದೆ. ತಮ್ಮ ಪುತ್ರ ಬಿ.ವೈ.ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ನೇಮಕವಾದ ಕೆಲವೇ ದಿನಗಳಲ್ಲಿ ತಮ್ಮ ಜೊತೆ ಗುರುತಿಸಿಕೊಂಡಿರುವ ಹಿರಿಯ ಶಾಸಕ ಆರ್.ಅಶೋಕ್ ಅವರನ್ನು ವಿಧಾನಸಭೆಯ ಪ್ರತಿಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡುವಲ್ಲಿ ಬಿಎಸ್‌ವೈ ಯಶಸ್ವಿಯಾಗಿದ್ದರು. ಇದೀಗ ಪದಾಧಿಕಾರಿಗಳ ಪಟ್ಟಿಯಲ್ಲೂ ಮೇಲುಗೈ ಸಾಧಿಸಿದ್ದಾರೆ. ವಿಜಯೇಂದ್ರ ಅಧ್ಯಕ್ಷರಾದ ನಂತರ ಕಳೆದ ಎರಡು ದಿನಗಳ ಹಿಂದಷ್ಟೇ ದೆಹಲಿಗೆ ತೆರಳಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಷಾ, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ, ಪದಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಚರ್ಚಿಸಿ ತಾವು ಸಿದ್ಧಪಡಿಸಿದ ಪಟ್ಟಿಯನ್ನು ಸಲ್ಲಿಸಿ ಬಂದಿದ್ದರು. ದೆಹಲಿಯಿಂದ ಹಿಂದಿರುಗುತ್ತಿದ್ದಂತೆ ವರಿಷ್ಠರು ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಮಾಡಿದ್ದಾರೆ.

ನೂತನ ಪದಾಧಿಕಾರಿಗಳು: ರಾಜ್ಯ ಉಪಾಧ್ಯಕ್ಷರಾಗಿ ಮುರುಗೇಶ್ ನಿರಾಣಿ, ಭೈರತಿ ಬಸವರಾಜ್, ರಾಜುಗೌಡ ನಾಯಕ್, ಎನ್.ಮಹೇಶ್, ಅನಿಲ್ ಬೆನಕೆ, ಹರತಾಳು ಹಾಲಪ್ಪ, ಶ್ರೀಮತಿ ರೂಪಾಲಿ ಸಂತೋಷ್ ನಾಯಕ್, ಡಾ.ಬಸವರಾಜು ಕೇಲಗಾರ, ಶ್ರೀಮತಿ ಮಾಳವಿಕಾ ಅವಿನಾಶ್ ಹಾಗೂ ಎಂ.ರಾಜೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾಗಿ ವಿ.ಸುನೀಲ್ ಕುಮಾರ್, ಪಿ.ರಾಜೀವ್, ಎನ್.ಎಸ್.ನಂದೀಶ್ ರೆಡ್ಡಿ ಹಾಗೂ ಜೆ.ಪ್ರೀತಮ್‌ಗೌಡ, ರಾಜ್ಯ ಕಾರ್ಯದರ್ಶಿಗಳಾಗಿ ಶೈಲೇಂದ್ರ ಬೆಲ್ದಾಳೆ, ಡಿ.ಎಸ್.ಅರುಣ್, ಬಸವರಾಜ ಮತ್ತೀಮೋಡ್, ಸಿ.ಮುನಿರಾಜು, ವಿನಯ್ ಬಿದರೆ, ಕ್ಯಾಪ್ಟನ್ ಬ್ರಿಜೇಶ್ ಚೌಟ, ಶರಣು ತಳ್ಳಿಕೇರಿ, ಕು.ಲಲಿತಾ ಅನಾಪುರ, ಡಾ.ಲಕ್ಷ್ಮೀಅಶ್ವಿನ್‌ಗೌಡ ಹಾಗೂ ಶ್ರೀಮತಿ ಅಂಬಿಕಾ ಹುಲಿನಾಯ್ಕರ್, ರಾಜ್ಯ ಖಜಾಂಚಿಯಾಗಿ ಸುಬ್ಬನರಸಿಂಹ ನೇಮಕಗೊಂಡಿದ್ದಾರೆ.

ವಿವಿಧ ಮೋರ್ಚಾ ಅಧ್ಯಕ್ಷರು: ಹಿಂದುಳಿದ ವರ್ಗಗಳ ಮೋರ್ಚಾಗೆ ರಘು ಕೌಟಿಲ್ಯ, ಅಲ್ಪಸಂಖ್ಯಾತ ಮೋರ್ಚಾಗೆ ಅನಿಲ್ ಥಾಮಸ್, ಮಹಿಳಾ ಮೋರ್ಚಾಗೆ ಕು.ಸಿ.ಮಂಜುಳಾ, ಯುವ ಮೋರ್ಚಾಗೆ ಧೀರಜ್ ಮುನಿರಾಜು, ಎಸ್.ಟಿ. ಮೋರ್ಚಾಗೆ ಬಂಗಾರು ಹನುಮಂತು, ಎಸ್‌ಸಿ ಮೋರ್ಚಾಗೆ ಎಸ್.ಮಂಜುನಾಥ್ (ಸಿಮೆಂಟ್ ಮಂಜು) ಹಾಗೂ ರೈತ ಮೋರ್ಚಾಗೆ ಎ.ಎಸ್.ಪಾಟೀಲ್ ನಡಹಳ್ಳಿ ಅಧ್ಯಕ್ಷರನ್ನಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಘೋಷಿಸಿದ್ದಾರೆ.

ಹಿಜಾಬ್‌ಗೆ ಮತ್ತೆ ಅವಕಾಶದ ಭರವಸೆ

ಸಿಎಂ ಸಿದ್ದರಾಮಯ್ಯರಿಂದ ಸಮಾಜ ಒಡೆಯುವ, ಧರ್ಮಗಳ ನಡುವೆ ವಿಷ ಬೀಜ ಬಿತ್ತುವ ಕೆಲಸ

● ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಕ್ರೋಶ ● ಕಾಂಗ್ರೆಸ್ ತುಷ್ಟೀಕರಣ ಅನುಸರಿಸುತ್ತಿದೆ

ಬೆಂಗಳೂರು, ಡಿ.23(ಕೆಎಂಶಿ)– ಹಿಜಾಬ್‌ಗೆ ಮತ್ತೆ ಅವಕಾಶ ಮಾಡಿಕೊಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುವ ಮೂಲಕ ಸಮಾಜಗಳನ್ನು ಒಡೆಯುವ ಮತ್ತು ಧರ್ಮಗಳ ನಡುವೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.



ಹಿಜಾಬ್ ವಿಚಾರದಲ್ಲಿ ಮುಖ್ಯಮಂತ್ರಿ ಬೇಜವಾಬ್ದಾರಿ ಹೇಳಿಕೆ ನೀಡಿದ್ದು, ಕನಿಷ್ಠ ಶಾಲಾ–ಕಾಲೇಜು ಮಕ್ಕಳನ್ನಾದರೂ ರಾಜಕೀಯದಿಂದ ದೂರ ಇಡುವ ಕೆಲಸ ಮಾಡಬೇಕಿತ್ತು ಎಂದರು. ಹಿಜಾಬ್‌ಗೆ ಅವಕಾಶ ಮಾಡಿಕೊಡುವುದಾಗಿ ಹೇಳುವ ಸರ್ಕಾರ ಈ ಹಿಂದೆ ಅಧಿಕಾರದಲ್ಲಿದ್ದಾಗ ಪರೀಕ್ಷಾ ಕೊಠಡಿ ಪ್ರವೇಶಿಸುವ ಮುನ್ನ ವಿದ್ಯಾರ್ಥಿನಿಯರು ಹಾಗೂ ತಾಯಂದಿರು ತಾಳಿ, ಕಾಲುಂಗುರ ತೆಗೆದಿಟ್ಟು ಹೋಗುವಂತೆ ಸೂಚಿಸಿತ್ತು, ಇಂತಹ ನಡವಳಿಕೆ ತಲೆ ತಗ್ಗಿಸುವಂಥದ್ದು, ಬಿಜೆಪಿ ಇದನ್ನು ಬಲವಾಗಿ ಖಂಡಿಸುತ್ತದೆ ಎಂದರು.

ಕಾಂಗ್ರೆಸ್ ತುಷ್ಟೀಕರಣ ನೀತಿ ಅನುಸರಿಸುತ್ತಿದೆ, ಸ್ವಾತಂತ್ರ್ಯ ನಂತರ 60 ವರ್ಷಗಳ ಕಾಲ ದೇಶ ಹಾಗೂ ರಾಜ್ಯ ಆಳಿದರೂ, ಶೇ. 50ರಷ್ಟು ಅಲ್ಪಸಂಖ್ಯಾತರು ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಶೇ.60ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ ಬಂಧುಗಳು ಇಂದಿಗೂ ರಾಜ್ಯ ಮತ್ತು ದೇಶದಲ್ಲಿ ನಿರುದ್ಯೋಗಿಗಳಾಗಿರುವುದಕ್ಕೆ ಹೊಣೆ ಯಾರು. ಅಲ್ಪಸಂಖ್ಯಾತರನ್ನು ಮತ ಬ್ಯಾಂಕ್ ಆಗಿ ಕಾಂಗ್ರೆಸ್ ದುರುಪಯೋಗಪಡಿಸಿಕೊಂಡಿದೆಯೇ ಹೊರತು, ಅವರ ಶಿಕ್ಷಣಕ್ಕೆ ಒತ್ತು ಕೊಟ್ಟು ಆರ್ಥಿಕವಾಗಿ ಮೇಲೆತ್ತುವ ಕಾರ್ಯ ಮಾಡಲೇ ಇಲ್ಲ. ಅಲ್ಪಸಂಖ್ಯಾತರ ಕುರಿತು ಕೇವಲ ಭಾಷಣ ಮಾಡುತ್ತೀರಿ, ಅವರಿಗಾಗಿ ಯೋಜನೆ ರೂಪಿಸುವ ಮೂಲಕ ಮೇಲೆತ್ತಿದ್ದೀರಾ ಎಂದು ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದ್ದಾರೆ. ರಾಜ್ಯದಲ್ಲಿ ಭೀಕರ ಬರಗಾಲವಿದೆ, ರೈತರ ಸಂಕಷ್ಟಕ್ಕೆ ಸ್ಪಂದಿಸದೆ, ಬೇಜವಾಬ್ದಾರಿ ಹೇಳಿಕೆ ನೀಡುವ ಮೂಲಕ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಕ್ಷೇತ್ರ ಗೆಲ್ಲುವ ಕನಸು ಕಾಣುತ್ತಿದೆ ಎಂದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿಯೊಬ್ಬ ಅಲ್ಪಸಂಖ್ಯಾತ ಮಹಿಳೆ ಗೌರವ, ಸ್ವಾಭಿಮಾನದಿಂದ ಬದುಕಬೇಕೆಂಬ ದೃಷ್ಟಿಕೋನದಿಂದ ತ್ರಿವಳಿ ತಲಾಖ್ ರದ್ದು ಮಾಡಿದರು.

ಪಂಚರಾಜ್ಯಗಳ ಚುನಾವಣೆ ಫಲಿತಾಂಶ ದೇಶದ ಪ್ರಜ್ಞಾವಂತ ಮತದಾರರು, ಕಾಂಗ್ರೆಸ್‌ನ ಗ್ಯಾರಂಟಿ ನಂಬದೆ, ಮೋದಿ ಅವರ ಮೇಲೆ ವಿಶ್ವಾಸ ಇಟ್ಟಿರುವುದು ರುಜುವಾತಾಗಿದೆ. ಈ ಹತಾಶೆಯಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ಶಿಕ್ಷಣ ಕ್ಷೇತ್ರವನ್ನು ಕಲುಷಿತಗೊಳಿಸುವ ಕೆಲಸಕ್ಕೆ ಕೈಹಾಕಿರುವುದು ನಾಡಿನ ದುರದೃಷ್ಟ ಮತ್ತು ಖಂಡನೀಯ ಎಂದರು.

ಕಾಂಗ್ರೆಸ್‌ಗೆ ಲಕ್ಷ್ಮೀ ಬಲವಿದ್ದರು ಆಪರೇಷನ್ ಹಸ್ತ ದಾಹ ತೀರಿಲ್ಲ

ಲೋಕಸಭಾ ಚುನಾವಣೆ ಗೆಲ್ಲಲು ಬಿಜೆಪಿಯ ಸಿ.ಟಿ. ರವಿ, ಅರವಿಂದ ಲಿಂಬಾವಳಿ ಇತರೆ ಪ್ರಭಾವಿ ನಾಯಕರಿಗೆ ಗಾಳ

ಬೆಂಗಳೂರು, ಡಿ.23(ಕೆಎಂಶಿ)– ನೂರಾಮೂವತ್ತಾರು ಶಾಸಕರು ಸೇರಿದಂತೆ ಮಾಜಿ ಸಚಿವರು, ಶಾಸಕರು, ಮುಖಂಡರಿಂದ ಕಾಂಗ್ರೆಸ್ ತುಂಬಿ ತುಳುಕುತ್ತಿದ್ದರೂ ರಾಜ್ಯ ನಾಯಕರಿಗೆ ಆಪರೇಷನ್ ಹಸ್ತದ ದಾಹ ಇಂಗಿಲ್ಲ.

ಪಕ್ಷದ ಪ್ರಭಾವೀ ಸಚಿವರು ಮಧ್ಯವರ್ತಿಗಳನ್ನು ಬಿಟ್ಟು ಅನ್ಯ ಪಕ್ಷಗಳ ಮುಖಂಡರುಗಳಿಗೆ ಹಸ್ತದ ಗಾಳ ಹಾಕುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲೇ ಅಧಿಕಾರದಿಂದ ವಂಚಿತರಾದ, ವಿಧಾನಸಭೆ ಮತ್ತು ಪರಿಷತ್ತಿನ ಶಾಸಕ ಮುಖಂಡರ ದಂಡೇ ಇದ್ದರೂ, ಅನ್ಯ ಪಕ್ಷಗಳಿಂದ ಸೆಳೆಯುತ್ತಿರುವ ನಾಯಕರಿಗೆ ಅಧಿಕಾರ ಮತ್ತು ಇತರೆ ಆಮಿಷಗಳನ್ನು ನೀಡುತ್ತಿದ್ದಾರೆ.

ಆರ್‌ಎಸ್‌ಎಸ್, ಎಬಿವಿಪಿಯಲ್ಲಿ ಹಲವು ಸಮಯದಿಂದ ದುಡಿದು ಬಿಜೆಪಿಯಲ್ಲಿ ಅಧಿಕಾರದ ಹುದ್ದೆ ಹೊಂದಿದ್ದ ಮಾಜಿ ಸಚಿವರಾದ ಸಿ.ಟಿ.ರವಿ ಹಾಗೂ ಅರವಿಂದ ಲಿಂಬಾವಳಿ ಅವರನ್ನೂ ಈ ಪ್ರಭಾವೀ ನಾಯಕ ಬಿಟ್ಟಿಲ್ಲ. ಲಿಂಬಾವಳಿ ಅವರನ್ನು ಕೋಲಾರದಿಂದಲೂ, ರವಿ ಅವರಿಗೆ ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಮುಂದಿನ ಚುನಾವಣೆಯಲ್ಲಿ ಕಣಕ್ಕಿಳಿಸುವ ಮತ್ತು ಚುನಾವಣಾ ವೆಚ್ಚ ಭರಿಸುವ ಆಮಿಷಗಳನ್ನೂ ಒಡ್ಡಿದ್ದಾರಂತೆ.

ರಾಜ್ಯ ಬಿಜೆಪಿಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಸಲು ಅಭ್ಯರ್ಥಿಗಳ ಕೊರತೆ ಇದೆ. ಇಂತಹುದೇ ಪರಿಸ್ಥಿತಿ ಕಾಂಗ್ರೆಸ್‌ನಲ್ಲೂ ಇದೆ. ಅಭ್ಯರ್ಥಿಗಳ ಆಯ್ಕೆ ಜೊತೆಗೆ ಪ್ರತಿ ಲೋಕಸಭಾ ಕ್ಷೇತ್ರದಲ್ಲೂ ಮತ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಇರಾದೆಯೂ ಕಾಂಗ್ರೆಸ್‌ಗೆ ಇದೆ.

ಚುನಾವಣೆಯಲ್ಲಿ 28 ಕ್ಷೇತ್ರಗಳ ಪೈಕಿ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲ್ಲಲೇಬೇಕು ಎಂಬ ಕಾರಣಕ್ಕಾಗಿ ಅನ್ಯ ಪಕ್ಷಗಳ ಮುಖಂಡರನ್ನು ಸೆಳೆಯುವ ತಂತ್ರಕ್ಕೆ ಮತ್ತೆ ಚಾಲನೆ ಕೊಟ್ಟಿದ್ದಾರೆ.

ದೆಹಲಿಯ ನಾಯಕರೊಂದಿಗೆ ಚರ್ಚಿಸಿ ಹಿಂತಿರುಗುತ್ತಿದ್ದಂತೆ ಅನ್ಯ ಪಕ್ಷಗಳ ನಿಷ್ಠಾವಂತ ಮುಖಂಡರು, ಕಾರ್ಯಕರ್ತರು, ಶಾಸಕರು ಮತ್ತು ಸಂಸದರನ್ನು ಸೆಳೆಯಲು ಪ್ರಭಾವೀ ನಾಯಕರು ರಾತ್ರಿ ಕಸರತ್ತು ನಡೆಸಿದ್ದಾರೆ.

ಕೆಲವು ನಾಯಕರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಬಿ. ಪಾಟೀಲ್, ಜಮೀರ್ ಅಹಮದ್ ಖಾನ್, ಬೈರತಿ ಸುರೇಶ್ ಸೇರಿದಂತೆ ಕೆಲವು ನಾಯಕರು ಆಪರೇಷನ್ ಹಸ್ತಕ್ಕೆ ಮುಂದಾಗಿದ್ದಾರೆ.

ಕೆಪಿಸಿಸಿ ಅಧ್ಯಕ್ಷರಿಗೆ ಕರ್ನಾಟಕದಲ್ಲಿ ಪಕ್ಷ ಅಧಿಕಾರಕ್ಕೆ ಬಂದ ನಂತರ ಲೋಕಸಭಾ ಚುನಾವಣೆ ಪ್ರತಿಷ್ಠೆಯಾಗಿದೆ.

ಕೆಎಸ್‌ಆರ್‌ಟಿಸಿಯ 'ನಮ್ಮ ಕಾರ್ಗೋ' ಟ್ರಕ್ ಸೇವೆಗೆ ಸಚಿವ ರಾಮಲಿಂಗಾ ರೆಡ್ಡಿ ಚಾಲನೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಕೆಎಸ್‌ಆರ್‌ಟಿಸಿ)ಯ 'ನಮ್ಮ ಕಾರ್ಗೋ' ಟ್ರಕ್ ಸೇವೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು.

ಇಂದು 20 ಟ್ರಕ್‌ಗಳಿಗೆ ಚಾಲನೆ ನೀಡಿ ಮಾತನಾಡಿದ ಸಾರಿಗೆ ಸಚಿವರು, ಒಂದು ತಿಂಗಳಲ್ಲಿ 100 ಟ್ರಕ್‌ಗಳನ್ನು ಮತ್ತು ಮುಂದಿನ ವರ್ಷದ ಅಂತ್ಯದ ವೇಳೆಗೆ 500 ಟ್ರಕ್‌ಗಳನ್ನು ಕಾರ್ಗೋ ಸೇವೆಗೆ ಒದಗಿಸಲಾಗುವುದು ಎಂದು ಹೇಳಿದರು.

ಈ ಟ್ರಕ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಪೀಣ್ಯದ ಬಸವೇಶ್ವರ ಬಸ್ ನಿಲ್ದಾಣವನ್ನು ಡಿಪೋವಾಗಿ ಬಳಸಿಕೊಳ್ಳಲಾಗುವುದು ಮತ್ತು ವಾಣಿಜ್ಯ ಆದಾಯ ಗಳಿಸಲು ಉಳಿದ ಖಾಲಿ ಜಾಗವನ್ನು ಸರ್ಕಾರಿ ಕಂಪನಿಗಳಿಗೆ ನೀಡಲಾಗುವುದು ಎಂದು ರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿ 2021ರಲ್ಲಿಯೇ ಬಸ್‌ಗಳಲ್ಲಿ ತನ್ನ ಸರಕು ವ್ಯಾಪಾರ ಸೇವೆಯನ್ನು ಪ್ರಾರಂಭಿಸಿತು. ಇದೀಗ ಸಾರಿಗೆ ಸಂಸ್ಥೆ ಹೆಚ್ಚು ಭಾರವಾದ ಸರಕುಗಳನ್ನು ಸಾಗಿಸಲು ಟ್ರಕ್‌ಗಳನ್ನು ಬಳಸಲು ಆರಂಭಿಸಿದೆ. ಈಗ ಆರು ಚಕ್ರಗಳ ಟ್ರಕ್‌ನಲ್ಲಿ 6 ಟನ್ ಸರಕುಗಳನ್ನು ಸಾಗಿಸಬಹುದಾಗಿದೆ.

ಕೆಎಸ್‌ಆರ್‌ಟಿಸಿ ಪ್ರಕಾರ, ಈ ಟ್ರಕ್‌ಗಳು ಬೆಂಗಳೂರು, ಮೈಸೂರು, ತುಮಕೂರು, ಹಾಸನ, ಮಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು, ಕೋಲಾರ, ದಾವಣಗೆರೆ ಸೇರಿದಂತೆ ರಾಜ್ಯದ ವಿವಿಧ ಸ್ಥಳಗಳಿಂದ ಕಾರ್ಯನಿರ್ವಹಿಸುತ್ತವೆ. ಈ ಕುರಿತು ಉತ್ತಮ ಪ್ರತಿಕ್ರಿಯೆ ಬಂದಲ್ಲಿ, ಹೆಚ್ಚಿನ ಟ್ರಕ್‌ಗಳನ್ನು ಕೊಂಡುಕೊಂಡು ಇನ್ನಷ್ಟು ಜಿಲ್ಲೆಗಳಿಂದ ಸಂಚರಿಸಲಿವೆ. ಆರಂಭದಲ್ಲಿ, ಸಾರಿಗೆ ಇಲಾಖೆಯು ಔಷಧಿ, ಜವಳಿ, ಆಹಾರ ಉದ್ಯಮಗಳಿಂದ ಸರಕುಗಳನ್ನು ಸಾಗಿಸಲು ಯೋಜಿಸಿದೆ.



ಮತ ಹಂಚಿಕೆ ಪ್ರಮಾಣ ಶೇ.10ರಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಮೋದಿ ಸೂಚನೆ



ನವದೆಹಲಿ: 2024ರ ಲೋಕಸಭಾ ಚುನಾವಣೆಗೆ ಬಿಜೆಪಿ ತಯಾರಿ ನಡೆಸುತ್ತಿದ್ದು, ಪಕ್ಷದ ಮತ ಹಂಚಿಕೆ ಪ್ರಮಾಣವನ್ನು ಶೇ.10ರಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಪ್ರಧಾನಿ ಮೋದಿ ಸಂಘಟನೆಯ ನಾಯಕರಿಗೆ ಸೂಚನೆ ನೀಡಿದ್ದಾರೆ. ಬಿಜೆಪಿ ರಾಷ್ಟ್ರೀಯ ಪದಾಧಿಕಾರಿಗಳು ಹಾಗೂ ರಾಜ್ಯಾಧ್ಯಕ್ಷರ ಸಭೆಯನ್ನುದ್ದೇಶಿಸಿ ಮಾತನಾಡಿರುವ ಪ್ರಧಾನಿ ಮೋದಿ, ಅಮಿತ್ ಶಾ ಬಿಜೆಪಿ ಕಾರ್ಯಕ್ಷಮತೆ ವಿಪಕ್ಷಗಳಿಗೆ ದಿಗ್ಭ್ರಮೆಗೊಳಿಸುವಂತಿರಬೇಕು ಎಂದು ಕರೆ ನೀಡಿದ್ದಾರೆ. ಬಿಜೆಪಿ ವಿರುದ್ಧ INDIA ಮೈತ್ರಿಕೂಟ ಒಟ್ಟಾಗಿದ್ದು, 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಬಂದಿದ್ದ ಮತ ಹಂಚಿಕೆಯ ಪ್ರಮಾಣಕ್ಕಿಂತಲೂ ಈ ಬಾರಿ ಮತ ಹಂಚಿಕೆ ಪ್ರಮಾಣ ಶೇ.10ರಷ್ಟು ಹೆಚ್ಚಾಗಬೇಕು ಎಂದು ಪ್ರಧಾನಿ ಪದಾಧಿಕಾರಿಗಳು, ರಾಜ್ಯಾಧ್ಯಕ್ಷರಿಗೆ ಸೂಚನೆ ನೀಡಿದ್ದಾರೆ.

ಕಳೆದ ಚುನಾವಣೆಯಲ್ಲಿ ಪಕ್ಷಕ್ಕೆ ಶೇ.37ರಷ್ಟು ಮತಗಳು ಬಂದಿತ್ತು, ಎನ್‌ಡಿಎ ಮೈತ್ರಿಕೂಟಕ್ಕೆ ಶೇ.45ರಷ್ಟು ಮತಗಳು ದಕ್ಕಿತ್ತು. 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ, ಬಿಜೆಪಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ತನ್ನ ಮತಗಳನ್ನು ಶೇ.50ಕ್ಕೆ ಏರಿಸಲು ನಿರಂತರವಾಗಿ ಶ್ರಮಿಸುತ್ತಿದೆ ಮತ್ತು ಅನೇಕ ಚುನಾವಣೆಗಳಲ್ಲಿ ಈ ಸಾಧನೆಯಲ್ಲಿ ಯಶಸ್ವಿಯಾಗಿದೆ.

ಹಿಜಾಬ್ ವಿಚಾರದಲ್ಲಿ ಕಾನೂನಿನಂತೆ ಕ್ರಮ



ಬೆಂಗಳೂರು: ಹಿಜಾಬ್ ವಿಚಾರದಲ್ಲಿ ಕಾನೂನು ತಜ್ಞರ ಜೊತೆ ಚರ್ಚೆ ಮಾಡಿ ಕಾನೂನಿನ ಅಡಿಯಲ್ಲೇ ಕ್ರಮ ತಗೆದು ಕೊಳ್ಳುತ್ತೇವೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿವಾಹಿನಿ ಜೊತೆ ಮಾತನಾಡಿದ ಅವರು, ಹಿಜಾಬ್ ನಿಷೇಧ ವಾಪಸ್ ಪಡೆಯುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರೆ. ಈ ವೇಳೆ ಹಿಜಬ್ ವಿಚಾರದಲ್ಲಿ ಮುಖ್ಯಮಂತ್ರಿಗಳು ಹೇಳಿಕೆ ನೀಡಿದ್ದು, ಕಾನೂನು ಏನು ಹೇಳುತ್ತದೆ ಎಂಬುದನ್ನ ನೋಡಿ ಕಾನೂನು ತಜ್ಞರ ಜೊತೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ. ಶಾಲಾ ಕಾಲೇಜುಗಳಲ್ಲಿ ಈ ಹೇಳಿಕೆಯಿಂದ ಗೊಂದಲ ಆಗಿದ್ದರೆ, ಏನು ಮಾಡಬೇಕು ಎಂಬುದರ ಬಗ್ಗೆ ಮಾಹಿತಿ ಪಡೆದು ಚರ್ಚೆ ಮಾಡಿ ನಿರ್ದೇಶನ ನೀಡುತ್ತೇನೆ ಎಂದಿದ್ದಾರೆ.

ಇದು ಸೂಕ್ಷ್ಮವಾದ ವಿಚಾರವಾಗಿದ್ದು, ಎಲ್ಲಾ ಸಾಧಕ-ಬಾಧಕಗಳ ಬಗ್ಗೆ ಕಾನೂನು ತಜ್ಞರ ಜೊತೆ ಮಾತುಕತೆ ನಡೆಸುತ್ತೇವೆ. ನಾವು ಏನೇ ತೀರ್ಮಾನ ಮಾಡಿದರೂ ಅದು ಕಾನೂನು ತಜ್ಞರ ಸಲಹೆ ಪಡೆದು ಕಾನೂನಿನಂತೆ ಕ್ರಮ ಕೈಗೊಳ್ಳುತ್ತೇವೆ. ಈ ಬಗ್ಗೆ ಸಿಎಂ ಜೊತೆ ಮಾತನಾಡಿ ಮುಂದಿನ ತೀರ್ಮಾನ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ. ಬಿಜೆಪಿ ನಾಯಕರು ಇಂತಹ ವಿಚಾರದಲ್ಲಿ ರಾಜಕೀಯ ಮಾಡಲು ಹೋಗಿ ಜನ ಅವರನ್ನು ತಿರಸ್ಕರಿಸಿದ್ದಾರೆ. ಈಗಾಲಾದರು ಇಂತಹ ವಿಚಾರದಲ್ಲಿ ರಾಜಕೀಯ ಮಾಡುವುದನ್ನು ಅವರು ಬಿಡಬೇಕು ಎಂದಿದ್ದಾರೆ.

ಇಂದು ರಾಷ್ಟ್ರೀಯ ಗ್ರಾಹಕ ದಿನಾಚರಣೆ

ಮೈಸೂರು,ಡಿ.23–ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ರಾಷ್ಟ್ರೀಯ ಗ್ರಾಹಕ ದಿನಾಚರಣೆಯನ್ನು ಪಂಡಿತ್ ಗವಾಯಿ ಸ್ಟೇಡಿಯಂ ಆವರಣದಲ್ಲಿ ಡಿ.24ರಂದು ಸಂಜೆ 4 ಗಂಟೆಗೆ ಆಯೋಜಿಸಲಾಗಿದೆ ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಡಿವೈಎಸ್‌ಪಿ ಜೆ ಬಿ ರಂಗಸ್ವಾಮಿ, ಡಾ.ಜಿ.ವಿ.ರವಿಶಂಕರ್, ಪ್ರಧಾನ ಕಾರ್ಯದರ್ಶಿ ವಿಕ್ರಮ್ ಅಯ್ಯಂಗಾರ್, ಮೈಸೂರು ಪ್ರಾಂತ್ಯದ ಇತರ ಸದಸ್ಯರು ಆಗಮಿಸಲಿದ್ದಾರೆ.

ಮೂರನೇ ಪುಟದಿಂದ

ನಿತ್ಯ ಐದು ಸಾವಿರ ಪರೀಕ್ಷೆಗೆ ನಿರ್ಧಾರ

ಕರ್ನಾಟಕದಲ್ಲಿ ಕೋವಿಡ್ ಪಾಸಿಟಿವ್‌ನಿಂದ ನಾಲ್ವರು ಮೃತಪಟ್ಟಿದ್ದರೂ ಬೇರೆ ಬೇರೆ ಕಾಯಿಲೆಗಳಿಂದ ಬಳಲುತ್ತಿದ್ದುದು ವರದಿಯಲ್ಲಿ ಗೊತ್ತಾಗಿದೆ. ಪ್ರಸ್ತುತ 175 ಸಕ್ರಿಯ ಪ್ರಕರಣಗಳಿದ್ದು, 2366 ಟೆಸ್ಟ್‌ಗಳನ್ನು ಮಾಡಲಾಗುತ್ತಿದೆ. ಮುಂದೆ ಐದು ಸಾವಿರ ಟೆಸ್ಟ್‌ಗಳನ್ನು ಮಾಡುವುದರಿಂದ ಗೊತ್ತಾಗಲಿದೆ ಎಂದರು.

ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ಐಸಿಯು ಬೆಡ್, ವೆಂಟಿಲೇಟರ್ ಬೆಡ್, ಆಕ್ಸಿಜನ್ ಸೇರಿದಂತೆ ಇನ್ನಿತರ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ, ಪರಿಸ್ಥಿತಿ ಎದುರಿಸಲು ಸಿಬ್ಬಂದಿಗಳನ್ನು ಸಜ್ಜುಗೊಳಿಸುವುದಕ್ಕಾಗಿ ಮಾಕ್ ಡ್ರಿಲ್ ಮಾಡಿ ತರಬೇತಿ ನೀಡಲಾಗಿದೆ. ನೆಗಡಿ, ಕೆಮ್ಮು ಮತ್ತು ಜ್ವರ ಇದ್ದವರಿಗೆ ತಪಾಸಣೆ ಮಾಡುವ ಜತೆಗೆ ಐಎಲ್‌ಐ, ಸಾರಿ ಪ್ರಕರಣಗಳು ಕಂಡು ಬಂದರೆ ಕೂಡಲೇ ಆರ್‌ಟಿಸಿಪಿಆರ್ ಟೆಸ್ಟ್‌ಗೆ ಕಳುಹಿಸುವಂತೆ ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡಲಾಗಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಕೋವಿಡ್ ಸೋಂಕು ಹತ್ತಿಕ್ಕಲು ತಾಂತ್ರಿಕ ಸಲಹಾ ಸಮಿತಿ ನೀಡಿರುವ ಸಲಹೆ ಹಾಗೂ ಮಾರ್ಗದರ್ಶನವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಕೋವಿಡ್ ಸಂಬಂಧ ರಚಿಸಿರುವ ಉಪ ಸಮಿತಿಯ ಸಭೆ ಮಂಗಳವಾರ ನಡೆಯಲಿದ್ದು, ಆ ಸಭೆಯಲ್ಲಿ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಕ್ರಮ, ಕೋವಿಡ್ ಸೋಂಕಿನ ಪರಿಸ್ಥಿತಿ ಸೇರಿದಂತೆ ಇನ್ನಿತರ ವಿಷಯವನ್ನು ವಿಸ್ತೃತವಾಗಿ ಚರ್ಚಿಸಲಾಗುತ್ತದೆ. ಆ ಸಭೆ ನಂತರ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ನಿರ್ಧರಿಸಲಾಗುತ್ತದೆ. ಈ ಹಿಂದೆ ಕೊರೊನಾ ರೂಪಾಂತರಿ ಓಮಿಕ್ರಾನ್‌ನಂತೆ ವೇಗವಾಗಿ ಜೆಎನ್–1 ತಳಿ ಹರಡುವುದಿಲ್ಲ ಎಂದು ಈಗಾಗಲೇ ತಜ್ಞರು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ಅದು ಪರಿಣಾಮಕಾರಿಯಾಗಿ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ ನಾವು ಏನೆಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಅದನ್ನೆಲ್ಲಾ ಲೋಪವಾಗದಂತೆ ಕೈಗೊಂಡಿದ್ದೇವೆ. ಸೋಂಕು ನಿಯಂತ್ರಣಕ್ಕೆ ಗಮನ ಹರಿಸಲಾಗಿದೆ ಎಂದು ಹೇಳಿದರು.

ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆಗೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧ ವಿಧಿಸಿಲ್ಲ. ಹೆಚ್ಚಿನ ಜನರು ಸೇರುವ ಕಡೆಗಳಲ್ಲಿಮಾಸ್ಕ್ ಧರಿಸುವುದು ಉತ್ತಮ. ಕೋವಿಡ್ ಸೋಂಕಿತರು ಇದ್ದರೆ ಉಸಿರಾಟದಿಂದ ಮತ್ತೊಬ್ಬರಿಗೆಹರಡುವ ಸಾಧ್ಯತೆ ಇದೆ. ಹಾಗಾಗಿ, ಹೊಸ ವರ್ಷದ ಸಂಭ್ರಮದಲ್ಲಿರುವಾಗ ಮಾಸ್ಕ್ ಧರಿಸಿ ಓಡಾಡುವಂತೆ ಸಚಿವರು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ತನ್ವೀರ್ ಸೇಠ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮಾಜಿ ಮೇಯರ್ ಅಯೂಬ್ ಖಾನ್ ಹಾಗೂ ಇನ್ನಿತರರು ಇದ್ದರು.

ಕಡ್ಡಾಯವಾಗಿ ಉದ್ಯೋಗ ನೀಡಲೇಬೇಕು

ಸ್ಥಳೀಯರಿಗೆ ಉದ್ಯೋಗ ದೊರೆಯದಿದ್ದರೆ ಸರ್ಕಾರದ ಉದ್ದೇಶ ಸಾರ್ಥಕವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಕೈಗಾರಿಕೆಗಳಿಗೆ ಸೌಲಭ್ಯ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಜೊತೆಗೆ ಸೂಕ್ತ ರಿಯಾಯಿತಿ ಕೂಡ ನೀಡಲು ಸಿದ್ಧವಿದೆ. ಈ ಮೂಲಕ ನಮ್ಮ ಸರ್ಕಾರ ಕೈಗಾರಿಕೆಗಳ ವಿರುದ್ಧ ಇಲ್ಲ ಎಂಬುವುದು ಸ್ಪಷ್ಟ. ಆದರೆ ಸ್ಥಳೀಯರಿಗೆ ನಿಮ್ಮ ಕೈಗಾರಿಕೆಗಳಲ್ಲಿ ಉದ್ಯೋಗ ಸಿಗಬೇಕು ಎಂಬುದು ನಮ್ಮ ಆಶಯ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಕೆಲವು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳನ್ನು ಹತ್ತಿಕ್ಕುವ ವ್ಯವಸ್ಥಿತ ತಂತ್ರಗಾರಿಕೆ ನಡೆಯುತ್ತಿದೆ. ಕಂಪನಿಯವರೇ ಬೇರೊಂದು ಕಾರ್ಮಿಕರ ಸಂಘ ಹುಟ್ಟುಹಾಕಿರುವ ಬಗ್ಗೆ ದೂರುಗಳು ಬಂದಿವೆ. ಭವಿಷ್ಯತ್ತಿನಲ್ಲಿ ಯಾವುದೇ ಕಾರಣಕ್ಕೂ ಇಂತಹ ಬೆಳವಣಿಗೆ ನಡೆಯಬಾರದು. ಕಾರ್ಮಿಕರು ಸಂಘ ಸ್ಥಾಪನೆ ಮಾಡಿಕೊಳ್ಳುವುದು ಅವರ ಸಂವಿಧಾನಿಕ ಹಕ್ಕು. ಏನಾದರೂ ಕಾರ್ಮಿಕರಿಂದ ಉದ್ದೇಶಪೂರ್ವಕವಾಗಿ ತಪ್ಪುಗಳಾದರೆ ಕಾರ್ಮಿಕ ಇಲಾಖೆಯಿಂದ ನ್ಯಾಯ ಪಡೆಯಬಹುದು ಎಂದು ಸಲಹೆ ನೀಡಿದರು.

ಸರ್ಕಾರ ಜಾರಿಗೊಳಿಸಿರುವ ಯುವ ನಿಧಿ ಯೋಜನೆಯಿಂದ ನಿರುದ್ಯೋಗಿಗಳಿಗೆ ಅನುಕೂಲವಾಗಲಿದೆ. ಎರಡು ವರ್ಷಗಳ ಕಾಲ ನಿರುದ್ಯೋಗ ಭತ್ಯೆ ನೀಡಲಾಗುವುದು. 2024ರ ಜನವರಿ 12 ರಂದು ಯುವನಿಧಿ ಯೋಜನೆಗೆ ಚಾಲನೆ ನೀಡಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು. ಶಾಸಕ ಕೆ.ಹರೀಶ್‌ಗೌಡ ಸೇರಿದಂತೆ ಹಲವರಿಗೆ ಈ ಸಭೆಗೆ ಅವಕಾಶ ಇರಲಿಲ್ಲ. ಆದರೆ ಸಭೆಯ ವೇದಿಕೆಯಲ್ಲಿ ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರೂ ಆದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಉಪಸ್ಥಿತರಿದ್ದದ್ದು ಅಚ್ಚರಿ ಮೂಡಿಸಿತು. ಅಧಿಕಾರಿಗಳ ವರ್ಗಾವಣೆ ಕುರಿತು ಡಾ.ಯತೀಂದ್ರ ಮಾತನಾಡಿರುವ ಹೇಳಿಕೆಯ ವಿಡಿಯೋ ಇತ್ತೀಚಿಗೆ ವೈರಲ್ ಆಗಿ ವಿವಾದಕ್ಕೆಡೆಯಾಗಿತ್ತು. ಇಂತಹ ಸಂದರ್ಭದಲ್ಲಿ ವೇದಿಕೆಯಲ್ಲಿ ಡಾ. ಯತೀಂದ್ರ ಮಾತ್ರ ಉಪಸ್ಥಿತರಿರುವುದು ಮತ್ತಷ್ಟು ಚರ್ಚೆಗೆ ಗ್ರಾಸವಾಗಿತ್ತು.

ಹೋಟೆಲ್‌ನ ನೆಲ ಅಂತಸ್ತಿನ ಸಭಾಂಗಣದಲ್ಲಿ ನಡೆದ ಸಭೆಗೆ ಮಾಧ್ಯಮದವರು ಸೇರಿದಂತೆ ಹಲವರಿಗೆ ಪ್ರವೇಶವಿರಲಿಲ್ಲ. ಸಭೆ ಆರಂಭವಾಗುತ್ತಿದ್ದಂತೆ ಕಡತಗಳ ರಾಶಿಯನ್ನೇ ಸಭೆಗೆ ಅಧಿಕಾರಿಗಳು ಕೊಂಡೊಯ್ದರು. ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿರುವ ಏಷಿಯನ್ ಪೇಂಟ್ಸ್, ಯುನೈಟೆಡ್ ಬ್ರೇವರೇಜಸ್, ಕಡಕೊಳದ ಕಾಲ್ಸ್ ಬರ್ಗ್, ತಾಂಡ್ಯ ಕೈಗಾರಿಕಾ ಪ್ರದೇಶದ ಐಟಿಸಿ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಕೆಐಎಡಿಬಿ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಡಾ.ಎಂ.ಮಹೇಶ್, ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಚೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶ್ರೀಧರ್, ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ದಿನೇಶ್, ಉಪ ನಿರ್ದೇಶಕ ವರದೇಗೌಡ ಹಾಗೂ ಸಹಾಯಕ ನಿರ್ದೇಶಕ ವಿಜಯ ಕುಮಾರ್ ಸಭೆಯಲ್ಲಿ ಉಪಸ್ಥಿತರಿದ್ದರು.

ಭಾರತೀಯ ವಿದ್ಯಾ ಭವನದಲ್ಲಿ ತಿಂಗಳ ಸಂಗೀತ ಕಾರ್ಯಕ್ರಮ

ಸುಶ್ರಾವ್ಯ ಗಾನದಲ್ಲಿ ಮಂತ್ರಮುಗ್ಧರಾದ ಶ್ರೋತೃ ವರ್ಗ



ವಿದ್ವಾನ್ ಎನ್.ಆರ್.ಪ್ರಶಾಂತ್‌ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದ ಹೊನಲು



ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಬಿವಿಬಿ ಮೈಸೂರು ಕೇಂದ್ರದ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ತಿಂಗಳ ಸಂಗೀತ ಕಾರ್ಯಕ್ರಮವನ್ನು ಶಾಸ್ತ್ರೀಯ ಸಂಗೀತದ ಗಾಯಕ ವಿದ್ವಾನ್ ಎನ್.ಆರ್.ಪ್ರಶಾಂತ್ (ಎಡದಿಂದ 3ನೇಯವರು) ಉದ್ಘಾಟಿಸಿದರು. ಸಂಗೀತ ಶಿಕ್ಷಕಿ ಸುಮ ಹರಿನಾಥ್, ಬಿವಿಬಿ ಮೈಸೂರು ಕೇಂದ್ರದ ಸದಸ್ಯೆ ಡಾ.ತುಳಸಿ ರಾಮಚಂದ್ರ, ಕಾರ್ಯದರ್ಶಿ ಪಿ.ಎಸ್.ಗಣಪತಿ, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್ (ಎಡದಿಂದ) ಚಿತ್ರದಲ್ಲಿದ್ದಾರೆ. ಮತ್ತೊಂದು ಚಿತ್ರದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸಾದರಪಡಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಡಿ.23(ಪಿಎಂ)–ಸುಶ್ರಾವ್ಯವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಗಾನ ಸುಧೆ ಸಾದರಪಡಿಸಿದ ವಿದ್ವಾನ್ ಎನ್.ಆರ್.ಪ್ರಶಾಂತ್, ಶ್ರೋತೃಗಳನ್ನು ಮಂತ್ರಮುಗ್ಧಗೊಳಿಸಿದರು. ಇವರ ಗಾಯನ ಮೋಡಿಗೆ ಸಭಿಕರು ಮನಸೋತರು.

ಭಾರತೀಯ ವಿದ್ಯಾ ಭವನ (ಬಿವಿಬಿ) ಮೈಸೂರು ಕೇಂದ್ರದ ಕಲಾ ಭಾರತಿ ವಿಭಾಗದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ತಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಎನ್.ಆರ್.ಪ್ರಶಾಂತ್, ಶ್ರೋತೃಗಳು ಮೈ ಮರೆಯುವಂತೆ ಮಾಡಿದರು. ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಬಿವಿಬಿ ಮೈಸೂರು ಕೇಂದ್ರದ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಅವರು ತಮ್ಮ ಕಂಠಸಿರಿಯಲ್ಲಿ ಇಂಪಾದ ಗಾಯನದ ಕಂಪು ಮೂಡಿಸಿದರು.

ಹೆಚ್.ಎನ್.ಮುತ್ತಯ್ಯ ಭಾಗವತರು ರಚಿಸಿರುವ 'ಗಣಪತೆ ಸುಗುನಾನಿಧೆ...' ಸಂಸ್ಕೃತ ಗೀತೆಯನ್ನು ಜನರಂಜನಿ ರಾಗದಲ್ಲಿ ಸಾದರಪಡಿಸಿ, ಸಭಿಕರಲ್ಲಿಯೂ ಭಕ್ತಿಯ ಸಿಂಚನ ಮೂಡಿಸಿದರು. ಬಳಿಕ ವೈಕುಂಠ ಏಕದಶಿಯ ಪ್ರಯುಕ್ತ ಅಂಬುಜಂ ಕೃಷ್ಣ ರಚನೆ, ತಮಿಳು ಭಾಷೆಯ 'ಓಂ ನಮೋ ನಾರಾಯಣ... ಎನ್ರು ಉಲ್ಲಂ ಊರುಗ ಉರಿತಿದೆನವೇ...' ಗೀತೆಯನ್ನು ಕಣರಂಜನಿ ರಾಗದಲ್ಲಿ ಪ್ರಸ್ತುತಪಡಿಸಿ, ಸಭಿಕರಲ್ಲಿ ಭಕ್ತಿಯ ಪರಾಕಾಷ್ಠೆ ಮೂಡಿಸಿದರು.

ಪುರಂದರದಾಸರ 'ನಿನ್ನ ನೋಡಿ ಧನ್ಯನಾದೆನೋ ಹೇ ಶ್ರೀನಿವಾಸ... ಪಕ್ಷಿವಾಹನ ಲಕ್ಷ್ಮೀರಮಣ ಲಕ್ಷ್ಯವಿಟ್ಟು ನೋಡೊ ಪಾಂಡು...' ಗೀತೆಯನ್ನು ಕಾಮವರ್ಧಿನಿ ರಾಗದಲ್ಲಿ ಹಾಡಿ, ಶ್ರೀನಿವಾಸ ದೇವರನ್ನು ಸ್ಮರಿಸಿ ಸಭಿಕರನ್ನು ಭಕ್ತಿಯಲ್ಲಿ ತೇಲಿಸಿದರು.

ಬಳಿಕ ಶ್ರೀವ್ಯಾಸರಾಜರು ರಚಿಸಿರುವ 'ಓಲಗ ಸುಲಭವೋ...' ಗೀತೆಯನ್ನು ಭೈರವಿ ರಾಗದಲ್ಲಿ ಹಾಡಿದರು. ನಂತರ ಭದ್ರಾಚಲ ರಾಮದಾಸರು ರಚಿಸಿರುವ 'ರಾಮಚಂದ್ರ ರಾರಾ...' ತೆಲುಗು ಗೀತೆಯನ್ನು ಆನಂದ ಭೈರವಿ ರಾಗ ಹಾಗೂ ಆದಿ ತಾಳದಲ್ಲಿ ಸಾದಪಡಿಸಿದರು. ಹೀಗೆ ಅನೇಕ ಗೀತೆಗಳನ್ನು ಸಾದರಪಡಿಸಿ, ಸಂಗೀತದ ಅಲೆಯಲ್ಲಿ ಶ್ರೋತೃಗಳು ತೇಲಾಡುವಂತೆ ಮಾಡಿದರು. ಇದಕ್ಕೂ ಮುನ್ನ ವಿದ್ವಾನ್ ಎನ್.ಆರ್.ಪ್ರಶಾಂತ್ ಅವರೇ ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು.

ಗಾಯಕರ ಸಂಕ್ಷಿಪ್ತ ಪರಿಚಯ: ವಿದ್ವಾನ್ ಎನ್.ಆರ್.ಪ್ರಶಾಂತ್ ಬೆಂಗಳೂರು ನಿವಾಸಿಯಾಗಿದ್ದು, 2001ರಿಂದ 2016ರವರೆಗೆ ಸಿಂಗಾಪುರ್‌ನ ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯಲ್ಲಿ ಮುಖ್ಯ ಬೋಧಕರು ಮತ್ತು ರಿಜಿಸ್ಟ್ರಾರ್ ಆಗಿ ಕರ್ತವ್ಯ ನಿರ್ವಹಿಸಿ, 2016ರಲ್ಲಿ ದೇಶಕ್ಕೆ ಮರಳಿದರು. ಅಲ್ಲಿ ಬೇಕಾದಷ್ಟು ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿದಲ್ಲದೇ ಅನೇಕ ಸಂಗೀತ ಕಚೇರಿಗಳನ್ನು ಕೊಟ್ಟಿದ್ದಾರೆ. ಸುಮಾರು 3 ಸಾವಿರಕ್ಕೂ ಅಧಿಕ ಸಂಗೀತ ಕಚೇರಿ ನೀಡಿರುವ ಹೆಗ್ಗಳಿಕೆ ಇವರದು. ದೇಶ-ವಿದೇಶದ ಅತ್ಯಂತ ಪ್ರಮುಖ ವೇದಿಕೆಗಳಲ್ಲಿ ಇವರು ಸಂಗೀತ ಕಚೇರಿ ನೀಡಿದ್ದಾರೆ. ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ.

ಇಂದಿನ ಸಂಗೀತ ಕಾರ್ಯಕ್ರಮದಲ್ಲಿ ಪಕ್ಕವಾದ್ಯದಲ್ಲಿ ಮೈಸೂರು ಮೂಲದ ವಿದ್ವಾನ್ ಕೇಶವ (ಪಿಟೀಲು), ವಿದ್ವಾನ್ ರಾಧೇಶ್ (ಮೃದಂಗ) ಅವರು ವಿದ್ವಾನ್ ಎನ್.ಆರ್.ಪ್ರಶಾಂತ್ ಅವರಿಗೆ ಸಹಕಾರ ನೀಡಿದರು. ಬಿವಿಬಿ ಮೈಸೂರು ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ, ಸದಸ್ಯರು ಹಾಗೂ ಕಾರ್ಯಕ್ರಮದ ಸಂಚಾಲಕಿ ಡಾ.ತುಳಸಿ ರಾಮಚಂದ್ರ, ಬಿವಿಬಿ ಮೈಸೂರು ಕೇಂದ್ರದ ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಸಂಗೀತ ಶಿಕ್ಷಕಿ ಸುಮ ಹರಿನಾಥ್ ಮತ್ತಿತರರು ಹಾಜರಿದ್ದರು.

ಗಣಿತ ಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಜಯಂತಿ ಅಂಗವಾಗಿ ರಾಷ್ಟ್ರೀಯ ಗಣಿತ ದಿನಾಚರಣೆ



ಮೈಸೂರು, ಡಿ.23(ಎಸ್‌ಬಿಡಿ)–ಭೌತಿಕವಾಗಿ ಕಾಲವಾದರೂ ತಮ್ಮ ಸಾಧನೆಯಿಂದ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಜೀವಂತವಾಗಿರುವ ಮಹನೀಯರಲ್ಲಿ ಗಣಿತ ಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಅವರೂ ಒಬ್ಬರಾಗಿದ್ದಾರೆ ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರಿನ ಡಿ.ಬನುಮಯ್ಯ ಬಾಲಕರ ಪ್ರೌಢಶಾಲೆಯಲ್ಲಿ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಜಗದ್ವಿಖ್ಯಾತ ಗಣಿತ ಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಜಯಂತಿ ಅಂಗವಾಗಿ ಆಯೋಜಿಸಿದ್ದ ರಾಷ್ಟ್ರೀಯ ಗಣಿತ ದಿನಾಚರಣೆಯನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಅನೇಕರು ಬದುಕಿದ್ದೂ ಸತ್ತಂತಿರುತ್ತಾರೆ. ಆದರೆ ಸಮಾಜಕ್ಕೆ ಉಪಯೋಗವಾಗುವ ಕೆಲಸಗಳ ಮೂಲಕ ಕೆಲವರು ಕಾಲವಾದ ಬಳಿಕವೂ ಜೀವಂತವಾಗಿರುತ್ತಾರೆ. ಹೀಗೆ ಅದ್ಭುತ ಸಾಧನೆಯಿಂದ ಜನರ ಮನಸ್ಸಿನಲ್ಲಿ ಸದಾ ಹಸಿರಾಗಿರುವ ಮಹನೀಯರ ಸಾಲಿನಲ್ಲಿ ಶ್ರೀನಿವಾಸ ರಾಮಾನುಜನ್ ಅವರೂ ಇದ್ದಾರೆ ಎಂದರು.

ಜಗತ್ತಿನೊಂದಿಗೆ ಗಣಿತವೂ ಉದಯವಾಗಿದೆ. ಪ್ರತಿಯೊಂದಕ್ಕೂ ಲೆಕ್ಕಾಚಾರ ಬೇಕೇ ಬೇಕು. ಗಣಿತವಿಲ್ಲದೆ ಬದುಕಿಲ್ಲ. ಗಣಿತವನ್ನು ಕಲಿತವರಿಗೆ ಉಳಿದ ವಿಷಯಗಳೆಲ್ಲಾ ನೀರು ಕುಡಿದಷ್ಟು ಸುಲಭ. ಆದ್ದರಿಂದ ವಿದ್ಯಾರ್ಥಿಗಳು ರಾಮಾನುಜನ್‌ರಂತಹ ಗಣಿತಜ್ಞರ ಬದುಕನ್ನು ಮಾದರಿಯಾಗಿಟ್ಟುಕೊಂಡು ಗಣಿತದ ಬಗ್ಗೆ ವಿಶೇಷ ಆಸಕ್ತಿ ಮತ್ತು ಒಲವನ್ನು ಹೊಂದಬೇಕು. ಗಣಿತ ಕಬ್ಬಿಣದ ಕಡಲೆ ಎಂದು ಭಾವಿಸಬಾರದು. ಗಣಿತವನ್ನು ಕಲ್ಲುಸಕ್ಕರೆಯಂತೆ ಸವಿಯುವವರು ಮಾದರಿಯಾಗಬೇಕು ಎಂದು ಕಿವಿಮಾತು ಹೇಳಿದರು.

ರಾಮಾನುಜನ್ ಅವರು ಬದುಕಿದ್ದು 32 ವರ್ಷ ಮಾತ್ರ. ಅಲ್ಪಾಯುಷಿಯಾದರೂ ಜಗತ್ತಿನ ಗಣಿತ ಲೋಕದಲ್ಲಿ ದಾಖಲೆ ಬರೆದು ಭಾರತದ ಕೀರ್ತಿ ಪತಾಕೆ ಹಾರಿಸಿದ್ದಾರೆ. ಸಾವಿರಾರು ಗಣಿತ ಸೂತ್ರಗಳು, ಪ್ರಮೇಯಗಳನ್ನು ಜಗತ್ತಿಗೆ ನೀಡಿದ್ದಾರೆ. ಅವುಗಳ ಬಗ್ಗೆ ಇಂದಿಗೂ ಅಧ್ಯಯನಗಳು, ಸಂಶೋಧನೆಗಳು ನಡೆಯುತ್ತಿವೆ ಎಂದು ಸ್ಮರಿಸಿಕೊಂಡರು.

ಖ್ಯಾತ ಸಂಖ್ಯಾ ಶಾಸ್ತ್ರಜ್ಞ ಲೇಖಕ ಎಸ್.ಜೆ.ಸೀತಾರಾಂ ಮಾತನಾಡಿ, ಗಣಿತಜ್ಞ ಶ್ರೀನಿವಾಸ ರಾಮಾನುಜನ್ ಅವರ ಬದುಕು, ಬರಹ, ಸಾಧನೆಯನ್ನು ವಿವರಿಸಿದರು. ವಿಶ್ರಾಂತ ಗಣಿತ ಶಿಕ್ಷಕ ಹಾಗೂ ಮುಕ್ತಕ ಕವಿ ಎಂ.ಮುತ್ತುಸ್ವಾಮಿ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ರಾಷ್ಟ್ರೀಯ ಗಣಿತ ದಿನದ ಅಂಗವಾಗಿ ನಡೆದ ಗಣಿತ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ 10ನೇ ತರಗತಿಯ ಎಂ.ಎಲ್. ಧೀರಜ್ ಮತ್ತು ಆರ್.ಪ್ರೀತಮ್, 9ನೇ ತರಗತಿಯ ಕೀರ್ತಿಕ್ ಜೈ ಮತ್ತು ಎಲ್.ಭಾರ್ಗವ ಹಾಗು ಕಿಷನ್ ಲಾಲ್‌ಗೆ ಲೇಖಕಿ ಡಾ.ಜಮುನಾ ರಾಣಿ ಮಿರ್ಲೆ ಮತ್ತು ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಬಹುಮಾನ ವಿತರಿಸಿದರು. ಕಾರ್ಯಕ್ರಮದಲ್ಲಿ ಡಿ.ಬನುಮಯ್ಯ ಬಾಲಕರ ಪ್ರೌಢ ಶಾಲೆ ಮುಖ್ಯ ಶಿಕ್ಷಕ ಕೃಪಾಶಂಕರ್, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಶಿಕ್ಷಕರಾದ ನಿಂಗರಾಜು, ಕೆ.ಎಂ.ಗೋವಿಂದರಾಜು, ಸಿ.ತಾರಾ, ಜಿ.ಗೀತಾ, ಎನ್.ಉಮಾ, ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳ ಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಚಂದ್ರೇಗೌಡ ಮತ್ತಿತರರು ಉಪಸ್ಥಿತರಿದದ್ದರು.

ಹಿಜಾಬ್ ನಿಷೇಧ ವಾಪಸ್ ಪಡೆದರೆ ಕೇಸರಿ ಶಾಲು ಹಾಕಲು ಹಿಂದೂ ಯುವಕರಿಗೆ ನಾವೇ ಕರೆ ನೀಡ್ತೇವೆ

ದಾವಣಗೆರೆ: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇಲ್ಲ. ಟಿಪ್ಪು ಸುಲ್ತಾನ್ ನೇತೃತ್ವದ ತುಘಲಕ್ ಸರ್ಕಾರ ಇದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಮಾಜಿ ಸಚಿವ ಎಂಪಿ ರೇಣುಕಾಚಾರ್ಯ ಆಕ್ರೋಶ ವ್ಯಕ್ತಪಡಿಸಿದರು.

ಹಿಜಾಬ್ ನಿಷೇಧ ವಾಪಸ್ ಪಡೆಯುತ್ತೇವೆಂಬ ಸಿಎಂ ಸಿದ್ದರಾಮಯ್ಯರ ಹೇಳಿಕೆ ಸಂಬಂಧ ಇಂದು ದಾವಣಗೆರೆಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ 13 ಬಾರಿ ಬಜೆಟ್ ಮಂಡನೆ ಮಾಡಿದ್ದಾರೆ, ಅನುಭವಿ ಇದ್ದಾರೆ. ಇಂಥವರು ಹಿಜಾಬ್ ಸರ್ಕಾರಿ ಅದೇಶ ವಾಪಸ್ ಪಡಿತೀವಿ ಅಂತಿದ್ದಾರೆ. ಹಿಜಾಬ್ ಅದೇಶ ವಾಪಸ್ ಪಡೆದರೆ ಹೋರಾಟ ಮಾಡ್ತೇವೆ ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಸಿದ್ದರಾಮಯ್ಯ ಊಟ ನಮ್ಮ ಹಕ್ಕು, ಬಟ್ಟೆ ನಮ್ಮ ಹಕ್ಕು ಅಂತಾರೆ. ಆದರೆ ಎಲ್‌ಕೆಜಿಯಿಂದ ಕಾಲೇಜುವರೆಗೂ ಸಮವಸ್ತ್ರ ಕಡ್ಡಾಯ ಮಾಡಲಾಗಿದೆ ಎಂಬುದು ಗೊತ್ತಿಲ್ವಾ? 2021ರಲ್ಲಿ ಉಡುಪಿ ಪಿಯು ಕಾಲೇಜು ವಿದ್ಯಾರ್ಥಿನಿಯರು ಮೊದಲಿಗೆ ಹಿಜಾಬ್ ಮುನ್ನಲೆಗೆ ತಂದಿದ್ದರು. ಅಂದು ರಾಜ್ಯದಲ್ಲಿ ದೊಡ್ಡ ಘಟನೆ ನಡೆದು ಹೋಯ್ತು. ಮುಸ್ಲಿಮರಿಗೆ ಹಿಜಾಬ್‌ಗೆ ಅವಕಾಶ ನೀಡಿದ್ರೆ ಹಿಂದೂ ಯುವಕ, ಯುವತಿಯರಿಗೂ ಕೇಸರಿ ಶಾಲು ಹಾಕಲು ಅವಕಾಶ ನೀಡಬೇಕು. ಅಂದಿನ ರಾಜ್ಯ ಸರ್ಕಾರದ ಅದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ ಎಂದರು.



ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿ ಅಭಿಯಾನವನ್ನು ಕಾಂಗ್ರೆಸ್ ಮುಖಂಡ ಜೆ.ಜೆ.ಆನಂದ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಮಹದೇವ್ ಇತರರು ಕಡಕೊಳದಲ್ಲಿ ಹಮ್ಮಿಕೊಂಡು ಜನರಲ್ಲಿ ಕಾಂಗ್ರೆಸ್ ತತ್ವಾದರ್ಶಗಳನ್ನು ಮನವರಿಕೆ ಮಾಡಿಕೊಟ್ಟರು.

ಗಾಯಕರು, ಸಾಹಿತಿಗಳು, ಕಲಾವಿದರಿಗೆ ಎಂದೂ ಸಾವಿಲ್ಲ

ಖ್ಯಾತ ಗಾಯಕ ವೈ.ಕೆ.ಮುದ್ದುಕೃಷ್ಣ ಅಭಿಮತ



ಮೈಸೂರು,ಡಿ.23(ಎಂಕೆ)–ಕಲೆ, ಸಾಹಿತ್ಯಗಳು ಎಂದಿಗೂ ಜೀವಂತ ಎಂದು ಅಂತಾರಾಷ್ಟ್ರೀಯ ಖ್ಯಾತ ಗಾಯಕ ವೈ.ಕೆ. ಮುದ್ದುಕೃಷ್ಣ ಹೇಳಿದರು.

ನಗರದ ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಆಡಿಟೋರಿಯಂನಲ್ಲಿ ಶನಿವಾರ ಆಯೋಜಿಸಿದ್ದ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಮೈಸೂರು ಘಟಕದ ಉದ್ಘಾಟನೆ ಹಾಗೂ ಗೀತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗಾಯಕರು, ಸಾಹಿತಿಗಳು ಹಾಗೂ ಕಲಾವಿದರಿಗೆ ಎಂದೂ ಸಾವಿಲ್ಲ. ಅವರು ಯಾವತ್ತಿಗೂ ಚಿರಂಜೀವಿಗಳೆ. ದೈಹಿಕವಾಗಿ ನಮ್ಮೊಂದಿಗಿರದಿದ್ದರೂ ಅವರು ಬಿಟ್ಟು ಹೋದ ಕಲೆ, ಸಾಹಿತ್ಯ ಎಂದಿಗೂ ಜೀವಂತ ಎಂದರು.

ಸಮಾಜದಲ್ಲಿ ಅತ್ಯುತ್ತಮ ಕಲಾವಿದರನ್ನು ಗುರುತಿಸಿ, ಗೌರವಿಸಿ ಸೂಕ್ತ ಪ್ರಶಸ್ತಿಗಳನ್ನು ನೀಡುವ ಕೆಲಸವಾಗಬೇಕು. ಸಂಗೀತವೇ ಮನುಷ್ಯನಿಗೆ ಶಕ್ತಿ. ಮನುಷ್ಯ ಅಷ್ಟೇ ಅಲ್ಲ ನಿಸರ್ಗವೂ ಸಂಗೀತಕ್ಕೆ ಸೋಲುತ್ತದೆ. ಪ್ರಪಂಚದ ಕಾವ್ಯ ಪರಂಪರೆಯಲ್ಲಿ ನಮ್ಮ ಕನ್ನಡ ನಾಡು ಶ್ರೀಮಂತ ನಾಡು. ಕವಿಗಳು, ಶರಣರು, ಸಾಹಿತಿಗಳು ಅನೇಕ ಕೃತಿಗಳನ್ನು ರಚಿಸುವ ಮೂಲಕ ಕನ್ನಡಾಂಭೆಯ ವೈಭವವನ್ನು ಹೆಚ್ಚಿಸುವಲ್ಲಿ ಶ್ರಮವಹಿಸಿದ್ದಾರೆ ಎಂದು ಸ್ಮರಿಸಿದರು.

ರಾಜ್ಯದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಸ್ಥಾಪಿಸಿ ಸಂಗೀತ ಚಟುವಟಿಕೆ ನಡೆಸಿಕೊಂಡು ಬರಲಾಗಿದೆ. ಮೈಸೂರು ಸಾಂಸ್ಕೃತಿಕ ನಾಡಿ. ಇಂತಹ ನಾಡಿನಲ್ಲಿ ಘಟಕ ಇಲ್ಲವೆಂಬ ಕೊರಗು ಕಾಡುತಿತ್ತು. ಕಡೆಗೂ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಘಟಕ ಉದ್ಘಾಟನೆಯಿಂದ ಕೊರಗು ದೂರಾಗಿದೆ. ಈ ಮೂಲಕ ಸಂಗೀತ ಸೇವೆ ನಿರಂತರವಾಗಿ ನಡೆಯಲಿದೆ ಎಂದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಬೆಂಗಳೂರು ಘಟಕದ ಅಧ್ಯಕ್ಷ ವಿ.ನಾಗರಾಜ್ ಬೈರಿ, ಖಜಾಂಚಿ ಪ್ರಶಾಂತ ಉಡುಪ, ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಬಿ.ವಿ.ಪ್ರವೀಣ್, ಕೆ.ಟಿ.ಹನುಮಂತು, ಡೇವಿಡ್ ಪ್ರತಿಭಾಂಜಲಿ, ಆಕಾಶವಾಣಿ ಹಿರಿಯ ಗಾಯಕ ಎ.ಡಿ.ಶ್ರೀನಿವಾಸ್, ಗಾಯಕರಾದ ಪ್ರಸನ್ನಕುಮಾರ್, ರಶ್ಮಿ ಚಿಕ್ಕಮಗಳೂರು ಮತ್ತಿತರರಿದ್ದರು.

ಮೈಸೂರು ಮಿತ್ರ ಭಾನುವಾರ 24 ಡಿಸೆಂಬರ್ 2023

ಸ್ವಾತಂತ್ರ್ಯ ಹೋರಾಟಗಾರರಾದ ದಿ.ಪಂದ್ಯಂಡ ಬೆಳ್ಳಪ್ಪ, ಸೀತಾ ಬೆಳ್ಳಪ್ಪ ಕುರಿತ ಪುಸ್ತಕ ಬಿಡುಗಡೆ

ತಾತ-ಅಜ್ಜಿಯ ಬಗ್ಗೆ ಪುಸ್ತಕ ಬರೆದ ಮೊಮ್ಮಗಳು ಬೊಮ್ಮಂಡ ಸವೇರ ಚಂಗಪ್ಪ



ಸಿದ್ದಾಪುರ, ಡಿ.23– ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಗಾಂಧಿವಾದಿ ಪಂದ್ಯಂಡ ಬೆಳ್ಳಪ್ಪ, ಸ್ವಾತಂತ್ರ್ಯ ಹೋರಾಟಗಾರ್ತಿ ಪಂದ್ಯಂಡ ಸೀತಾ ಬೆಳ್ಳಪ್ಪ ಅವರ ಕುರಿತಾದ ಪುಸ್ತಕ ಸಿದ್ದಾಪುರ ಸ್ವರ್ಣಮಾಲ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಬಿಡುಗಡೆಗೊಂಡಿತು.

ಯುನೈಟೆಡ್ ಕೊಡವ ಆರ್ಗನೈಸೇಷನ್ (ಯುಕೊ) ಸಂಘಟನೆಯ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ SOULFUL SOJOURN A tale of two souls ಎಂಬ ಆತ್ಮಕಥೆಗಳ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿ, ಕೊಡಗಿನ ಗಾಂಧಿ ಎಂದೇ ಖ್ಯಾತಿ ಹೊಂದಿರುವ ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಪಂದ್ಯಂಡ ಬೆಳ್ಳಪ್ಪ ಹಾಗೂ ಸ್ವಾತಂತ್ರ್ಯ ಹೋರಾಟಗಾರ್ತಿ ಪಂದ್ಯಂಡ ಸೀತಾ ಬೆಳ್ಳಪ್ಪ ಅವರ ಕುರಿತಾದ ಪುಸ್ತಕವನ್ನು ಅವರ ಮೊಮ್ಮಗಳು ಬೊಮ್ಮಂಡ ಸವೇರ ಚಂಗಪ್ಪ ಬರೆದಿದ್ದು, ಅದನ್ನು ಲೋಕಾರ್ಪಣೆ ಮಾಡಿದ್ದೇವೆ ಎಂದು.

ಪಂದ್ಯಂಡ ಬೆಳ್ಳಪ್ಪನವರು ಸ್ವಾತಂತ್ರ್ಯ ಇತಿಹಾಸ ಮತ್ತೂ ಸಾಮಾಜಿಕ ಕಳಕಳಿಯೊಂದಿಗೆ ವಿವಿಧ ಕ್ಷೇತ್ರಗಳಲ್ಲೂ ಸಾಧನೆ ಮಾಡಿ ಗಮನ ಸೆಳೆದಿದ್ದಾರೆ. ಕೊಡಗಿನ ಸಹಕಾರಿ ಕ್ಷೇತ್ರದಲ್ಲೂ ಅವರ ಸಾಧನೆ ಅಪಾರವಾದದ್ದು. ಶಿಕ್ಷಣ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಸ್ಥಾಪನೆಗೆ ನೆಹರು ಅವರ ಕಾಲದಲ್ಲಿ ಮಂಜೂರಾತಿ ಮಾಡಿಸಿ ತಂದ ಮಹಾನ್ ವ್ಯಕ್ತಿತ್ವ ಅವರದು. ಅವರ ಜೀವನ ಚರಿತ್ರೆಯ ಆತ್ಮ ಕಥೆಗಳ ಪುಸ್ತಕವನ್ನು ಪ್ರತಿಯೊಬ್ಬರೂ ಓದುವಂತಾಗಬೇಕು ಎಂದರು. ಸಾಧನೆ ಮಾಡಿದ ಸಾಧಕರ ಹಿರಿಯರ ಬಗ್ಗೆ ಯುವ ಸಮೂಹ ಸೇವಾ ಮನೋಭಾವದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಮುನ್ನಡೆಯಬೇಕೆಂದು ಸಲಹೆ ನೀಡಿದರು.

ಪೂಮಾಲೆ ಪತ್ರಿಕೆಯ ಸಂಪಾದಕ ಅಜ್ಜಿನಿಕಂಡ ಮಹೇಶ್ ನಾಚಯ್ಯ ಮಾತನಾಡಿ, ನಾಡಿಗಾಗಿ ದುಡಿದಂತ ಮಹಾನ್ ವ್ಯಕ್ತಿತ್ವದ ಸಾಧಕರ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಂಡು ಮುನ್ನಡೆಯುವ ಮೂಲಕ ಅವರ ಜೀವನ ಚರಿತ್ರೆಯ ಪುಸ್ತಕಗಳನ್ನ ಓದಿ ಆದರ್ಶ ವ್ಯಕ್ತಿಗಳ ಮಾರ್ಗದರ್ಶನವನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕೆಂದರು.

ಲೇಖಕಿ ಬೊಮ್ಮಂಡ ಸವೇರ ಚೆಂಗಪ್ಪ ಮಾತನಾಡಿ, ನನ್ನ ಅಜ್ಜ ಅಜ್ಜಿ ಅವರ ಸ್ವಾತಂತ್ರ್ಯ ಹೋರಾಟದ ಜೀವನ ಚರಿತ್ರೆ ಹಾಗೂ ವಿವಿಧ ಕ್ಷೇತ್ರಗಳಲ್ಲೂ ಮಾಡಿದ ಸಾಧನೆಯ ಬಗ್ಗೆ ಮುಂದಿನ ಪೀಳಿಗೆಯ ಇತಿಹಾಸದಲ್ಲಿ ಉಳಿದುಕೊಳ್ಳುವಂತೆ ಜೀವನ ಚರಿತ್ರೆಯ ಆತ್ಮಕಥೆಗಳ ಬಗ್ಗೆ ಇಂಗ್ಲಿಷಿನಲ್ಲಿ ಪುಸ್ತಕ ಬರೆದಿದ್ದೇನೆ. ಇಂತಹ ಆದರ್ಶ ವ್ಯಕ್ತಿಗಳ ಬಗ್ಗೆ ಪ್ರತಿಯೊಬ್ಬರು ಓದಿ ತಿಳಿದುಕೊಳ್ಳಬೇಕೆಂದು ಮನವಿ ಮಾಡಿದರು.

ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅಲ್ಲರಂಡ ವಿಟ್ಟಲ್ ನಂಜಪ್ಪ, ಕರ್ನಲ್ ಬೊಮ್ಮಂಡ ಧೀರಜ್ ಚೆಂಗಪ್ಪ, ಸವೇರ ಚೆಂಗಪ್ಪ ಮತ್ತು ತಪಸ್ ದೇವಯ್ಯ, ನೇರವಂಡ ಶಾಂತಿ ನಂಜಪ್ಪ ಕುಸುಮ ಅಯ್ಯಪ್ಪ ಪಂದ್ಯಂಡ ವಿಜಯ್ ಬೆಳ್ಳಿಯಪ್ಪ ಫೀ.ಮಾ. ಕಾರ್ಯಪ್ಪ –ಜ.ತಿಮ್ಮಯ್ಯ ಫೋರಂ ಅಧ್ಯಕ್ಷ ಕರ್ನಲ್ ಕಂಡ್ರತಂಡ ಸುಬ್ಬಯ್ಯ, ಎ.ತಮ್ಮು ಪೂವಯ್ಯ, ದೆಹಲಿ ಕೊಡವ ಸಮಾಜ ಅಧ್ಯಕ್ಷ ಮಾಚಿಮಂಡ ತಮ್ಮು ಕಾರ್ಯಪ್ಪ, ಕರ್ನಲ್ ಮಂಡೇಪಂಡ ಕೆ.ಅಯ್ಯಪ್ಪ, ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ ಗಣ್ಯರು ಉಪಸ್ಥಿತರಿದ್ದರು.

ಸ್ಕೂಟರ್‌ಗಳ ನಡುವೆ ಡಿಕ್ಕಿ: ಮಹಿಳೆಗೆ ಗಾಯ

ನಾಪೋಕ್ಲು, ಡಿ.23– ಇಲ್ಲಿಗೆ ಸಮೀಪದ ಚೆಯ್ಯಂಡಾಣೆ ಗ್ರಾಮದ ನರಿಯಂದಡ ಪ್ರೌಢಶಾಲೆಯ ಬಳಿ ಎರಡು ಸ್ಕೂಟರ್‌ಗಳ ನಡುವೆ ಡಿಕ್ಕಿ ಸಂಭವಿಸಿ ಮಹಿಳೆಯೊಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ಶುಕ್ರವಾರ ಸಂಜೆ ನಡೆದಿದೆ.

ಸ್ಥಳೀಯ ಮಹಿಳೆ ಸಂಧ್ಯಾ ಎಂಬಾಕೆಯ ಕಾಲು ಮುರಿದಿದ್ದು ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಮರದೋಡ ಕಕ್ಕಬೆ ಕುಂಜಿಲ ಗ್ರಾಮ ಪಂಚಾಯತಿ ಸದಸ್ಯ ಮರದೋಡದ ಚೋಯಮಾದಂಡ ಹರೀಶ್ ಬೋಪಣ್ಣ ಗಾಯಗೊಂಡ ಮಹಿಳೆಯನ್ನು ವಿರಾಜಪೇಟೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಮಂಗಳೂರು ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ರಸ್ತೆ ಅಪಘಾತದಲ್ಲಿ ಕ್ಯಾಂಟಿನ್ ಮಾಲೀಕ ಸಾವು

ಒಂದೇ ಕುಟುಂಬದ 8 ಮಂದಿಗೆ ತೀವ್ರ ಗಾಯ



ಮಡಿಕೇರಿ,ಡಿ.23– ಸುಬ್ರಹ್ಮಣ್ಯ–ಧರ್ಮಸ್ಥಳ ರಾಜ್ಯ ಹೆದ್ದಾರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಸೋಮವಾರಪೇಟೆಯ ಕ್ಯಾಂಟಿನ್ ಮಾಲೀಕರೊಬ್ಬರು ಮೃತಪಟ್ಟು ಅವರ ಕುಟುಂಬದ 8 ಮಂದಿ ಗಂಭೀರವಾಗಿ ಗಾಯಗೊಂಡ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ. ಸೋಮವಾರಪೇಟೆ ತಾಲೂಕಿನ ಚೌಡ್ಲು ಗ್ರಾಮದ ಕೆಂಚುಮನೆ ನಿವಾಸಿ ರವಿ(53) ಮೃತ ದುರ್ದೈವಿ.

ಘಟನೆ ಹಿನ್ನೆಲೆ: ಸೋಮವಾರಪೇಟೆಯ ಖಾಸಗಿ ಬಸ್ ನಿಲ್ದಾಣದಲ್ಲಿ ಕ್ಯಾಂಟೀನ್ ಹೊಂದಿರುವ ರವಿ ಅವರು ಮಾರುತಿ ವ್ಯಾನ್‌ನಲ್ಲಿ ತಮ್ಮ ಹಾಗೂ ಸಹೋದರನ ಕುಟುಂಬದೊಂದಿಗೆ ಧರ್ಮಸ್ಥಳಕ್ಕೆ ತೆರಳಿ ಹಿಂದಿರುಗುತ್ತಿದ್ದರು. ಸುಬ್ರಮಣ್ಯ–ಧರ್ಮಸ್ಥಳ ಮುಖ್ಯ ರಸ್ತೆಯ ಮಾರ್ಧಾಳ ಸಮೀಪದ ಅಳೇರಿ ಎಂಬಲ್ಲಿ ಮಾರುತಿ ವ್ಯಾನ್ (ಕೆಎ12–ಎಂಎ.0218) ಎದುರಿನಿಂದ ಬಂದ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಮಾರುತಿ ವ್ಯಾನ್ ಮುಂಭಾಗ ಸಂಪೂರ್ಣ ಜಖಂ ಆಗಿದ್ದು, ರವಿ ಅವರು ತೀವ್ರ ಗಾಯಗೊಂಡಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಸ್ಥಳಾಂತರಿಸುವ ಸಂದರ್ಭ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ರವಿ ಅವರ ತಾಯಿ ಮಣಿಯಮ್ಮ(75), ಪತ್ನಿ ವಾಣಿ(47), ಪುತ್ರಿ ರಿಷಾ(19), ಪುತ್ರ ಶರಣ್(10), ಸಹೋದರ ಯೋಗೇಶ್(55), ಅವರ ಪತ್ನಿ ನೀತು(45), ಪುತ್ರಿ ನೇಹಾ(24), ಪುತ್ರ ಅಂಜನ್(14) ಅವರುಗಳು ಗಾಯಗೊಂಡಿದ್ದಾರೆ. ಎಲ್ಲಾ ಗಾಯಾಳುಗಳನ್ನು ಕಡಬ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ರಸ್ತೆಯ ತಿರುವು ಕಿರಿದಾಗಿದ್ದು ರಸ್ತೆಗೆ ಹೊಂದಿಕೊಂಡಂತಿರುವ ವಿದ್ಯುತ್ ಕಂಬದಿಂದಾಗಿ ಇಲ್ಲಿ ಹಲವು ಅಪಘಾತಗಳು ಸಂಭವಿಸಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಕಡಬ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕೊಡಗು ಪ್ರವಾಸಿ ತಾಣಗಳಿಗೆ ಪ್ರವಾಸಿಗರ ಲಗ್ಗೆ

ಹೋಟೆಲ್, ಲಾಡ್ಜ್, ಹೋಂ ಸ್ಟೇ, ರೆಸಾರ್ಟ್‌ಗಳು ಭರ್ತಿ




ಮಡಿಕೇರಿ: ಸರಣಿ ರಜೆಯಿಂದಾಗಿ ಕೊಡಗು ಜಿಲ್ಲೆಯ ಕಡೆಗೆ ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ಪ್ರವಾಸಿ ತಾಣಗಳಲ್ಲಿ ಇದೀಗ ಪ್ರವಾಸಿಗರೇ ತುಂಬಿದ್ದಾರೆ.

ದುಬಾರೆ, ಕಾವೇರಿ ನಿಸರ್ಗಧಾಮ, ಮಡಿಕೇರಿಯ ರಾಜಾಸೀಟು, ಅಬ್ಬಿಫಾಲ್ಸ್, ಮಾಂದಲ್ ಪಟ್ಟಿ, ಕೋಟೆ ಬೆಟ್ಟ, ಮಲ್ಲಳ್ಳಿ ಜಲಪಾತಗಳ ಕಡೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ತೆರಳುತ್ತಿದ್ದಾರೆ.

ಬೆಂಗಳೂರು, ಮೈಸೂರು, ತಮಿಳುನಾಡು, ಕೇರಳ ಸೇರಿದಂತೆ ವಿವಿಧ ಭಾಗಗಳಿಂದ ಪ್ರವಾಸಿಗರು ಆಗಮಿಸುತ್ತಿದ್ದು ಜಿಲ್ಲೆಯ ಬಹುತೇಕ ಲಾಡ್ಜ್‌ಗಳು, ಹೋಂ ಸ್ಟೇ, ರೆಸಾರ್ಟ್‌ಗಳು ಪ್ರವಾಸಿಗರಿಂದ ಭರ್ತಿಯಾಗಿದೆ. ಮಾತ್ರವಲ್ಲದೇ ವರ್ಷಾಂತ್ಯವನ್ನು ಸವಿಯಲು ಕೂಡ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಕೊಡಗಿಗೆ ಆಗಮಿಸಲಿದ್ದು, ಅದಕ್ಕಾಗಿಯೇ ತಾವು ಉಳಿದುಕೊಳ್ಳುವ ಸ್ಥಳಗಳನ್ನು ಆನ್‌ಲೈನ್ ಮೂಲಕ ಬುಕ್ಕಿಂಗ್ ಕೂಡ ಮಾಡಿಕೊಂಡಿರುವುದು ಕಂಡು ಬಂದಿದೆ.

ಮಡಿಕೇರಿ–ಕುಶಾಲನಗರ ಹೆದ್ದಾರಿ, ಗೋಣಿಕೊಪ್ಪ–ವಿರಾಜಪೇಟೆ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಪ್ರವಾಸಿಗರ ವಾಹನಗಳು ಕಂಡು ಬರುತ್ತಿದ್ದು, ಸಹಜವಾಗಿಯೇ ಟ್ರಾಫಿಕ್ ಜಾಮ್ ಕಂಡು ಬರುತ್ತಿದೆ. ಪ್ರವಾಸಿಗರು ಜಿಲ್ಲೆಗೆ ಆಗಮಿಸುತ್ತಿರುವ ಕಾರಣ ಪ್ರವಾಸೋದ್ಯಮವನ್ನೇ ನಂಬಿಕೊಂಡು ಬದುಕು ಕಟ್ಟಿಕೊಂಡವರು ನಿರಾಳರಾಗಿದ್ದಾರೆ. ಪ್ರವಾಸಿ ತಾಣಗಳಿಗೆ ತೆರಳುವ ಜೀಪುಗಳು, ಟ್ಯಾಕ್ಸಿಗಳು, ಸುತ್ತಮುತ್ತಲಿನ ಅಂಗಡಿಗಳು, ಸ್ಪೈಸಸ್ ಮಳಿಗೆಗಳು ಮತ್ತು ಪ್ರವಾಸೋದ್ಯಮ ಅವಲಂಬಿ ಉದ್ಯಮಗಳಲ್ಲಿ ಮತ್ತೆ ಚೇತರಿಕೆ ಕಂಡು ಬಂದಿದೆ.

ಇಬ್ಬರು ಅಧಿಕಾರಿಗಳು ಲೋಕಾಯುಕ್ತ ಬಲೆಗೆ



ಶ್ರೀರಂಗಪಟ್ಟಣ, ಡಿ.23– ಪೌತಿ ಖಾತೆ ಬದಲಾವಣೆಗೆ ಒಂದು ಲಕ್ಷ ರೂ. ಲಂಚ ಪಡೆಯುತ್ತಿದ್ದ ವೇಳೆ ಪಟ್ಟಣದ ಪುರಸಭಾ ಮುಖ್ಯಾಧಿಕಾರಿ ರಾಣಿ, ಕಂದಾಯ ಅಧಿಕಾರಿ ಗಿರೀಶ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮಂಡ್ಯ ನಿವಾಸಿ ಪ್ರಶಾಂತ್, ತಮ್ಮ ತಾಯಿ ಹೆಸರಿನಲ್ಲಿ ಗಂಜಾಂನಲ್ಲಿದ್ದ ನಿವೇಶನದ ಪೌತಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರು. ಈ ವೇಳೆ ಕೆಲಸ ಮಾಡಿಕೊಡಲು ಆರೋಪಿಗಳು 1.80 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಪ್ರಶಾಂತ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಎಸ್‌ಪಿ ವಿ.ಜೆ.ಸುಜಿತ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಸುನೀಲ್ ಕುಮಾರ್, ಇನ್ಸ್‌ಪೆಕ್ಟರ್ ಮೋಹನ್‌ರೆಡ್ಡಿ ಹಾಗೂ ಸಿಬ್ಬಂದಿ ದಾಳಿ ನಡೆಸಿ ಶನಿವಾರ ಮಧ್ಯಾಹ್ನ ಪಟ್ಟಣದ ಪುರಸಭೆಯಲ್ಲಿ ಮುಖ್ಯಾಧಿಕಾರಿ ರಾಣಿ ಹಾಗೂ ಗಿರೀಶ್ 1 ಲಕ್ಷ ರೂ. ಲಂಚ ಪಡೆಯುತ್ತಿದ್ದ ವೇಳೆ ಹಣದ ಸಮೇತ ವಶಕ್ಕೆ ಪಡೆದಿದ್ದಾರೆ.

ಸಮಾಜದಲ್ಲಿ ಗುರುವಿನ ಸ್ಥಾನ ದೊಡ್ಡದು

ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ



ಪಾಂಡವಪುರ, ಡಿ.23– ಸಮಾಜದಲ್ಲಿ ಗುರುವಿನ ಸ್ಥಾನ ದೊಡ್ಡದು. ಹೀಗಾಗಿ ಗುರುಗಳು ಕೊಟ್ಟ ಶಿಕ್ಷಣದಿಂದ ವಿದ್ಯಾರ್ಥಿಗಳು ಸಮಾಜದಲ್ಲಿ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಿದೆ ಎಂದು ಶಾಲೆಯ ಹಿರಿಯ ವಿದ್ಯಾರ್ಥಿ, ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ತಿಳಿಸಿದರು.

ತಾಲೂಕಿನ ಸುಂಕಾತೊಣ್ಣೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲೆಯ ಹಿರಿಯ ವಿದ್ಯಾರ್ಥಿಗಳ ಬಳಗದಿಂದ ಶನಿವಾರ ನಡೆದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯೆ ಕೊಟ್ಟ ಗುರುಗಳನ್ನು ಅಭಿನಂದಿಸುತ್ತಿರುವುದು ನಮಗೆ ಭಾವನಾತ್ಮಕ ಕ್ಷಣವಾಗಿದೆ. ಗುರುಗಳನ್ನು ಗೌರವದಿಂದ ಕಾಣುವ ಜೊತೆಗೆ ಅಭಿನಂದಿಸಿದಾಗ ಮಾತ್ರ ಪ್ರತಿಯೊಬ್ಬ ವಿದ್ಯಾರ್ಥಿಗಳ ಬದುಕು ಸಾರ್ಥಕವಾಗುತ್ತದೆ ಎಂದರು.

ಗ್ರಾಮೀಣ ಮಕ್ಕಳು ಶಾಲೆಗಳಿಗೆ ಬರದಿದ್ದಾಗ ಗುರುಗಳು ಮಕ್ಕಳನ್ನು ಶಾಲೆಗೆ ಕರೆತಂದು ಅಕ್ಷರ ಜ್ಞಾನ ಕೊಟ್ಟಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಶಿಕ್ಷಣವಂತರಾಗಿ ಬದುಕು ಕಟ್ಟಿಕೊಂಡು ಸಮಾಜದಲ್ಲಿ ಗೌರವದಿಂದ ಜೀವನ ನಡೆಸಲು ಸಹಕಾರಿಯಾಗಿದೆ. ನೀವು ಕೊಟ್ಟ ವಿದ್ಯೆಯಿಂದಲೇ ನಾನು ಐದು ಪದವಿಗಳನ್ನು ಪಡೆದು ಸಮಾಜದಲ್ಲಿ ಗಣ್ಯ ವ್ಯಕ್ತಿಯಾಗಿ ಬದುಕು ನಡೆಸುತ್ತಿದ್ದೇನೆ. ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸುವ ಮೂವರು ವಿದ್ಯಾರ್ಥಿಗಳಿಗೆ ವೈಯಕ್ತಿಕ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುವುದು ಎಂದರು.

ನಿವೃತ್ತ ಬಿಇಓ ಸುವರ್ಣದೇವಿ ಮಾತನಾಡಿ, ನಿವೃತ್ತಿಯ ನಂತರವೂ ಹಳೆಯ ವಿದ್ಯಾರ್ಥಿಗಳಿಂದ ಸನ್ಮಾನ ಸ್ವೀಕರಿಸುವುದು ಸಂತಷದ ಕ್ಷಣ. ಅಭಿನಂದನೆಯಿಂದ ಜವಾಬ್ದಾರಿ ಹೆಚ್ಚಿಸಿದ್ದೀರಿ. ಇಲ್ಲಿ ಭಾಗವಹಿಸಿರುವ ಎಲ್ಲಾ ಶಿಕ್ಷಕರು ಸಾರ್ಥಕತೆ ಮನೋಭಾವದಿಂದ ಸನ್ಮಾನ ಸ್ವೀಕರಿಸಿದ್ದೇನೆ ಎಂದರು.

ಇದೇ ವೇಳೆ ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತ ಶಿಕ್ಷಕರಾದ ಬಿ.ಸುವರ್ಣದೇವಿ, ಎಲ್.ಎನ್.ನಾಯಕ್, ಬಿ.ಕೆ.ನಾಗಭೂಷಣ್, ಬಿ.ಸಿ.ಸುಮಿತ್ರಮ್ಮ, ಟಿಸಿಜೆ ಜಗದೀಶ್, ಆರ್.ಬಿ.ಮಹೇಶ್, ಕೆ.ಬಿ.ಎಲ್. ಕುಮಾರ್, ಆರ್.ನಾಗರಾಜು, ಪಿ.ಎಲ್. ನಾರಾಯಣ್, ಜಿ.ಆರ್.ನರಸಿಂಹಮೂರ್ತಿ, ಶಿಕ್ಷಕ ಯೋಗಾನಂದ ಸೇರಿದಂತೆ ಹಲವು ಶಿಕ್ಷಕರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನಾ ಎಲ್ಲಾ ನಿವೃತ್ತ ಶಿಕ್ಷಕರನ್ನು ಹಿರಿಯ ವಿದ್ಯಾರ್ಥಿಗಳು ಗ್ರಾಮದಿಂದ ಶಾಲೆವರೆಗೂ ಮೆರವಣಿಗೆ ನಡೆಸಿದರು.

ಸಮಾರಂಭದಲ್ಲಿ ಹಿರಿಯ ವಿದ್ಯಾರ್ಥಿಗಳಾದ ರಾಮಕೃಷ್ಣೇಗೌಡ, ಈ.ನಿಂಗರಾಜ್, ಹರೀಶ್, ಶ್ರೀನಿವಾಸ್, ಶಂಕರ್, ಮೊಗ್ಗಣ್ಣ, ಯೋಗರಾಜು, ದೈತೇಗೌಡ, ಎಸ್.ಎಂ.ಯೋಗರಾಜ್, ಮಂಜುನಾಥ್, ಕಾಳೇಗೌಡ, ಎಂ.ಯು.ಯೋಗ, ಎಸ್.ಕೆ.ಕಾಳೇಗೌಡ, ಚಿಕ್ಕಣ್ಣ ಉಮೇಶ್, ಮಹೇಶ್, ಕೃಷ್ಣೇಗೌಡ, ಮುಖ್ಯಶಿಕ್ಷಕಿ ಸರಿತ ಸೇರಿದಂತೆ ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಕೆ.ಆರ್.ಪೇಟೆ ತಾಲೂಕಿನ ಅಗ್ರಹಾರಬಾಚಹಳ್ಳಿಯ ಶ್ರೀಚನ್ನಕೇಶವಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಅಂಗವಾಗಿ ವಿಶೇಷ ಪೂಜೆ ಶ್ರದ್ಧಾಭಕ್ತಿಯಿಂದ ನಡೆಯಿತು. ಆರ್‌ಟಿಓ ಮಲ್ಲಿಕಾರ್ಜುನ್ ಗ್ರಾಮದೇವತೆ ಲಕ್ಷ್ಮೀದೇವಿ ಹಾಗೂ ಶ್ರೀಚನ್ನಕೇಶವಸ್ವಾಮಿ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ಶಾಸಕ ಹೆಚ್.ಟಿ.ಮಂಜು, ಶಾಸಕರ ಧರ್ಮಪತ್ನಿ ರಮಾಮಂಜು, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್, ಪಿಡಿಓ ವಿನೋದ್, ಸೊಸೈಟಿ ಕಾರ್ಯದರ್ಶಿ ರಾಮಸ್ವಾಮಿ, ತಾಲೂಕು ಕರವೇ ಅಧ್ಯಕ್ಷ ವೇಣು ಇತರರಿದ್ದರು.

ಕೆ.ಶಂಕರೇಗೌಡ ನಿಧನ



ಮಂಡ್ಯ, ಡಿ.23– ನಗರಸಭೆ ಮಾಜಿ ಸದಸ್ಯ ಹಾಗೂ ಜನತಾ ಶಿಕ್ಷಣ ಟ್ರಸ್ಟ್ ಟ್ರಸ್ಟಿ ಕೆ.ಶಂಕರೇಗೌಡ(65) ಶನಿವಾರ ನಿಧನರಾದರು. ಮಂಡ್ಯದ ಗುರುರಾಜ ಕಾಂಟಿನೆಂಟಲ್ ಹೋಟೆಲ್ ಮತ್ತು ಕಲ್ಲಹಳ್ಳಿ ಗುರುಶಂಕರಾನಂದ ರೈಸ್‌ಮಿಲ್ ಮಾಲೀಕರೂ ಆಗಿದ್ದ ಶಂಕರೇಗೌಡರು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕಲ್ಲಹಳ್ಳಿಯಲ್ಲಿ ಡಿ.24 ರಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಹಿಜಾಬ್ ನಿರ್ಬಂಧ ವಾಪಸ್ ವಿಚಾರ

ಸಿಎಂ ನಮ್ಮ ಸಂಸ್ಕೃತಿ ಬೆಂಬಲಿಸಿದ್ದಾರೆ



ಮಂಡ್ಯ, ಡಿ.23– ಕಳೆದ ವರ್ಷ ಹಿಜಾಬ್ ಪರ–ವಿರೋಧದ ವೇಳೆ ಮಂಡ್ಯದ ಪಿಇಎಸ್ ಕಾಲೇಜು ಆವರಣದಲ್ಲಿ ಜೈ ಶ್ರೀರಾಮ್ ಘೋಷಣೆ ವೇಳೆ ಅಲ್ಲಾ ಹು ಅಕ್ಬರ್ ಎಂದು ಕೂಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದ್ದ ಯುವತಿ ಬಿ.ಬಿ.ಮುಸ್ಕಾನ್ ಖಾನ್, ಹಿಜಾಬ್ ನಿಷೇಧ ವಾಪಸ್ ಪಡೆದಿರುವ ಸರ್ಕಾರದ ನಿರ್ಧಾರಕ್ಕೆ ಸ್ವಾಗತ ಕೋರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ಸಂಸ್ಕೃತಿ ಬೆಂಬಲಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಮಂಡ್ಯದ ಸಾದತ್‌ನಗರದಲ್ಲಿರುವ ತಮ್ಮ ನಿವಾಸದಲ್ಲಿ ಮಾತನಾಡಿದ ಮುಸ್ಕಾನ್, ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುತ್ತಿರುವುದಕ್ಕೆ ಖುಷಿಯಾಗಿದೆ. ಇದಕ್ಕಾಗಿ ಸಿಎಂ ಸಿದ್ದರಾಮಯ್ಯ, ಸ್ಪೀಕರ್ ಯು.ಟಿ. ಖಾದರ್, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಜಮೀರ್ ಅಹಮದ್ ಎಲ್ಲರಿಗೂ ಧನ್ಯವಾದಗಳು ಎಂದರು.

ನಾವು ಅಣ್ಣ–ತಮ್ಮಂದಿರ ರೀತಿ ಕಾಲೇಜಿಗೆ ಹೋಗಿ ಓದುತ್ತಿದ್ದೆವು. ಅದೇ ರೀತಿ ನಾವು ಹೋಗಬೇಕಿದೆ. ಹಿಜಾಬ್ ನಮ್ಮ ಸಂಸ್ಕೃತಿ ಮತ್ತು ನಮ್ಮ ಹಕ್ಕು. ಹಿಜಾಬ್ ಹಕ್ಕು ವಾಪಸ್ ಬರುತ್ತದೆ ಎಂಬ ನಂಬಿಕೆ ಇತ್ತು. ಹಿಜಾಬ್ ನಮ್ಮ ಧರ್ಮ. ಇದನ್ನು ನಾವು ಪಾಲಿಸಬೇಕಿದೆ. ಹಿಜಾಬ್ ವಿವಾದದಿಂದ ಅನೇಕ ಮುಸ್ಲಿಂ ಹುಡುಗಿಯರು ಶಿಕ್ಷಣದಿಂದ ವಂಚಿತರಾಗಿದ್ದರು. ನಾನು ಸಹ ಒಂದು ವರ್ಷ ಕಾಲೇಜಿಗೆ ಹೋಗಿಲ್ಲ. ಈಗ ನಾನು ಪಿಇಎಸ್ ಕಾಲೇಜಿಗೆ ಹೋಗಿ, ಶಿಕ್ಷಣ ಪಡೆಯುತ್ತೇನೆ ಎಂದರು.

ಅನೇಕರು ಕಾಲೇಜಿಗೆ ಹೋಗಿ ಪರೀಕ್ಷೆ ಬರೆದಿಲ್ಲ. ಈಗ ಎಲ್ಲರೂ ಪರೀಕ್ಷೆಗೆ ಹಾಜರಾಗುತ್ತೇವೆ. ಶಿಕ್ಷಣದ ವಿಚಾರದಲ್ಲಿ ರಾಜಕೀಯ ಬೇಡ. ನಾವು ಅಣ್ಣ–ತಮ್ಮಂದಿರ ರೀತಿ ಇದ್ದೀವಿ. ಮುಂದೆಯೂ ಸಹ ಹಾಗೇಯೇ ಇರೋಣ. ನಾವು ಮೊದಲಿನಿಂದಲೂ ಹಿಜಾಬ್ ಧರಿಸುತ್ತಿದ್ದೆವು. ಎಲ್ಲಾ ಧರ್ಮವೂ ಒಂದೇ, ಮನುಷ್ಯರ ರೀತಿ ಬದುಕೋಣ. ಧರ್ಮಗಳ ನಡುವೆ ಸಂಘರ್ಷ ಬೇಡ ಎಂದರು.

ಯಾರು ಈ ಮುಸ್ಕಾನ್?: ಕಳೆದ ವರ್ಷ ಹಿಜಾಬ್ ಸಂಘರ್ಷ ತಾರಕಕ್ಕೇರಿದ್ದ ವೇಳೆ ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಜೈ ಶ್ರೀರಾಮ್ ಎಂದು ಘೋಷಣೆ ಕೂಗುವಾಗ ಬಿ.ಬಿ.ಮುಸ್ಕಾನ್ ಖಾನ್ ಹಿಜಾಬ್ ಧರಿಸಿ ಕಾಲೇಜಿಗೆ ಬಂದಾಗ ವಿದ್ಯಾರ್ಥಿಗಳ ಘೋಷಣೆ ಮತ್ತಷ್ಟು ಹೆಚ್ಚಾಯಿತು. ಆ ವೇಳೆ ಮುಸ್ಕಾನ್ ಸಹ ಘೋಷಣೆ ಕೂಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದಳು.

ಈ ವಿಚಾರ ಕೇವಲ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದು ಅನೇಕ ರಾಜಕಾರಣಿಗಳು ಹಾಗೂ ಧಾರ್ಮಿಕ ಮುಖಂಡರು ಮುಸ್ಕಾನ್ ನಿವಾಸಕ್ಕೆ ಭೇಟಿ ನೀಡಿ ಧನ ಸಹಾಯ ಮಾಡಿದ್ದರು. ಇದಿಷ್ಟೇ ಅಲ್ಲದೇ ಅಲ್‌ಖೈದಾ ಭಯೋತ್ಪಾದನೆ ಸಂಘಟನೆಯ ಮೋಸ್ಟ್ ವಾಂಟೆಡ್ ಉಗ್ರ ಅಲ್ ಜವಾಹರಿ ಸಹ ಅಫ್ಘಾನಿಸ್ಥಾನದಲ್ಲಿ ಕುಳಿತು ಮುಸ್ಕಾನ್ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದ. ಇದು ಭಾರಿ ಟೀಕೆಗೂ ಗುರಿಯಾಗಿತ್ತು.

ಜ.22, ಕೊಳ್ಳೇಗಾಲದಲ್ಲಿ ಬೃಹತ್ ಆರೋಗ್ಯ ಶಿಬಿರ

ಸಕಲ ಸಿದ್ಧತೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ



ಚಾಮರಾಜನಗರ, ಡಿ.23– ಕೊಳ್ಳೇಗಾಲದಲ್ಲಿ ಜ.22ರಂದು ಬೃಹತ್ ಆರೋಗ್ಯ ಶಿಬಿರ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಶನಿವಾರ ಬೃಹತ್ ಆರೋಗ್ಯ ಶಿಬಿರ ಸಂಬಂಧ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನರು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ನೆರವಾಗುವ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಜ.22ರಂದು ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ಆಯೋಜಿಸಬೇಕು. ಈ ತಪಾಸಣಾ ಶಿಬಿರದಲ್ಲಿ ಹಲವು ಬಗೆಯ ರೋಗಗಳ ತಪಾಸಣೆಗೆ ಅವಶ್ಯವಿರುವ ಸಕಲ ಸಿದ್ಧತೆಗಳನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಯಾವುದೇ ವ್ಯವಸ್ಥೆಗಳಿಗೆ ಕೊರತೆ ಬಾರದಂತೆ ಈಗಿನಿಂದಲೇ ಸಿದ್ಧತಾ ಕಾರ್ಯ ಆರಂಭಿಸುವಂತೆ ತಿಳಿಸಿದರು.

ಆರೋಗ್ಯ ತಪಾಸಣೆ, ಚಿಕಿತ್ಸೆ, ಸಲಹೆಗೆ ತಜ್ಞ ವೈದ್ಯರು, ವೈದ್ಯಕೀಯ ಪ್ರಮುಖರನ್ನು ನಿಯೋಜಿಸಬೇಕು. ನರ್ಸಿಂಗ್, ಪ್ಯಾರಾ ಮೆಡಿಕಲ್ ಸಿಬ್ಬಂದಿ ಸೇವೆ ಬಳಸಿಕೊಳ್ಳಬೇಕು. ತಪಾಸಣಾ ಸಲಕರಣೆಗಳು, ಆಧುನಿಕ ತಂತ್ರಜ್ಞಾನದ ವೈದ್ಯಕೀಯ ಪರಿಕರಗಳು ಆರೋಗ್ಯ ಶಿಬಿರದಲ್ಲಿರಬೇಕು. ಅತ್ಯಾಧುನಿಕ ತಪಾಸಣಾ ಸಲಕರಣೆಗಳನ್ನು ಒಳಗೊಂಡ ವಿಶೇಷ ಆರೋಗ್ಯ ಸೌಲಭ್ಯದ ವಾಹನವನ್ನು ಬೆಂಗಳೂರಿನಿಂದ ಕಳುಹಿಸಲಾಗುತ್ತದೆ. ಜಿಲ್ಲೆಯಲ್ಲಿ ಲಭ್ಯವಿರುವ ಆರೋಗ್ಯ ಇಲಾಖೆ ವಾಹನಗಳನ್ನು ಬಳಸಿಕೊಳ್ಳಬೇಕು ಎಂದರು.

ಹೆಚ್ಚು ಜನರು ಆರೋಗ್ಯ ತಪಾಸಣಾ ಶಿಬಿರದ ಪ್ರಯೋಜನ ಪಡೆಯಲು ಪೂರಕವಾಗಿರುವ ಸಿದ್ಧತೆಗಳನ್ನು ಮಾಡಬೇಕು. ಪ್ರತ್ಯೇಕ ಕೌಂಟರ್‌ಗಳು ಇರಬೇಕು. ಕುಳಿತುಕೊಳ್ಳಲು ನೆರಳಿನ ವ್ಯವಸ್ಥೆ, ಆಸನಗಳು ಹೆಚ್ಚು ಒದಗಿಸಬೇಕು. ಊಟ, ಉಪಾಹಾರ, ಕುಡಿಯುವ ನೀರು, ವಾಹನಗಳ ನಿಲುಗಡೆಗೆ ಸ್ಥಳಾವಕಾಶ ಇರುವಂತೆ ವ್ಯವಸ್ಥೆ ಮಾಡಬೇಕು ಎಂದು ಸೂಚಿಸಿದರು.

ಆರೋಗ್ಯ ಶಿಬಿರದಲ್ಲಿ ನಿರಂತರ ವಿದ್ಯುತ್ ಪೂರೈಕೆ ಇರಬೇಕು. ಜನರೇಟರ್ ವ್ಯವಸ್ಥೆ ಕಲ್ಪಿಸಬೇಕು. ತಪಾಸಣೆಗೆ ಬರುವವರ ನೋಂದಣಿ ಮಾಡಬೇಕು. ಔಷಧಗಳನ್ನು ವಿತರಿಸಬೇಕು. ಪರಿಪೂರ್ಣವಾದ ವ್ಯವಸ್ಥೆಗಳೊಂದಿಗೆ ಬೃಹತ್ ಆರೋಗ್ಯ ಶಿಬಿರ ಆಯೋಜಿಸಿ ಜನರಿಗೆ ಆರೋಗ್ಯ ಸೌಲಭ್ಯಗಳನ್ನು ತಲುಪಿಸುವ ಮಹತ್ತರ ಜವಾಬ್ದಾರಿಯನ್ನು ಅಧಿಕಾರಿಗಳು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ತಿಳಿಸಿದರು.

ಸಭೆಯಲ್ಲಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಚಿದಂಬರ, ವೈದ್ಯಕೀಯ ಕಾಲೇಜಿನ ನಿರ್ದೇಶಕರು ಹಾಗೂ ಡೀನ್ ಡಾ.ಮಂಜುನಾಥ್, ತಹಸೀಲ್ದಾರ್ ಮಂಜುಳ, ಡಿವೈಎಸ್‌ಪಿ ಸೋಮಣ್ಣಗೌಡ, ಹಿರಿಯ ವೈದ್ಯಾಧಿಕಾರಿಗಳು, ತಾಲೂಕು ಆರೋಗ್ಯ ಅಧಿಕಾರಿಗಳು, ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಇದೇ ವೇಳೆ ಶಾಸಕರು, ಅಧಿಕಾರಿಗಳೊಂದಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಆರೋಗ್ಯ ಶಿಬಿರ ನಡೆಯುವ ಎಂಜಿಎಸ್‌ವಿ ಕಾಲೇಜು ಆವರಣಕ್ಕೆ ಭೇಟಿ ನೀಡಿ ಪರಿಶೀಲಿಸಿ, ಅಗತ್ಯ ಸೂಚನೆ ನೀಡಿದರು.

ಅಕ್ರಮ ಗಣಿಗಾರಿಕೆ: 21.14 ಲಕ್ಷ ದಂಡ ವಸೂಲಿ



ಚಾಮರಾಜನಗರ, ಡಿ.23– ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ಹಾಗೂ ಕಟ್ಟಡ ಕಲ್ಲು ಸಾಗಾಣೆ ಮಾಡುವವರ ವಿರುದ್ಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಪೊಲೀಸ್ ಠಾಣೆಯಲ್ಲಿ 54 ಪ್ರಕರಣಗಳನ್ನು ದಾಖಲಿಸಿ, 21.14 ಲಕ್ಷ ರೂ. ವಸೂಲಿ ಮಾಡಿದ್ದಾರೆ.

ಕಳೆದ ಏಪ್ರಿಲ್‌ನಿಂದ ಇಲ್ಲಿವರೆಗೆ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ಹಾಗೂ ಹನೂರು ತಾಲೂಕಿನಲ್ಲಿ ನಡೆದ ಅನಧಿಕೃತ ಗಣಿಗಾರಿಕೆ ಹಾಗೂ ಸಾಗಾಣಿಕೆ ಸಂಬಂಧ 54 ಪ್ರಕರಣಗಳನ್ನು ದಾಖಲಿಸಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು, 21.14 ಲಕ್ಷ ರೂ. ದಂಡ ವಸೂಲಿ ಮಾಡಿ ಸರ್ಕಾರದ ಖಜಾನೆಗೆ ಜಮಾ ಮಾಡಿದ್ದಾರೆ.

ಅಲಂಕಾರಿಕ ಶಿಲೆಯನ್ನು ಅಕ್ರಮ ಸಾಗಾಣೆ ಮಾಡಿದ 3 ಲಾರಿ ಪತ್ತೆ ಹಚ್ಚಿ 3.49 ಲಕ್ಷ ರೂ. ದಂಡ ವಿಧಿಸಿದ್ದರೆ, ಅದೇ ರೀತಿ ಕಟ್ಟಡ ಕಲ್ಲು ಸಾಗಾಣೆ ಮಾಡಿದ 39 ಲಾರಿಗಳ ಮೇಲೆ ಪ್ರಕರಣ ದಾಖಲಿಸಿ 15.64 ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ. ಗಣಿಗಾರಿಕೆಯಲ್ಲಿ ಒಂದು ಪ್ರಕರಣ ದಾಖಲಿಸಿ 2.74 ಲಕ್ಷ ದಂಡ ಹಾಕಲಾಗಿದೆ. ಪರವಾನಗಿ ಇಲ್ಲದೇ ಮರಳು ಸಾಗಿಸುತ್ತಿದ್ದ 11 ಲಾರಿಗಳ ವಶಕ್ಕೆ ಪಡೆದು 1.78 ಲಕ್ಷ ರೂ. ದಂಡ ಹಾಗೂ ಗ್ರಾವೆಲ್ ಸಾಗಿಸುತ್ತಿದ್ದ ಲಾರಿಯೊಂದಕ್ಕೆ 23 ಸಾವಿರ ದಂಡ ವಿಧಿಸುವ ಮೂಲಕ ಅಕ್ರಮ ಗಣಿಗಾರಿಕೆ ಹಾಗೂ ಸಾಗಾಣಿಕೆಗೆ ಕಡಿವಾಣ ಹಾಕಲಾಗಿದ್ದು, ಇನ್ನು ಮುಂದೆಯೂ ಕೂಡಾ ವ್ಯಾಪಕ ಕ್ರಮ ಕೈಗೊಳ್ಳುವುದಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕರಾದ ಪದ್ಮಜಾ ತಿಳಿಸಿದ್ದಾರೆ. ಈವರೆಗೂ ಕೈಗೊಂಡ ಕಾರ್ಯಾಚರಣೆಯಲ್ಲಿ ಭೂ ವಿಜ್ಞಾನಿಗಳಾದ ಮಹದೇವಸ್ವಾಮಿ, ಮಲ್ಲೇಶ್, ಪ್ರಸನ್ನ, ಜನಾರ್ಧನ್, ಯಶಸ್ವಿನಿ, ಅಶ್ವಿನಿ ಹಾಗೂ ಪುಷ್ಪ ಪಾಲ್ಗೊಂಡಿದ್ದರು.

ಡೈರಿ ಚುನಾವಣೆ ರದ್ದಿಗೆ ಆಗ್ರಹಿಸಿ ಪ್ರತಿಭಟನೆ



ಯಳಂದೂರು, ಡಿ.23– ಸಂಘದ ಸದಸ್ಯರನ್ನು ಮತದಾರರ ಪಟ್ಟಿಯಿಂದ ಕೈ ಬಿಟ್ಟು, ಚುನಾವಣಾ ನಿಯಮಗಳನ್ನು ಪಾಲಿಸದೇ ಸಂಘದ ಕಾರ್ಯದರ್ಶಿ ಚುನಾವಣೆ ನಡೆಸುತ್ತಿದ್ದಾರೆ ಎಂದು ಆರೋಪಿಸಿ ರೈತರು ಶನಿವಾರ ಪ್ರತಿಭಟನೆ ನಡೆಸಿದರು.

ತಾಲೂಕಿನ ಅಂಬಳೆ ಗ್ರಾಮದ ಡೈರಿ ಎದುರು ಶನಿವಾರ ಸಂಜೆ ಜಮಾಯಿಸಿದ ರೈತರು, ಸಂಘದ ಕಾರ್ಯದರ್ಶಿ ಪುಟ್ಟಬುದ್ಧಿ ಮುಂಬರುವ 5 ವರ್ಷಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಡೈರಿಗೆ ಹಾಲು ಪೂರೈಕೆ ಮಾಡುವ ಸಂಘದ ಸದಸ್ಯರಿಗೆ ಯಾವುದೇ ಮಾಹಿತಿ ನೀಡದೇ ತಮಗಿಷ್ಟ ಬಂದವರನ್ನು ಅರ್ಹ ಮತದಾರರ ಪಟ್ಟಿಗೆ ಸೇರಿಸಿ ಉಳಿದ 81 ಸದಸ್ಯರನ್ನು ಕೈ ಬಿಟ್ಟು ಚುನಾವಣೆ ನಡೆಸುತ್ತಿದ್ದಾರೆ. ಅಲ್ಲದೇ ಚುನಾವಣೆ ಸಂಬಂಧ ಯಾರಿಗೂ ನೋಟಿಸ್ ನೀಡಿಲ್ಲ. ಸಾರ್ವತ್ರಿಕವಾಗಿ ನಡೆಯುವ ಪತ್ರಿಕಾ ಪ್ರಕಟಣೆಯನ್ನು ಮುಚ್ಚಿಟ್ಟು ವಿಳಂಬವಾಗಿ ಒಂದು ಪತ್ರಿಕೆಯಲ್ಲಿ ಮಾತ್ರ ಪ್ರಕಟಿಸಿದ್ದಾರೆ. ಅಲ್ಲದೇ ಕಚೇರಿ ಮುಂಭಾಗ ನೋಟಿಸ್ ಪ್ರಕಟಿಸಿಲ್ಲ. ಇದರಿಂದ ಅರ್ಹ ಮತದಾರರನ್ನು ಬಿಟ್ಟು ತಮಗೆ ಬೇಕಾದವರನ್ನು ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳುವ ಉದ್ದೇಶವಿದೆ. ಸಂಘದ ಒಟ್ಟು 13 ನಿರ್ದೇಶಕ ಸ್ಥಾನಕ್ಕೆ 19 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ 6 ನಾಮಪತ್ರ ತಿರಸ್ಕಾರಗೊಂಡಿದೆ. ಅರ್ಜಿ ಸಲ್ಲಿಸಲು ಡಿ.24 ಕೊನೆ ದಿನವಾಗಿರುವುದನ್ನು ಗಮನಿಸಿದರೇ ಇದೀಗ ಕಣದಲ್ಲಿರುವ 13 ಮಂದಿಯನ್ನು ಅವಿರೋಧ ಆಯ್ಕೆ ಮಾಡುವ ಸಂಭವವಿದೆ. ಆದ್ದರಿಂದ ಸಂಘದ ಚುನಾವಣೆಯನ್ನು ರದ್ದುಪಡಿಸಿ, ಅರ್ಹ ಮತದಾರರನ್ನು ಸೇರಿಸಿ ಮತ್ತೊಮ್ಮೆ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿ ಸಂಘದ ರಿಟರ್ನಿಂಗ್ ಆಫೀಸರ್ ಹಾಗೂ ಲೆಕ್ಕ ಸಹಾಯಕ ಜಿಯಾವುಲ್ಲಾ ಅವರಿಗೆ ರೈತರು ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ರೈತ ಮುಖಂಡ ಶಿವಕುಮಾರಸ್ವಾಮಿ, ಹಾಲು ಉತ್ಪಾದಕರಾದ ಸನಂತ್ ಕುಮಾರ್, ಲೋಕೇಶ್, ನಂಜುಂಡಸ್ವಾಮಿ, ಶಿವಕುಮಾರ್, ಬಸವಣ್ಣ ಜವಪ್ಪ ನಾಗೇಂದ್ರ, ರವಿ, ಶಿವಮಲ್ಲು, ಪುಟ್ಟಸ್ವಾಮಿ, ಮಹೇಶ್ ಸೇರಿದಂತೆ ಹಲವು ರೈತರು ಹಾಜರಿದ್ದರು.



ವೈಕುಂಠ ಏಕಾದಶಿ ಪ್ರಯುಕ್ತ ಚಾ.ನಗರ ತಾಲೂಕಿನ ಪಣ್ಯದಹುಂಡಿ ಗ್ರಾಮದ ಬಳಿಯ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಗೆ ವಿಶೇಷವಾಗಿ ವಿವಿಧ ಬಗೆಯ ಹೂಗಳಿಂದ ಅಲಂಕಾರ ಮಾಡಲಾಗಿತ್ತು

ಮೂರನೇ ಪುಟದಿಂದ

ಆದರೆ ಯಾರೂ ಅಡ್ಡಿಪಡಿಸಬಾರದು

ಎಲ್ಲಾ ರೀತಿಯ ಸಹಕಾರವನ್ನೂ ನೀಡಲಾಗುವುದು ಎಂದು ಭರವಸೆ ನೀಡಿದರು.

'ಅತಿಥಿ ದೇವೋ ಭವ' ಎನ್ನುವುದು ಹೋಟೆಲ್‌ನಲ್ಲಿ ಮಾತ್ರ. ಮೈಸೂರಿಗೆ ಬರುವ ಪ್ರವಾಸಿಗರ ಆತಿಥ್ಯ ವಹಿಸುವುದು ಬಹಳ ಮುಖ್ಯ. ಈ ಕೆಲಸವನ್ನು ನೂರಾರು ವರ್ಷಗಳಿಂದ ಮಾಡುತ್ತಿರುವ ಹೋಟೆಲ್ ಉದ್ಯಮಿಗಳ ಸೇವೆ ಬಹಳ ದೊಡ್ಡದು. ಯೂರೋಪ್ ದೇಶಗಳಲ್ಲಿ 'ಯುನಿವರ್ಸಲ್ ಬೇಸಿಕ್ ಇನ್‌ಕಮ್' ಮಾದರಿಯ ಯೋಜನೆಗಳಿವೆ. ಜನರ ಕೈಯ್ಯಲ್ಲಿ ಹಣ ಇದ್ದರೆ ಆರ್ಥಿಕ ಚಟುವಟಿಕೆಗಳು ನಡೆಯುತ್ತವೆ. ಇದೇ ಚಿಂತನೆಯಲ್ಲಿ ನಾವು ಪ್ರಮುಖ ಯೋಜನೆ(ಶಕ್ತಿ, ಗೃಹಲಕ್ಷ್ಮಿ)ಗಳನ್ನು ಜಾರಿಗೆ ತಂದಿದ್ದೇವೆ. ಇದರಿಂದ ಹೋಟೆಲ್ ಸೇರಿದಂತೆ ಎಲ್ಲಾ ಉದ್ಯಮಗಳಿಗೂ ಅನುಕೂಲವಾಗಲಿದೆ. ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗಲಿದ್ದು, ರಾಜ್ಯದ ಜಿಡಿಪಿ ಪ್ರಮಾಣ ಹೆಚ್ಚಾಗಲಿದೆ ಎಂದರಲ್ಲದೆ ಗೊತ್ತಾಯಿತೇನ್ರಿ ಶ್ರೀವತ್ಸ(ಕೆ.ಆರ್.ಕ್ಷೇತ್ರ ಶಾಸಕ)... ಇದರ ಬಗ್ಗೆ ಎಲ್ಲರೂ ಪ್ರಚಾರ ಮಾಡಬೇಕು ಎಂದು ಹಾಸ್ಯ ಚಟಾಕಿ ಹಾರಿಸಿದರು.

ಮೈಸೂರು ಅಭಿವೃದ್ಧಿ ವಿಚಾರದಲ್ಲಿ ನಾನು ಮಾಡಿದಷ್ಟು ಅಭಿವೃದ್ಧಿಯನ್ನು ಬೇರೆ ಯಾರಾದರೂ ಮಾಡಿದ್ದಾರಾ... ಎಂದು ಪ್ರಶ್ನಿಸಿ ಸಿದ್ದರಾಮಯ್ಯ, ಸುಮ್ಮನೆ ಸುಳ್ಳು ಹೇಳುವುದಲ್ಲ... ಏಯ್ ವತ್ಸ... ಮೈಸೂರು-ಬೆಂಗಳೂರು ಹೈವೇಯನ್ನು ಮಹದೇವಪ್ಪ, ನಾವು ಸೇರಿ ಮಾಡಿದ್ದು.. ನಿಮ್ಮ ಎಂಪಿಯಲ್ಲ... ಅವನ್ ಕ್ಷೇತ್ರ ಬರೋದೆ ಸಿದ್ದಲಿಂಗ ಪುರದವರೆಗೆ... ಅಂತಹದರಲ್ಲಿ ಹೇಗೆ ಮಾಡಲು ಸಾಧ್ಯ... ಅವನು ಸುಮ್ನೆ ಏನೋ ಹೇಳ್ತಾ ಇರ್ತಾನೆ... ನೀವು ಚಪ್ಪಾಳೆ ತಟ್ಟಿದ್ದೇ ತಟ್ಟಿದ್ದು... ಎಂದು ಮಾತಿನಲ್ಲೇ ತಿವಿದ ಸಿದ್ದರಾಮಯ್ಯ, ನಾವು ಇದ್ದಾಗ ಮೈಸೂರು ನಗರದ ಅಭಿವೃದ್ಧಿ ಮಾಡಿದ್ದೇವು. ಈಗ ಮತ್ತೆ ಬಂದಿದ್ದೇವೆ. ಅಭಿವೃದ್ಧಿ ಮಾಡಿಯೇ ಮಾಡುತ್ತೇವೆ. ಇದು ನಮ್ಮ ಜವಾಬ್ದಾರಿಯಾಗಿದ್ದು, ಯಾರೇ ವಿರೋಧ ಮಾಡಲಿ... ಪ್ರಶಂಸೆ ಮಾಡಲಿ... ನಾವು ಹೇಳಿದಂತೆ ನಡೆದುಕೊಳ್ಳುತ್ತೇವೆ. ಶೇ.12 ರಷ್ಟಿದ್ದ ಹೋಟೆಲ್ ಮೇಲಿನ ತೆರಿಗೆಯನ್ನು ಶೇ.4ಕ್ಕೆ ಇಳಿಸಿದ್ದು ಯಾರು... ಅದನ್ನು ಹೇಳಬೇಕಲ್ವಾ... ಆದ್ದರಿಂದ ನಾವು ನಿಮ್ಮ ಜೊತೆ ಇದ್ದೇವೆ... ನೀವು ನಮ್ಮ ಜೊತೆಗಿರಿ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಹಿರಿಯ ಮುಖಂಡ ಕೆ.ಮರಿಗೌಡ, ಮುಡಾ ಮಾಜಿ ಅಧ್ಯಕ್ಷ ಬಸವೇಗೌಡ, ರಾಜ್ಯ ಹೋಟೆಲ್ ಮಾಲೀಕರ ಸಂಘದ ಗೌರವ ಕಾರ್ಯದರ್ಶಿ ಜಿ.ಕೆ.ಶೆಟ್ಟಿ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಉಪಾಧ್ಯಕ್ಷ ಆನಂದ್‌ಶೆಟ್ಟಿ, ಸಂಘದ ನಿರ್ದೇಶಕರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹಿರಿಯ ಹೋಟೆಲ್ ಉದ್ಯಮಿಗಳಿಗೆ ಸನ್ಮಾನ...

ಇದೇ ವೇಳೆ ಹಿರಿಯ ಹೋಟೆಲ್ ಉದ್ಯಮಿಗಳಾದ ಕೆಂಚಪ್ಪ(ವೆಂಕಟೇಶ್ವರ ಸ್ವೀಟ್ಸ್), ಪುಟ್ಟಸ್ವಾಮಿ(ನಂದ ಹೋಟೆಲ್), ಗೋಪಾಲ್‌ರಾವ್(ನಂದಿನಿ ಹೋಟೆಲ್), ಗೋವಿಂದೇಗೌಡ(ವೈಶಾಕ್ ಹೋಟೆಲ್ ಗ್ರೂಪ್), ಪಿ.ಸಿ.ನಾಗಣ್ಣ(ಹೋಟೆಲ್ ಉಮಾಮಹೇಶ್ವರಿ), 50 ವರ್ಷಗಳಿಂದ ಒಂದೇ ಸ್ಥಳದಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿರುವ ಅನಂತ ತಂತ್ರಿ(ಅಜಂತ ಹೋಟೆಲ್), ಒ.ಪ್ರತಾಪ ಕುಮಾರ(ಇಂದ್ರ ಭವನ), ಎಸ್.ಸೋನುಚಂದ್ರ(ಇಂದ್ರಕೆಫೆ), ಕೆ.ಎಸ್.ಮಧುಸೂದನ್(ವೆಂಕಟೇಶ ಭವನ), ರಾಂ.ವಿಠಲದಾಸ್(ಈಗಲ್ ಬೇಕರಿ), ನಟರಾಜು(ಸ್ವಾಮಿ ಹೋಟೆಲ್) ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೆಯೇ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಇದೇ ವೇಳೆ ಹೋಟೆಲ್ ಉದ್ಯಮಕ್ಕೆ ಉದ್ಯಮ ಕ್ಷೇತ್ರ ಸ್ಥಾನ ನೀಡುವುದು, ಡಿಸ್ನಿಲ್ಯಾಂಡ್ ನಿರ್ಮಾಣ, ಫಿಲಂ ಸಿಟಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮೈಸೂರು ಹೋಟೆಲ್ ಮಾಲೀಕರ ಸಂಘದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರಲ್ಲಿ ಮತ್ತೊಬ್ಬರಲ್ಲಿ ಸೋಂಕು ಪತ್ತೆ

ಮೈಸೂರಿನಲ್ಲಿ ಹರಡದಂತೆ ತೀವ್ರ ನಿಗಾ ವಹಿಸಲಾಗಿದೆ ಎಂದು ತಿಳಿಸಿದರು. ಕೊರೊನಾ ಸೋಂಕಿನ ಲಕ್ಷಣ ಇರುವ 60 ಜನರಿಗೆ ಪ್ರತಿ ದಿನ ಪರೀಕ್ಷೆ ಮಾಡಿಸಲಾಗುತ್ತಿದೆ. ಒಂದು ವೇಳೆ ಕೊರೊನಾ ಸೋಂಕಿತರ ಸಂಖ್ಯೆ ದಿಢೀರ್ ಹೆಚ್ಚಾದರೆ ಸಾವಿರ ಜನರಿಗೆ ಪರೀಕ್ಷೆ ಮಾಡಿಸುವ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಕೊರೊನಾ ಪರೀಕ್ಷೆ ಮಾಡಿಸಲಾಗುತ್ತಿದೆ. ಆದರೆ ಪ್ರವಾಸಿ ತಾಣಗಳಲ್ಲಿ ಪರೀಕ್ಷೆ ಮಾಡಿಸುವ ಪರಿಸ್ಥಿತಿ ಇನ್ನು ಬಂದಿಲ್ಲವಾದ ಕಾರಣ ಈ ಬಗ್ಗೆ ಇನ್ನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಡಾ.ರಾಜೇಂದ್ರ ಸ್ಪಷ್ಟಪಡಿಸಿದರು. ಕೊರೊನಾ ಹರಡದಂತೆ ಜನರು ಎಚ್ಚರಿಕೆಯಿಂದ ಇರಬೇಕು. 60 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು ಎಂದು ಸೂಚನೆ ನೀಡಲಾಗಿದೆ ಎಂದರು.

ನ್ಯೂ ಇಯರ್ ಪಾರ್ಟಿಗೆ ನಿರ್ಬಂಧವಿಲ್ಲ

ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗಿರಬಹುದು. ಆದರೆ ಇದೇ ಕಾರಣದಿಂದ ಹೊಸ ವರ್ಷಾಚರಣೆಗೆ ನಿರ್ಬಂಧ ಹೇರುವುದಿಲ್ಲ ಎಂದು ಡಾ.ರಾಜೇಂದ್ರ ಸ್ಪಷ್ಟಪಡಿಸಿದರು. ಒಳಾಂಗಣದಲ್ಲಿ ನ್ಯೂ ಇಯರ್ ಪಾರ್ಟಿ ಮಾಡುವ ವೇಳೆ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದು ಸೇರಿದಂತೆ ಕೊರೊನಾ ನಿಯಮ ಪಾಲಿಸುವಂತೆ ಸೂಚನೆ ನೀಡಲಾಗಿದೆ ಎಂದರು. ಕರ್ನಾಟಕದ ಗಡಿ ಪ್ರದೇಶವಾದ ಬಾವಲಿ, ಮಾನಂದವಾಡಿ ಬಳಿ ತಮಿಳುನಾಡು ಹಾಗೂ ಕೇರಳದಿಂದ ಬರುವ ಜನರಲ್ಲಿ ಕೊರೊನಾ ರೋಗ ಲಕ್ಷಣ ಇದೆಯೇ ಎಂದು ವಿಚಾರಣೆ ಮಾಡಲಾಗುತ್ತಿದೆ. ಜಿಲ್ಲಾ ಕಣ್ಗಾವಲು ಪಡೆ ಇದರ ಪರೀಶಿಲನಾ ಕಾರ್ಯ ನಡೆಸುತ್ತಿದೆ ಎಂದು ಡಾ.ರಾಜೇಂದ್ರ ತಿಳಿಸಿದರು.

ಕೊರೊನಾ ಪರೀಕ್ಷೆಗಾಗಿ ಅಲೆದು ಅಲೆದು ಸುಸ್ತಾದರು

ಮೈಸೂರಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನ ಕಳೆದಂತೆ ಹೆಚ್ಚಾಗುತ್ತಿದ್ದರೂ ಆರೋಗ್ಯ ಇಲಾಖೆಯವರು ಇದನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ.

ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಕೊರೊನಾ ಟೆಸ್ಟಿಂಗ್ ಕೇಂದ್ರ ತೆರೆಯಲಾಗಿದೆ. ಆದರೆ ಅದು ಯಾವ ಜಾಗದಲ್ಲಿದೆ ಎಂಬ ಮಾಹಿತಿ ಸಾರ್ವಜನಿಕರಿಗೆ ಇಲ್ಲ.

ಮೈಸೂರಿನ ಹೆಬ್ಬಾಳಿನ ನಿವಾಸಿಯೊಬ್ಬರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕೊರೊನಾ ರೋಗ ಲಕ್ಷಣದ ಅನುಮಾನದ ಮೇರೆಗೆ ಕೊರೊನಾ ಟೆಸ್ಟ್ ಮಾಡಿಸಿಕೊಂಡು ಬರುವಂತೆ ಅಲ್ಲಿನ ವೈದ್ಯರು ಸಲಹೆ ನೀಡಿದರು. ಅದರಂತೆ ಜಿಲ್ಲಾಸ್ಪತ್ರೆಯಲ್ಲಿ ಕೊರೊನಾ ಪರೀಕ್ಷೆ ಮಾಡಿಸಲು ವಿಚಾರಿಸಿದಾಗ, ಇಲ್ಲಿ ಕೊರೊನಾ ಟೆಸ್ಟಿಂಗ್ ಕೇಂದ್ರವಿಲ್ಲ ಎಂದು ಸಿಬ್ಬಂದಿಗಳು ತಿಳಿಸಿ, ಕೆ.ಆರ್.ಆಸ್ಪತ್ರೆಗೆ ತೆರಳುವಂತೆ ಸಲಹೆ ನೀಡಿದ್ದಾರೆ.

ತರುವಾಯ ಅವರು ಕೆ.ಆರ್.ಆಸ್ಪತ್ರೆಗೆ ಹೋದಾಗ ಅಲಿ ಕೂಡ ಕೊರೊನಾ ಟೆಸ್ಟಿಂಗ್ ಕೇಂದ್ರದ ಬಗ್ಗೆ ಸರಿಯಾದ ಮಾಹಿತಿ ದೊರೆಯಲಿಲ್ಲ. ಇದರಿಂದ ಸುಮಾರು ಮೂರು ತಾಸು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದು ಅವರು ನಿತ್ರಾಣರಾದರು. ಕೊನೆಗೆ ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ಹಳೆ ಜಯದೇವ ಆಸ್ಪತ್ರೆ ಬಳಿ ಟೆಸ್ಟಿಂಗ್ ಕೇಂದ್ರ ಇರುವುದು ತಿಳಿದು ಬಂದಿತು. ನಂತರ ಅಲ್ಲಿ ಪರೀಕ್ಷೆ ಮಾಡಿಸಿಕೊಂಡು ಅಲ್ಲಿಂದ ತೆರಳಿದರು. ಹೀಗೆ ಕೆ.ಆರ್.ಆಸ್ಪತ್ರೆಯಲ್ಲಿ ಕೊರೊನಾ ಟೆಸ್ಟಿಂಗ್ ಕೇಂದ್ರ ಇರುವ ಬಗ್ಗೆ ಬಹಳಷ್ಟು ಜನರಿಗೆ ಮಾಹಿತಿಯೇ ಸಿಗುತ್ತಿಲ್ಲ. ಇದರಿಂದ ಜನರು ಕೊರೊನಾ ಪರೀಕ್ಷೆಗಾಗಿ ಅಲೆದು ಅಲೆದು ಸುಸ್ತಾಗುತ್ತಿದ್ದಾರೆ. ಕೊರೊನಾ ಲಕ್ಷಣವಿರುವ 60 ಜನರಿಗೆ ಪ್ರತಿದಿನ ಪರೀಕ್ಷೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಮಾಹಿತಿ ನೀಡಿದ್ದಾರೆ. ಆದರೆ ಕೊರೊನಾ ಟೆಸ್ಟಿಂಗ್ ಕೇಂದ್ರದ ಬಗ್ಗೆ ಜನರಿಗೆ ಮಾಹಿತಿಯೇ ಇಲ್ಲದಿರುವಾಗ ಈ ಅಂಕಿ ಅಂಶವನ್ನು ಹೇಗೆ ನೀಡಿದ್ದಾರೆ ಎಂಬುವುದು ಪ್ರಶ್ನೆಯಾಗಿದೆ. ಕೊರೊನಾ ಟೆಸ್ಟಿಂಗ್ ಕೇಂದ್ರಗಳನ್ನು ಹೆಚ್ಚಾಗಿ ತೆರೆದು ಕೊರೊನಾ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ಗಂಭೀರ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಮಹಾಮಾರಿ ಕೊರೊನಾ ತನ್ನ ಕದಂಬಬಾಹು ಚಾಚಲಿದೆ ಎಂಬ ಆತಂಕ ಜನರಲ್ಲಿ ಮನೆ ಮಾಡಿದೆ.

ಸಿಎಂ ಸಿದ್ದರಾಮಯ್ಯ ಯೂಟರ್ನ್

ಬಿಜೆಪಿಯು ಜನರು ಮತ್ತು ಸಮಾಜವನ್ನು ಬಟ್ಟೆ, ಉಡುಗೆ ಮತ್ತು ಜಾತಿಯ ಆಧಾರದ ಮೇಲೆ ವಿಭಜಿಸುತ್ತಿದೆ' ಎಂದು ಸಿಎಂ ದೂರಿದ್ದರು. ಹಿಜಾಬ್ ಘೋಷಣೆಗೆ ಸಂಬಂಧಿಸಿದಂತೆ ಪ್ರತಿಪಕ್ಷ ಬಿಜೆಪಿಯಿಂದ ಕಾಂಗ್ರೆಸ್ ಸರ್ಕಾರ ತೀವ್ರ ಟೀಕೆಗೆ ಗುರಿಯಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವು ಯುವ ಮನಸ್ಸುಗಳನ್ನು ಧಾರ್ಮಿಕ ಆಧಾರದ ಮೇಲೆ ವಿಭಜಿಸುತ್ತಿದೆ ಎಂದು ಬಿವೈ ವಿಜಯೇಂದ್ರ ಹೇಳಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯ ಬಿಜೆಪಿ ಅಧ್ಯಕ್ಷ ಬಿವೈ ವಿಜಯೇಂದ್ರ, ಸಿದ್ದರಾಮಯ್ಯ ಅವರು ಶೈಕ್ಷಣಿಕ ವಾತಾವರಣವನ್ನು ಹಾಳು ಮಾಡುತ್ತಿದ್ದಾರೆ. ಲೋಕಸಭೆ ಚುನಾವಣೆಗೆ ಮುನ್ನ ಕಾಂಗ್ರೆಸ್ ತುಷ್ಟೀಕರಣ ರಾಜಕಾರಣ ಮಾಡುತ್ತಿದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಅಲ್ಪಸಂಖ್ಯಾತರ ಸಾಕ್ಷರತೆ ಮತ್ತು ಉದ್ಯೋಗ ಪ್ರಮಾಣ ಇನ್ನೂ ಶೇ 50ರಷ್ಟಿದೆ. ಕಾಂಗ್ರೆಸ್ ಎಂದಿಗೂ ಅಲ್ಪಸಂಖ್ಯಾತರ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಲಿಲ್ಲ ಎಂದು ದೂರಿದರು. ಕಾಂಗ್ರೆಸ್ ಬ್ರಿಟಿಷರು ಅಳವಡಿಸಿಕೊಂಡಿದ್ದ ಒಡೆದು ಆಳುವ ನೀತಿಯನ್ನು ನಂಬುತ್ತದೆ. ಇದು ಬ್ರಿಟಿಷರ ಪರಂಪರೆಯನ್ನು ಮುಂದಕ್ಕೆ ಕೊಂಡೊಯ್ಯುತ್ತದೆ ಎಂದು ಹೇಳಿದರು. 2022ರಲ್ಲಿ ಹಿಂದಿನ ಬಿಜೆಪಿ ಸರ್ಕಾರವು ಕರ್ನಾಟಕದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಿತು.

ಸ್ವಚ್ಛತೆಗೆ ವಿದ್ಯಾರ್ಥಿಗಳ ಬಳಸುವುದು ನಿಷಿದ್ಧ

ಶಾಲೆಗಳಲ್ಲಿ ಶೌಚಾ ಲಯ ಶುಚಿಗೊಳಿಸಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಈಗ ನಡೆದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಶಿಸ್ತು ಕ್ರಮ ಕೈಗೊಂಡಿದ್ದಾರೆ. ಶಾಲಾ-ಕಾಲೇಜು ಮತ್ತು ವಸತಿ ನಿಲಯಗಳ ಬಗ್ಗೆ ನಿಗಾ ವಹಿಸುವಂತೆ ಸಮಾಜ ಕಲ್ಯಾಣ ಮತ್ತು ಶಿಕ್ಷಣ ಸಚಿವರಿಗೆ ತಿಳಿಸಿದ್ದೇನೆ ಎಂದಿದ್ದಾರೆ. ಪ್ರತಿಯೊಂದು ಶಾಲೆಯಲ್ಲಿಯೂ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರುವುದರ ಜೊತೆಗೆ ಅವುಗಳನ್ನು ಪ್ರತಿದಿನ ಶುಚಿಗೊಳಿಸಲು ಸಿಬ್ಬಂದಿಗಳ ನೇಮಕ ಮಾಡಿಕೊಳ್ಳುವಂತೆ ಸಚಿವರಿಗೆ ಹೇಳಿದ್ದೇನೆ ಎಂದಿದ್ದಾರೆ.

ಚೆನ್ನಾಗಿ ಓದಿ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಯಶಸ್ವಿಯಾಗಿ

● ವಿದ್ಯಾರ್ಥಿನಿಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ● ಕಾಗಿನೆಲೆ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಭೇಟಿ; ಪರಿಶೀಲನೆ

ಮೈಸೂರು, ಡಿ.23(ಎಂಕೆ)- ವಿದ್ಯಾರ್ಥಿನಿಯರು ಚೆನ್ನಾಗಿ ಓದಿ ಪದವಿ ಪಡೆಯುವುದರ ಜೊತೆಗೆ ಕೆಎಎಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಯಶಸ್ವಿಯಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ಹೇಳಿದರು.



ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಕಾಗಿನೆಲೆ ಮಹಾಸಂಸ್ಥಾನದ ಸಿದ್ದರಾಮಯ್ಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಶನಿವಾರ ಭೇಟಿ ನೀಡಿ ನೂತನ ಕಟ್ಟಡವನ್ನು ಪರಿಶೀಲಿಸಿ ವಿದ್ಯಾರ್ಥಿನಿಯರೊಂದಿಗೆ ಮಾತನಾಡಿದ ಅವರು, ಹೆಣ್ಣು ಮಕ್ಕಳು ಚೆನ್ನಾಗಿ ಓದಬೇಕು, ಯಾವುದೇ ಕಾರಣಕ್ಕೂ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಬಾರದು. ಪಿಯುಸಿ, ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಚೆನ್ನಾಗಿ ಓದಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಮೂಲಕ ಕೆಎಎಸ್ ಮಾಡಬೇಕು. ಅದಕ್ಕಾಗಿ ಈಗಿನಿಂದಲೇ ಸಿದ್ಧತೆ ನಡೆಸುವಂತೆ ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ಜಾತಿ ವ್ಯವಸ್ಥೆ ದೇವರು ಮಾಡಿದ್ದಲ್ಲ, ಮನುಷ್ಯರು ಮಾಡಿದ್ದು. ಹೆಣ್ಣು ಮಕ್ಕಳಿಗೆ ಶತಶತಮಾನಗಳಿಂದ ಶಿಕ್ಷಣದ ಹಕ್ಕು ಇರಲಿಲ್ಲ. ಮೌಢ್ಯವನ್ನು ಬಿತ್ತಿ, ಜಾತಿ ವ್ಯವಸ್ಥೆಯನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದರು. ಬಸವಾದಿ ಶರಣರು ಶ್ರೇಣೀಕೃತ ವ್ಯವಸ್ಥೆಯನ್ನು ತೆಗೆದುಹಾಕಿ ಸಮ ಸಮಾಜ ನಿರ್ಮಿಸಲು ಪ್ರಯತ್ನಿಸಿದರು ಎಂದು ತಿಳಿಸಿದ ಸಿಎಂ, ಈಗಿರುವ ಅವಕಾಶವನ್ನು ಹೆಣ್ಣು ಮಕ್ಕಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಬಳಿಕ ಹಾಸ್ಟೆಲ್‌ನ ಪ್ರತಿ ಕೊಠಡಿಗೂ ಭೇಟಿ ನೀಡಿ ವಿದ್ಯಾರ್ಥಿಗಳ ಕ್ಷೇಮ ಸಮಾಚಾರ ವಿಚಾರಿಸಿದರಲ್ಲದೇ ಏನಾದರೂ ಸಮಸ್ಯೆಗಳಿದೆಯಾ ಎಂದು ಪ್ರಶ್ನಿಸಿದರು. ಜತೆಗೆ ಅಡುಗೆ ಕೋಣೆಗೂ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಇದೇ ವೇಳೆ ಹಾಸ್ಟೆಲ್ ಕಟ್ಟಡ ಕಾಮಗಾರಿಯನ್ನು ಪರಿಶೀಲನೆ ನಡೆಸಿ, ಸಂಬಂಧಪಟ್ಟ ಅಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು.

ಸಿಎಂ ಜೊತೆ ಸೆಲ್ಫಿ...!: ಹಾಸ್ಟೆಲ್‌ಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆರತಿ ಬೆಳಗಿ ಸ್ವಾಗತಿಸಿದ ವಿದ್ಯಾರ್ಥಿನಿಯರು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ಮಕ್ಕಳಿಗೆ ಬೇರೆಯವರನ್ನು ಗೌರವಿಸಿ ಹಾಗೂ ಮನುಷ್ಯತ್ವದ ಪಾಠ ಕಲಿಸಬೇಕು ಎಂದು ಸಿಎಂ ಸಿದ್ದರಾಮಯ್ಯ, ಹಾಸ್ಟೆಲ್ ಸಿಬ್ಬಂದಿಗಳಿಗೆ ಸೂಚಿಸಿದರು.

ಕಾಗಿನೆಲೆ ಮಹಾಸಂಸ್ಥಾನದ ಶಿವಾನಂದಪುರಿ ಸ್ವಾಮೀಜಿ, ಶಾಸಕ ಡಿ. ರವಿಶಂಕರ್, ಕಾಂಗ್ರೆಸ್ ಮುಖಂಡ ಕೆ. ಮರೀಗೌಡ, ಕೆಪಿಸಿಸಿ ಸದಸ್ಯ ದೊಡ್ಡಸ್ವಾಮಿಗೌಡ, ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಸಿ. ಸತ್ಯನಾರಾಯಣ್, ಇಂಜಿನಿಯರ್ ಎಂ. ಕುಮಾರಸ್ವಾಮಿ, ಆನಂದ್, ಹರೀಶ್, ಬಿ.ಸಿ.ಎಂ. ಜಿಲ್ಲಾ ಅಧಿಕಾರಿ ರಾಘವೇಂದ್ರ, ಬಿಇಒ ವಿವೇಕಾನಂದ ಮತ್ತಿತರರಿದ್ದರು.



ಇಂಡಿಯನ್ ಟಿವಿ ಮತ್ತು ಬಸವಮಾರ್ಗ ಫೌಂಡೇಶನ್ ಹೊರತಂದಿರುವ 2024ರ ಸಾಲಿನ ಕ್ಯಾಲೆಂಡರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಇಂಡಿಯನ್ ಟಿವಿ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ವೆಂಕಟೇಶ್ ಕುಮಾರ್, ಇತರರು ಹಾಜರಿದ್ದರು.

ವಿಶ್ವ ರೈತ ದಿನಾಚರಣೆ ಅಂಗವಾಗಿ ಮೈಸೂರಲ್ಲಿ ರೈತರ ಬೃಹತ್ ಮೆರವಣಿಗೆ

ರೈತರಿಗೆ ಸಂಕಷ್ಟ ಬಾರದಂತೆ ಸರ್ಕಾರಗಳು ನೋಡಿಕೊಳ್ಳಬೇಕು



ಮೈಸೂರು, ಡಿ.23(ಜಿಎ)-ವಿಶ್ವ ರೈತ ದಿನಾಚರಣೆಯ ಅಂಗವಾಗಿ ಮೈಸೂರಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ರೈತ ಬಣದ ವತಿಯಿಂದ ಆಯೋಜಿಸಿದ್ದ ಬೃಹತ್ ಮೆರವಣಿಗೆಯಲ್ಲಿ ರಾಜ್ಯದ ವಿವಿಧ ಭಾಗದಿಂದ ಆಗಮಿಸಿದ್ದ ರೈತ ಮುಖಂಡರು, ಮಹಿಳೆಯರು ಹೆಜ್ಜೆ ಹಾಕುವ ಮೂಲಕ ಅದ್ದೂರಿಯಾಗಿ ಆಚರಿಸಿದರು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ರಾಜ್ಯ ರೈತರ ಒಳಿತಿಗಾಗಿ ವಿಶೇಷ ಪೂಜೆ ಸಲ್ಲಿಸಿ, ಚಾಮರಾಜೇಂದ್ರ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ವಿವಿಧ ಕಲಾತಂಡಗಳ ಮೂಲಕ ಹಾರ್ಡಿಂಜ್ ವೃತ್ತದ ಮೂಲಕ ಮೆರವಣಿಯು ಪುರಭವನದ ಆವರಣಕ್ಕೆ ತಲುಪಿತು.

ನಂತರ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯಾಧ್ಯಕ್ಷ ಸಿದ್ದನಗೌಡ ಪಾಟೀಲ್ ಮಾತನಾಡಿ, ನಾಲ್ಕೈದು ಶತಮಾನಗಳ ಹಿಂದೆ ಊಟಕ್ಕೆ, ತಿನ್ನುವ ಅನ್ನಕ್ಕೆ ಬರ ಇತ್ತು, ಆದರೆ ಈಗ ಅಂತಹ ವಾತಾವರಣ ಇಲ್ಲ. ಯಾರೂ ಸಹ ಹಸಿವಿನಿಂದ ಸಾಯುತ್ತಿರುವ ನಿದರ್ಶನಗಳಿಲ್ಲ. ಇದಕ್ಕೆಲ್ಲಾ ಕಾರಣ ರೈತ ಹಾಗೂ ರೈತನ ಪರಿಶ್ರಮ. ಇಂದು ಪ್ರಪಂಚದಲ್ಲಿ ಜನರು ಮೂರು ಹೊತ್ತು ಊಟ ಮಾಡುವಾಗಲೂ ರೈತರನ್ನು ಸ್ಮರಿಸಿಕೊಂಡು ಊಟ ಮಾಡಬೇಕಿದ್ದು, ರೈತನಿಗೆ ಸಂಕಷ್ಟಗಳು ಬಾರದಂತೆ ಸರ್ಕಾರಗಳು ನೋಡಿಕೊಳ್ಳಬೇಕೆಂದು ಮನವಿ ಮಾಡಿದರು.

ರೈತರಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಸರ್ಕಾರವು ಕೃಷಿ ಭಾಗ್ಯ ಯೋಜನೆಯಡಿ ಶೇ. 80ರಿಂದ 90 ರಷ್ಟು ವಿನಾಯತಿ ದರದಲ್ಲಿ ಹನಿ ನೀರಾವರಿ, ಕೃಷಿ ಹೊಂಡ, ಮಳೆ ಕೊಯ್ಲು ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದೆ. ಈ ಯೋಜನೆಗಳ ಲಾಭ ಪಡೆದುಕೊಂಡು ಒಳ್ಳೆಯ ಬೆಳೆ ಬೆಳೆದು ಆರ್ಥಿಕ ಮಟ್ಟ ಸುಧಾರಣೆ ಮಾಡಿಕೊಳ್ಳಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ರಾಜ್ಯಾಧ್ಯಕ್ಷ ಇಂಗಲಗುಪ್ಪೆ ಕೃಷ್ಣ, ಹಿರಿಯ ರೈತ ಮುಖಂಡ ಬೀರಪ್ಪ ದೇಶನೂರು, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸೋಮಶೇಖರ್ ಕೊತ್ತಂಬರಿ, ವಕೀಲ ಬೀಮಪ್ಪ ತಳಿಗೆರಿ, ನೇಗಿಲಯೋಗಿ ಸುರಾಕ್ಷ ರೈತ ಸಂಘದ. ರಾಜ್ಯ ಕಾರ್ಯಾಧ್ಯಕ್ಷ ಬಸವನ ಗೌಡ ಪಾಟೀಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಉಪ್ಪಾರ ಸಮುದಾಯ ಮೀಸಲಾತಿಗಾಗಿ ಬೃಹತ್ ಸಮಾವೇಶ



ಮೈಸೂರು, ಡಿ.23(ಜಿಎ)-ಉಪ್ಪಾರ ಸಮುದಾಯದ ಮೀಸಲಾತಿಗಾಗಿ ನವದೆಹಲಿಯ ರಾಮಲೀಲಾ ಮೈದಾನದಲ್ಲಿ ಫೆ.29ರಂದು ನಡೆಯುವ ಬೃಹತ್ ಸಮಾವೇಶಕ್ಕೆ ಮೈಸೂರು, ಚಾಮರಾಜನಗರದ ಮತ್ತು ಮಂಡ್ಯ ಭಾಗದ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಭಗೀರಥ ಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ ಕರೆ ನೀಡಿದರು.

ದೇಶದೆಲ್ಲೆಡೆ ಸಂಚರಿಸಿ ಭಗೀರಥ ಭಾರತ ಜನಕಲ್ಯಾಣ ರಥಯಾತ್ರೆಯಲ್ಲಿ ಮೈಸೂರಿಗೆ ಆಗಮಿಸಿದ ಸ್ವಾಮೀಜಿಯವರನ್ನು ಸಮುದಾಯದ ಮುಖಂಡರು ಪುರಭವನದ ಮುಂಭಾಗ ಅದ್ಧೂರಿಯಾಗಿ ಸ್ವಾಗತಿಸಿ, ವಿವಿಧ ಕಲಾತಂಡಗಳ ಜೊತೆಗೆ ದೇವರಾಜ ಅರಸು ರಸ್ತೆ ಮೂಲಕ ದಿವಾನ್ಸ್ ರಸ್ತೆಯಲ್ಲಿನ ಯಾದವ ಸಭಾಂಗಣ ತಲುಪಿದರು.

ಈ ವೇಳೆ ಪುರುಷೋತ್ತಮಾನಂದಪುರಿ ಸ್ವಾಮೀಜಿ ಮಾತನಾಡಿ, ಯಾತ್ರೆಯು ಕಳೆದ ಮೂರು ತಿಂಗಳಿನಿಂದ ದೇಶದ ವಿವಿಧಭಾಗದಲ್ಲಿ ಸಂಚರಿಸಿ, ಈಗ ಕರ್ನಾಟಕದ ಐತಿಹಾಸಿಕ ನಗರಿ ಮೈಸೂರಿಗೆ ತಲುಪಿದೆ. ಯಾತ್ರೆ ಹೊರಟ ದಿನದಿಂದಲೂ ಎಲ್ಲಾ ಕಡೆಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಇಡೀ ದೇಶದಲ್ಲಿರುವ ಉಪ್ಪಾರ ಸಮುದಾಯದವರನ್ನು ವಿವಿಧ ಹೆಸರಿನಿಂದ ಕರೆಯುತ್ತಾರೆ. ರಾಷ್ಟ್ರದಲ್ಲಿ 15 ಕೋಟಿಗೂ ಅಧಿಕ ಜನಸಂಖ್ಯೆಯನ್ನು ಹೊಂದಿದ್ದು, ಶೈಕ್ಷಣಿಕ, ರಾಜಕೀಯ, ಆರ್ಥಿಕವಾಗಿ ಹಿಂದುಳಿದಿದೆ. ಇದಕ್ಕಾಗಿ ಸಾಕಷ್ಟು ಹೋರಾಟ ಮಾಡಿದ್ದು, ಎಲ್ಲಾ ಸರ್ಕಾರಗಳು ಭರವಸೆ ನೀಡುತ್ತವೆಯೇ ಹೊರತು ನಮ್ಮ ಬೇಡಿಕೆಯನ್ನು ಈಡೇರಿಸುವುದಿಲ್ಲ. ಆದರೆ, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೀಸಲಾತಿಗೆ ಸೇರಿಸುವ ಅವಕಾಶವಿತ್ತು. ನಮ್ಮ ಸಮುದಾಯದವರೇ ಅದಕ್ಕೆ ಅಡ್ಡಗಾಲು ಹಾಕಿದರು ಎಂದು ಬೇಸರ ವ್ಯಕ್ತಪಡಿಸಿದರು.

ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಆಗ್ರಹಿಸಿ ಫೆಬ್ರವರಿ 29ರಂದು ರಾಮಲೀಲಾ ಮೈದಾನದಲ್ಲಿ ಸಮಾವೇಶ ನಡೆಸಲಾಗುತ್ತಿದೆ. ಅದಕ್ಕಾಗಿ ಯಾತ್ರೆ ಮೂಲಕ ಜಾಗೃತಿ ಮೂಡಿಸಲಾಗಿದೆ. ಕುಲಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಸಮಾವೇಶ ಯಶಸ್ವಿಗೊಳಿಸಿ ಎಂದು ಕರೆ ನೀಡಿದರು.

ಹನುಮ ಜಯಂತಿ ಪ್ರಯುಕ್ತ ಇಂದು ರಕ್ತದಾನ, ಆರೋಗ್ಯ ಶಿಬಿರ

ಮೈಸೂರು, ಡಿ.23(ಜಿಎ)-ಮೈಸೂರಿನ ವಿಜಯನಗರ 4ನೇ ಹಂತದ ಮುತ್ತುರಾಯನಗುಡ್ಡದಲ್ಲಿ ಮುತ್ತುರಾಯ ಸೇವಾ ಟ್ರಸ್ಟ್ ವತಿಯಿಂದ ಡಿ.24ರಂದು ಹನುಮ ಜಯಂತಿ ಪ್ರಯುಕ್ತ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಸೇವಾ ಟ್ರಸ್ಟ್ ಅಧ್ಯಕ್ಷ ಬಿ. ಶ್ರೀನಿವಾಸ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ರಿಂದ ಜೀವಧಾರ, ಲಯನ್ಸ್ ಕ್ಲಬ್ ಮೈಸೂರು ಪರಂಪರೆ ವತಿಯಿಂದ ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣೆ, ಎ.ಎಸ್.ಜಿ. ಕಣ್ಣಿನ ಆಸ್ಪತ್ರೆಯಿಂದ ನೇತ್ರ ತಪಾಸಣೆ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಲಿದ್ದಾರೆ. ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಮಾಜಿ ಸಚಿವ ಸಿ.ಎಚ್. ವಿಜಯಶಂಕರ್ ಇನ್ನಿತರರು ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮೊಗಣ್ಣೇಗೌಡ, ಶ್ರೀಕಾಂತ್, ಉಜ್ವಲ್ ಚಂದ್ರ ಹಾಜರಿದ್ದರು.

ಇಂದು ನೈಸರ್ಗಿಕ ಕೃಷಿ, ಮಣ್ಣು ಸಂರಕ್ಷಣೆ ಕುರಿತು ಮಾತುಕತೆ

ಮೈಸೂರು, ಡಿ.23(ಜಿಎ)-ಪರಿಸರ ಬಳಗ, ಸಹಜ ಸಮೃದ್ಧ, ಉಳುಮೆ ಪ್ರತಿಷ್ಠಾನ ಸೇರಿದಂತೆ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಡಿ.24ರ ಬೆಳಗ್ಗೆ 10 ರಿಂದ ಮಧ್ಯಾಹ್ನ 3.30 ರವರೆಗೆ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ನೈಸರ್ಗಿಕ ಕೃಷಿ ಮತ್ತು ಮಣ್ಣು ಸಂರಕ್ಷಣೆ ಕುರಿತು ಸಾಧಕರೊಂದಿಗೆ ಮಾತುಕತೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ. ರಾಮಕೃಷ್ಣಪ್ಪ ಅವರು ಮಣ್ಣು ಮತ್ತು ಪರಿಸರ, ಬದುಕು ಮಣ್ಣಿನೊಂದಿಗೆ ವಿಷಯ ಕುರಿತು ಡಾ.ಎ.ಪಿ. ಚಂದ್ರಶೇಖರ್, ಕೃಷಿಯಲ್ಲಿ ಜೀವ ವಿಷಯ ಕುರಿತು ಶಿವನಂಜಯ್ಯ ಬಾಳೆಕಾಯಿಯವರು ಮಾತನಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಎಲ್ಲ ರೈತ ಮುಖಂಡರು, ಕೃಷಿಯಲ್ಲಿ ಆಸಕ್ತಿ ಇರುವವರು, ಕೃಷಿಕರನ್ನು ಆಹ್ವಾನಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಜಯ್ ಕುಮಾರ್, ಲೀಲಾ ಶಿವಕುಮಾರ್, ಲೀಲಾ ವೆಂಕಟೇಶ್, ಗಂಟಯ್ಯ ಹಾಗೂ ಭಾಗ್ಯ ಶಂಕರ್ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಇಂದು 104 ಜನರಿಗೆ ಕೊರೊನಾ ಪಾಸಿಟಿವ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಶನಿವಾರ ಒಂದೇ ದಿನ 104 ಜನರಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 271ಕ್ಕೆ ಏರಿಕೆಯಾಗಿದೆ. ಕಳೆದ 24 ಗಂಟೆಗಳಲ್ಲಿ 104 ಹೊಸ ಕೋವಿಡ್-19 ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, ಇದರೊಂದಿಗೆ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 40,89,356ಕ್ಕೆ ಮತ್ತು ಸಕ್ರಿಯ ಪ್ರಕರಣಗಳ ಸಂಖ್ಯೆ 271ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಕ್ರಿಸ್‌ಮಸ್, ವರ್ಷಾಂತ್ಯದ ಹಿನ್ನೆಲೆ

ಮೈಸೂರಿಗೆ ಹರಿದು ಬರುತ್ತಿರುವ ಪ್ರವಾಸಿಗರ ದಂಡು

● ಎಲ್ಲಿ ನೋಡಿದರೂ ವಾಹನದಟ್ಟಣೆ ● ಎಕ್ಸ್‌ಪ್ರೆಸ್ ವೇನಲ್ಲಿ ಸಾಲುಗಟ್ಟಿ ನಿಂತ ವಾಹನಗಳು

ಮೈಸೂರು, ಡಿ.23(ಎಸ್‌ಬಿಡಿ)- ಕ್ರಿಸ್‌ಮಸ್ ಹಾಗೂ ವರ್ಷಾಂತ್ಯ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರ ದಂಡೇ ಹರಿದು ಬರುತ್ತಿದ್ದು, ನಗರ ಸಂಪರ್ಕಿಸುವ ಹೆದ್ದಾರಿಗಳಲ್ಲಿ ವಾಹನದಟ್ಟಣೆ ವಿಪರೀತವಾಗಿದೆ.



ನಾಲ್ಕನೇ ಶನಿವಾರ, ಭಾನುವಾರ ಹಾಗೂ ಸೋಮವಾರ ಕ್ರಿಸ್‌ಮಸ್ ಹಬ್ಬ ಸೇರಿ ಸತತ ಮೂರು ದಿನ ರಜೆ ಇರುವ ಹಿನ್ನೆಲೆಯಲ್ಲಿ ಶುಕ್ರವಾರ ರಾತ್ರಿಯಿಂದಲೇ ಮೈಸೂರಿಗೆ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಶನಿವಾರವಂತೂ ಎಲ್ಲಾ ಹೆದ್ದಾರಿಗಳಲ್ಲೂ ವಾಹನ ದಟ್ಟಣೆ ಹೆಚ್ಚಾಗಿತ್ತು. ಅದರಲ್ಲೂ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ವಾಹನಗಳ ಸಂಖ್ಯೆ ವಿಪರೀತವಾಗಿತ್ತು. ಟೋಲ್‌ಗಳ ಬಳಿ ಕಿಲೋ ಮೀಟರ್‌ನಷ್ಟು ವಾಹನಗಳು ಸಾಲುಗಟ್ಟಿ ನಿಂತಿದ್ದವು. ಹಾರನ್ ಸದ್ದು ಕಿವಿಗಡಚಿಕ್ಕುತ್ತಿತ್ತು.

ಎಕ್ಸ್‌ಪ್ರೆಸ್ ವೇನಲ್ಲಿ ವೇಗವಾಗಿ ಬಂದ ವಾಹನಗಳು ರಿಂಗ್‌ರಸ್ತೆ ಜಂಕ್ಷನ್‌ನಲ್ಲಿ ಸಾಲುಗಟ್ಟಿ ನಿಂತವು. ಇಲ್ಲಿ ವಾಹನ ದಟ್ಟಣೆ ನಿರ್ವಹಣೆ ಮಾಡುವಷ್ಟರಲ್ಲಿ ನಗರ ಸಂಚಾರ ಪೊಲೀಸರು ಹೈರಾಣಾದರು. ಅಪಾರ ಸಂಖ್ಯೆಯ ಕಾರುಗಳು, ದ್ವಿಚಕ್ರ ವಾಹನಗಳ ಜೊತೆಗೆ ರಿಂಗ್‌ರಸ್ತೆಯಲ್ಲಿ ಸಂಚರಿಸುವ ಭಾರಿ ವಾಹನಗಳು ಈ ಜಂಕ್ಷನ್‌ನಲ್ಲಿ ಒಂದರ ಹಿಂದೊಂದು ನಿಂತಿದ್ದವು. ರಾತ್ರಿ ಬಹುಹೊತ್ತಿನವರೆಗೂ ಇದೇ ರೀತಿ ಇತ್ತು. ಭಾನುವಾರದ ಪರಿಸ್ಥಿತಿಯೂ ಇದಕ್ಕೆ ಹೊರತಾಗಿರುವುದಿಲ್ಲ. ವಿವಿಧೆಡೆಯಿಂದ ಪ್ರವಾಸಿಗರು ಮೈಸೂರಿಗೆ ಧಾವಿಸುವ ಸಾಧ್ಯತೆ ಇದೆ.

ಪ್ರೇಕ್ಷಣೀಯ ಸ್ಥಳಗಳಲ್ಲಿ ಜನಸ್ತೋಮ: ಫಲಪುಷ್ಪ ಪ್ರದರ್ಶನದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಭ್ರಮ ಕಳೆಗಟ್ಟಿರುವ ಅಂಬಾವಿಲಾಸ ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ದಸರಾ ವಸ್ತು ಪ್ರದರ್ಶನ ಸೇರಿದಂತೆ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲೂ ಜನಸ್ತೋಮವೇ ನೆರೆದಿತ್ತು. ಚಾಮುಂಡಿಬೆಟ್ಟ, ಅರಮನೆ ಸುತ್ತಲಿನ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಪ್ರವಾಸಿಗರ ವಾಹನಗಳೂ ಹೆಚ್ಚಿದ್ದವು. ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಸಂತ ಫಿಲೋಮಿನಾ ಚರ್ಚ್‌ನಲ್ಲಿ ಸಿದ್ಧತಾ ಕಾರ್ಯ ಭರದಿಂದ ಸಾಗಿದ್ದು, ಅಲ್ಲಿಯೂ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿತ್ತು.

ವರ್ಷಾಂತ್ಯ ಸಂಭ್ರಮ: ವರ್ಷಾಂತ್ಯದಲ್ಲಿ ಪ್ರವಾಸಿಗರು ಮೈಸೂರಿಗೆ ಆಗಮಿಸುವುದು ಸಾಮಾನ್ಯ. ಅಂತೆಯೇ ಈ ಬಾರಿಯೂ ಕೂಡ ಹೊಸವರ್ಷ ಸಂಭ್ರಮಾಚರಣೆಗೆ ಅಪಾರ ಸಂಖ್ಯೆಯಲ್ಲಿ ಮೈಸೂರಿಗೆ ಬರುತ್ತಿದ್ದಾರೆ. 2023ಕ್ಕೆ ವಿದಾಯ ಹೇಳಿ, 2024ನ್ನು ಸಡಗರದಿಂದ ಸ್ವಾಗತಿಸಲು ಪ್ಲಾನ್ ಮಾಡಿಕೊಳ್ಳುತ್ತಿದ್ದಾರೆ. ಹೋಟೆಲ್‌ಗಳು ಬಹುತೇಕ ಭರ್ತಿಯಾಗಿವೆ. ಹಲವು ಹೋಟೆಲ್‌ಗಳಲ್ಲಿ ಹೊಸ ವರ್ಷಾಚರಣೆಗೆ ಅತ್ಯಾಕರ್ಷಕ ಕಾರ್ಯಕ್ರಮಗಳನ್ನು ಆಯೋಜಿಸಲು ಸಿದ್ಧತೆ ನಡೆಸಿದ್ದು, ಆನ್‌ಲೈನ್ ಪ್ರಚಾರವೂ ನಡೆಯುತ್ತಿದೆ. ಒಟ್ಟಾರೆ ಇನ್ನೂ 8-10 ದಿನಗಳ ಕಾಲ ಮೈಸೂರು ಸಂಪರ್ಕಿಸುವ ಹೆದ್ದಾರಿಗಳು, ನಗರದ ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ ಮತ್ತು ಪ್ರೇಕ್ಷಣೀಯ ಸ್ಥಳಗಳಲ್ಲಿ ಜನಸ್ತೋಮ ನೆರೆಯುವ ಸಾಧ್ಯತೆ ದಟ್ಟವಾಗಿದೆ.

ವಾರದ ಮಿತ್ರ
ಮೈಸೂರು ಮಿತ್ರ
ಸಾಪ್ತಾಹಿಕ ಪುರವಣಿ
ಭಾನುವಾರ 24-12-2023

ಬೋಧಕನಿಗೆ ಬೋಧನೆ ಸವಾಲು...!

"ಒಬ್ಬ ಪೋಷಕನಾಗಿ ತಮ್ಮ ಮಕ್ಕಳ ಮೇಲೆ ನಿರೀಕ್ಷೆಯನ್ನು ಇಟ್ಟುಕೊಳ್ಳುವುದು ಸರಿ ಎಂಬುದನ್ನು ನಾನು ಒಪ್ಪುತ್ತೇನೆ.ಆದರೆ ನನ್ನ ಮಗ ಅಥವಾ ಮಗಳು ಇದನ್ನೇ ಓದಬೇಕು. ಹೀಗೆ ಆಗಬೇಕು ಎಂಬುದು ಎಷ್ಟರಮಟ್ಟಿಗೆ ಸರಿ ಎಂಬುದು ನನ್ನ ಪ್ರಶ್ನೆ? ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರ ಆಸಕ್ತಿಗೆ ಅನುಗುಣವಾಗಿ, ವಿದ್ಯಾಭ್ಯಾಸವನ್ನು ಕೊಡಿಸಿದರೆ ಒಳಿತು. ಅವರಲ್ಲಿ ಇರುವ ನಿಜವಾದ ಪ್ರತಿಭೆಯನ್ನು ಗುರುತಿಸಿ ಆ ಪ್ರತಿಭೆಗೆ ನೀರನ್ನೆರೆದರೆ ಖಂಡಿತವಾಗಿಯೂ ಸಹಕಾರಿಯಾಗುವುದು. ಆಸಕ್ತಿ ಇಲ್ಲದ ಓದಿಗೆ ಸೇರಿಸಿ ಮನೆಯಲ್ಲಿದ್ದರೆ ಓದಲಾರನು ಅಥವಾ ಓದಲಾರಳು ಎಂದು ಭಾವಿಸಿ ವಸತಿ ಶಾಲೆಗಳಲ್ಲಿ ಅಥವಾ ಕಾಲೇಜುಗಳಲ್ಲಿ ಓದಿಸುವಂತಹ ಪೋಷಕರು ಇಂದಿನ ದಿನಗಳಲ್ಲಿ ಸರ್ವೆ ಸಾಮಾನ್ಯವಾಗಿದ್ದಾರೆ. ಆಸಕ್ತಿಯೇ ಇಲ್ಲದ ವಿದ್ಯಾರ್ಥಿಗಳಿಗೆ ಅದ್ಭುತವಾದ ಪಾಠವನ್ನು ಮಾಡಿದರೂ ಅದನ್ನು ಅವರು ಗಮನಿಸಲಾರರು. ಇತ್ತ ಶಿಕ್ಷಕರಿಗೂ ಅಂತವರಿಂದ ಯಾವುದೇ ಉಪಯೋಗವಾಗಲಾರದು.





ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಒಂದೇ ಮನಸ್ಥಿತಿ ಹೊಂದಿರುವ, ಶಿಕ್ಷಕ ವೃತ್ತಿಯಲ್ಲಿರುವ ಸ್ನೇಹಬಳಗದೊಂದಿಗೆ ಮಾತನಾಡುವಾಗ ಬಂದ ಒಂದು ಸಾಮಾನ್ಯವಾದ ವಿಷಯ–ಇವತ್ತಿನ ಮಕ್ಕಳಿಗೆ ಪಾಠ ಮಾಡೋದು ತುಂಬಾನೆ ಕಷ್ಟ ...! ಯಾಕೆ ಎಂಬ ಪ್ರಶ್ನೆಗಳು ಬಂದಾಗ ಅವರುಗಳ ಅನುಭವದ ಕೆಲವು ಪ್ರಸಂಗಗಳನ್ನು ತೆರೆದಿಟ್ಟರು.

ಒಬ್ಬ ವಿದ್ಯಾರ್ಥಿ ಬೋಧನೆ ಮಾಡುವಾಗ ಪದೇ ಪದೆ ತೊಂದರೆ ಕೊಡುತ್ತಿದ್ದಾಗ ಹೊರಗೆ ನಿಲ್ಲುವಂತೆ ಹೇಳಿದರಂತೆ. ಆಗ ಆ ವಿದ್ಯಾರ್ಥಿ ನಾನು ಹೊರಗೆ ನಿಲ್ಲುವೆ ಸರ್, ಆದರೆ ಪರೀಕ್ಷೆಯಲ್ಲಿ ನಾನು ಅನುತ್ತೀರ್ಣನಾದರೆ ಅದಕ್ಕೆ ನೀವೇ ನೇರ ಹೊಣೆ! ನಿಮ್ಮ ಹೆಸರನ್ನೇ ಹೇಳುವೆ ಎಂದು ಉತ್ತರ ಕೊಟ್ಟನಂತೆ.

ಮತ್ತೊಬ್ಬರ ಅನುಭವ: ವಿದ್ಯಾರ್ಥಿ ತನ್ನ ಮಿತಿಯನ್ನು ದಾಟಿದ ವರ್ತನೆ ತೋರಿದಾಗ ಉಪನ್ಯಾಸಕರು/ ಶಿಕ್ಷಕರು ಆ ವಿದ್ಯಾರ್ಥಿಗೆ ಹೊಡೆಯಲು ಹೋದಾಗ ನಮ್ಮ ಅಪ್ಪ–ಅಮ್ಮನೇ ನನಗೆ ಹೊಡೆಯುವುದಿಲ್ಲ, ನೀವ್ಯಾರು ಹೊಡೆಯೊಕೆ ಎಂದುತ್ತರ ನೀಡಿದನಲ್ಲದೆ ಮಕ್ಕಳಿಗೆ ಹೊಡೆಯುವ ಹಕ್ಕು ಶಿಕ್ಷಕರಿಗಿಲ್ಲ ಎಂಬ ಸರ್ಕಾರದ ನಿಯಮವನ್ನು ಉಲ್ಲೇಖಿಸಿದನಂತೆ.

ಹೀಗೆ ತಮ್ಮ ತಮ್ಮ ಅನುಭವದ ಮಾತುಗಳೊಂದಿಗೆ ಇತರರ ಅನುಭವವನ್ನು ಸೇರಿಸಿ ಹೇಳಿದ್ದನ್ನು ಕೇಳಿದಾಗ ವಿದ್ಯಾರ್ಥಿಗಳ ಈ ವರ್ತನೆಗಳಿಗೆ ಕಾರಣವೇನು ಎಂಬ ಪ್ರಶ್ನೆ ಉದ್ಭವಿಸಿತು. ಆಲೋಚನೆಯಲ್ಲಿ ತೊಡಗಿದಾಗ ಹೊಳೆದ ಉತ್ತರಗಳಿವು.

ಕೊರೊನಾ ಮಹಿಮೆ: ಆಶ್ಚರ್ಯವಾದರೂ ಸತ್ಯ. ಎರಡು ವರ್ಷಗಳಲ್ಲಿ ಇಡೀ ಪ್ರಪಂಚವನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿದ್ದ ಕೊರೊನಾ ಎಂಬ ಹೆಮ್ಮಾರಿಯಿಂದ ಶಾಲಾ, ಕಾಲೇಜುಗಳು ಸರಿಯಾಗಿ ನಡೆಯದೇ ಇದ್ದದ್ದು ಕೂಡ ಪ್ರಸ್ತುತ ವಿದ್ಯಾರ್ಥಿಗಳ ಈ ಬಗೆಯ ವರ್ತನೆಗೆ ಪ್ರಮುಖ ಕಾರಣ.

ಏಕೆಂದರೆ ಆ ಸಮಯದಲ್ಲಿ ಪಾಠ, ಪ್ರವಚನಗಳು ಸರಿಯಾಗಿ ನಡೆಯುತ್ತಿರಲಿಲ್ಲ. ಅದೇ ಸಮಯದಲ್ಲಿ ಶಿಕ್ಷಕರು ಕೊರೊನಾದ ಕಾರಣದಿಂದಾಗಿ ಕೆಲಸವಿಲ್ಲದೆ ತಮ್ಮ ಬದುಕನ್ನು ನಡೆಸಲು ಪಡುತ್ತಿರುವ ಬವಣೆಗಳನ್ನು ದಿನಪತ್ರಿಕೆಗಳಲ್ಲಿ, ದೃಶ್ಯ ಮಾಧ್ಯಮಗಳಲ್ಲಿ ನೋಡಿದಂತಹ ವಿದ್ಯಾರ್ಥಿಗಳು ನಮ್ಮಿಂದಲೇ ಶಿಕ್ಷಕರಿಗೆ ಸಂಬಳ, ಗೌರವ ಸಿಗುತ್ತಿರುವುದು ಎಂಬಂತಹ ವಿಚಾರ ನಕಾರಾತ್ಮಕವಾಗಿ ಪರಿಣಾಮವನ್ನು ಬೀರಿದ ಕಾರಣ ಶಿಕ್ಷಕರ ಬಗ್ಗೆ ವಿದ್ಯಾರ್ಥಿಗಳಲ್ಲಿ ಅಸಡ್ಡೆ ಮೂಡಲು ಪ್ರಮುಖವಾದ ಕಾರಣವಾಯಿತು. ಇದರೊಂದಿಗೆ ಕೆಲ ವಿದ್ಯಾರ್ಥಿಗಳ ಪೋಷಕರು ಕೂಡ ಶಿಕ್ಷಕರ ಬಗ್ಗೆ, ಶಿಕ್ಷಣದ ಬಗ್ಗೆ ನಕಾರಾತ್ಮಕ ಮಾಹಿತಿಗಳನ್ನು ನೀಡಿದ್ದರ ಪರಿಣಾಮವಾಗಿ ಜೊತೆಗೆ ಆನ್ಲೈನ್ ಕ್ಲಾಸ್ ಎಂಬಂತಹ ಕಾರಣದಿಂದ ಮೊಬೈಲನ್ನು ವಿದ್ಯಾರ್ಥಿಗಳ ಕೈಗೆ ನೀಡಿದ್ದು ಸಹ ಮಾನಸಿಕವಾಗಿ ಕಲಿಕೆಯಲ್ಲಿ ಅವರು ಹಿಂದುಳಿಯಲು ಪ್ರಮುಖವಾದ ಕಾರಣವಾಯಿತು. ಏಕೆಂದರೆ ಪೋಷಕರು ಕೂಡ ವಿದ್ಯಾರ್ಥಿಗಳು ಪಾಠವನ್ನು ಕೇಳುತ್ತಿದ್ದಾರೆ ಎಂದು ಭ್ರಮಿಸಿ ಅವರ ಬಗ್ಗೆ ನಿರ್ಲಕ್ಷ್ಯ ತೋರಿದ್ದು ಜೊತೆಗೆ ಆ ಸಮಯದಲ್ಲಿ ವಿದ್ಯಾರ್ಥಿಗಳು ಪಾಠವನ್ನು ಸರಿಯಾಗಿ ಗಮನಿಸದೆ ಅವರ ಗಮನವನ್ನು ಬೇರೆಡೆಗೆ ಹೊರಳುವಂತೆ ಮಾಡಿದ್ದು ಬೇಡದ ವಿಚಾರಗಳ ಬಗ್ಗೆ ತಿಳಿದುಕೊಂಡಿದ್ದು ಕಲಿಕೆ ಬಗ್ಗೆ ನಿರಾಸಕ್ತಿ ಮೂಡಲು ಕಾರಣವಾಗಿದೆ.

ಮೊಬೈಲ್ ಎಂಬ ಮಾಯಾವಿ: ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟರೆ ಹೇಗೋ ಹಾಗೆ ವಿದ್ಯಾರ್ಥಿಗಳ ಕೈಯಲ್ಲಿ ಮೊಬೈಲ್. ಖಂಡಿತವಾಗಿಯೂ ಇದನ್ನು ಒಪ್ಪಲೇಬೇಕಾದ, ಒಪ್ಪಲೇಬಹುದಾದ ವಾಸ್ತವ. ಏಕೆಂದರೆ ಮೊದಲೆಲ್ಲ ವಿದ್ಯಾಭ್ಯಾಸವನ್ನು ಮಾಡದಿದ್ದರೆ ಕಲಿಕೆಯಲ್ಲಿ ಹಿಂದುಳಿದರೆ ಮುಂದಿನ ಭವಿಷ್ಯವಿಲ್ಲ ಎಂಬ ಜ್ಞಾನ ಇತ್ತು ಆದರೆ ಸರ್ವವು ಮೊಬೈಲ್ ಮಯವಾದ್ದರಿಂದ ತಮಗೆ ಇಷ್ಟ ಬಂದಂತೆ ಹೇಗೆ ಬೇಕೋ ಹಾಗೆ ದೃಶ್ಯಗಳನ್ನು ಚಿತ್ರೀಕರಿಸಿ ಅದನ್ನು ಅಪ್ಲೋಡ್ ಮಾಡಿ, ಹೆಚ್ಚು ಜನ ಅದನ್ನು ವೀಕ್ಷಿಸಿದರೆ ತಾವು ಪ್ರಸಿದ್ಧರಾಗಬಹುದು ಜೊತೆಗೆ ನಮ್ಮನ್ನು ಪ್ರೀತಿಸುವಂತಹ ಹೆಚ್ಚು ಜನರು ಸಿಗುತ್ತಾರೆ ಎಂಬ ಹುಚ್ಚು ತುಡಿತದೊಂದಿಗೆ ಮತ್ತಷ್ಟು ,ಮಗದಷ್ಟು ಜನರು ನಾವು ಮಾಡಿರುವ ದೃಶ್ಯಗಳ ರೀಲ್ಸ್‌ಗಳನ್ನು ನೋಡಬಹುದು, ಇದರಿಂದ ಹಣ ಸಂಪಾದನೆಯೂ ಆಗುತ್ತದೆ ಎಂಬಂತಹ ಧೋರಣೆ ವಿದ್ಯಾರ್ಥಿಗಳಲ್ಲಿ ಹಾಸು ಹೊಕ್ಕಾಗಿದೆ. ಪರಿಸ್ಥಿತಿ ಹೀಗಿರುವಾಗ ತರಗತಿಯಲ್ಲಿ ಮಾಡುವ ಪಾಠಗಳ ಬಗ್ಗೆ ಗಮನವಾಗಲೀ, ವಿದ್ಯಾಭ್ಯಾಸ ಮಾಡಿದರೆ ಮಾತ್ರ ಬದುಕು ನಿರ್ವಹಿಸಲು ಸಾಧ್ಯ ಎಂಬಂತಹ ಸತ್ಯವನ್ನಾಗಲೀ ಅವರು ಒಪ್ಪಲಾರದೆ ತಮ್ಮ ಬಹುಪಾಲಿನ ಸಮಯವನ್ನು ಬುದ್ಧಿಶಕ್ತಿಯನ್ನು ನಶಿಸುವಂತೆ ಮಾಡುವ ಆ ಮೊಬೈಲ್ ಎಂಬ ಮಾಯಾವಿಯ ಜೊತೆಗೆ ಮೀಸಲಿಟ್ಟಿದ್ದಾರೆ. ತಾವು ಏನು ಮಾಡಬೇಕು ಏನು ಮಾಡಬಾರದು ಎಂಬ ಪರಿಜ್ಞಾನವಿಲ್ಲದೆ ತಮಗಿಷ್ಟ ಬಂದಂತೆ ವರ್ತಿಸುತ್ತಿದ್ದಾರೆ. ಇದರಲ್ಲಿ ಪೋಷಕರ ಪಾತ್ರವೂ ಕೂಡ ಸೇರಿಕೊಂಡಿದೆ ಏಕೆಂದರೆ ಆಧುನಿಕ ತಾಯಂದಿರು ತಮ್ಮ ಮಗು ಊಟ ಮಾಡುತ್ತಿಲ್ಲವೆಂದು ಮೊಬೈಲ್ ಅನ್ನು ತೋರಿಸಿ ಊಟವನ್ನು ಮಾಡಿಸುವುದು, ಇನ್ನು ಕೆಲವು ಕಡೆ ತಂದೆ ತಾಯಿ ಇಬ್ಬರು ಕೂಡ ಕೆಲಸಕ್ಕೆ ಹೋಗುವುದರಿಂದ ನಾವು ಬರುವವರೆಗೂ ಮೊಬೈಲನ್ನು ನೋಡಿಕೊಂಡಿರುವ ಎಂದು ಕೊಟ್ಟಿರುವುದು ವಿದ್ಯಾರ್ಥಿಗಳ ಮನಸ್ಸು ಕೆಟ್ಟದ್ದರ ಕಡೆಗೆ ಹೋಗಲು ಪ್ರಮುಖವಾದ ಕಾರಣವಾಗಿದೆ. ಇನ್ನೂ ಕೆಲವು ಪೋಷಕರು ತಮ್ಮ ಮಕ್ಕಳನ್ನು ಮೊಬೈಲ್ ಉಪಯೋಗಿಸಬೇಡವೆಂದು ಹೇಳಿ ಅವರ ಮುಂದೆಯೇ ತಾವೇ ಹೆಚ್ಚಾಗಿ ಮೊಬೈಲನ್ನು ಉಪಯೋಗಿಸುತ್ತಿರುವುದರಿಂದ ವಿದ್ಯಾರ್ಥಿಗಳ ಮನಸ್ಸು ಕೂಡ ಮೊಬೈಲ್ ಕಡೆಗೆ ಆಕರ್ಷಿತವಾಗುತ್ತಿದೆ. ಹೀಗಾಗಿ ಅವರ ವರ್ತನೆಯಲ್ಲಿ ನಕಾರಾತ್ಮಕತೆಯ ಅಂಶ ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವೆನಿಸಿದೆ. ಆಗಿದ್ದರೆ ಮೊಬೈಲ್ ಇಂದ ಒಳ್ಳೆಯದ್ದು ಏನು ಆಗಿಲ್ಲವೇ? ಎಂದು ಪ್ರಶ್ನಿಸಿದರೆ ಖಂಡಿತವಾಗಿಯೂ ಒಳ್ಳೆಯದು ಆಗಿದೆ. ಆದರೆ ಹದಿಹರೆಯದವರ ವಯಸ್ಸಲ್ಲಿ ಕುತೂಹಲವಿರುತ್ತದೆ. ಈ ಕುತೂಹಲಗಳನ್ನು ತಣಿಸುವ ನಿಟ್ಟಿನಲ್ಲಿ ಮೊಬೈಲ್‌ನ ಬಳಕೆ ವಿದ್ಯಾರ್ಥಿಗಳಿಗೆ ಸಕಾರಾತ್ಮಕತೆಗಿಂತ ನಕಾರಾತ್ಮಕತೆಯನ್ನುಂಟು ಮಾಡುತ್ತದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ದೃಶ್ಯ ಮಾಧ್ಯಮಗಳ ಪ್ರಭಾವ: ಒಳ್ಳೆಯದು ಎಲ್ಲರನ್ನು ತಲುಪುವ ಮೊದಲೇ ಕೆಟ್ಟದ್ದು ಬಹುಬೇಗನೆ ಎಲ್ಲರನ್ನು ತಲುಪುತ್ತದೆ. ಇಂದಿನ ದೃಶ್ಯ ಮಾಧ್ಯಮಗಳು ಕೆಲವು ವಿಚಾರಗಳನ್ನ ತೋರಿಸುವಂತಹ ರೀತಿ ತಮ್ಮ ಗಳಿಕೆ ಟಿಆರ್‌ಪಿ ಹೆಚ್ಚಾಗಬೇಕೆಂಬ ದೆಸೆಯಿಂದ ನಡೆಸುತ್ತಿರುವ ಕೆಲವು ಕಾರ್ಯಕ್ರಮಗಳು, ಬರುತ್ತಿರುವ ಕೆಲವು ಧಾರಾವಾಹಿಗಳು ವಿದ್ಯಾರ್ಥಿಗಳ ಮನಸ್ಸು ವಿರೂಪದಲ್ಲಿ ಒದ್ದಾಡಲು ಪ್ರಮುಖವಾದ ಕಾರಣವಾಗಿದೆ. ಕೆಲವು ಧಾರಾವಾಹಿಗಳಲ್ಲಿ ಕೆಟ್ಟದ್ದರ ವಿಜೃಂಭಣೆ ಒಳ್ಳೆಯತನಕ್ಕೆ ಇಲ್ಲ ಸಲ್ಲದ ಕಷ್ಟ, ಇನ್ನೂ ಕೆಲವು ಕಾರ್ಯಕ್ರಮಗಳಲ್ಲಿ ಜಗಳ ಮನಸ್ತಾಪ ಇವುಗಳ ಅತಿಯಾದ ವೈಭವೀಕರಣ, ಕೆಲವು ಜಾಹೀರಾತುಗಳಲ್ಲಿ ವಯಸ್ಸಿಗೆ ಮೀರಿದಂತಹ ವಿಚಾರಗಳ ಪ್ರದರ್ಶಿಸುವಿಕೆ,ಇನ್ನೂ ಕೆಲವು ವಿಚಾರಗಳಲ್ಲಿ ಕೊಡುವ ಅತೀ ಹೆಚ್ಚಿನ ಪ್ರಚಾರತೆಯನ್ನು ನೋಡಿ, ಪ್ರಸಿದ್ಧಿ ಆಗಬೇಕೆಂದರೆ ನಾವು ಕೆಟ್ಟ ದಾರಿಯನ್ನು ಹಿಡಿಯಬೇಕೆಂಬ ಹುಚ್ಚುತನ ಹದಿಹರೆಯದವರಲ್ಲಿ ಮನೆ ಮಾಡುತ್ತದೆ.

ಸಿನಿಮಾದ ಪಾತ್ರವೂ ಕೂಡ ಕೆಲವೊಮ್ಮೆ ನಕಾರಾತ್ಮಕ ಅಂಶಗಳನ್ನು ಬೀರುತ್ತವೆ ಅದರಲ್ಲೂ ಮುಖ್ಯವಾಗಿ ಇತ್ತೀಚಿನ ಸಿನಿಮಾಗಳಲ್ಲಿ ಖಳನಾಯಕನನ್ನೆ ನಾಯಕನಂತೆ ವಿಜೃಂಭಿಸುತ್ತಿರುವುದು ಹದಿಹರೆಯದವರಲ್ಲಿ ಗೊಂದಲವನ್ನುಂಟು ಮಾಡುವುದಲ್ಲದೇ ಕೆಟ್ಟದ್ದನ್ನೇ ಒಳ್ಳೆಯದು ಎಂದು ಭಾವಿಸುತ್ತಿರುವಂತೆ ಕಾಣುತ್ತದೆ. ಒಂದು ಉತ್ತಮ ಸಮಾಜ ನಿರ್ಮಾಣದಲ್ಲಿ ದೃಶ್ಯ ಮಾಧ್ಯಮದ ಪ್ರಭಾವವೂ ಕೂಡ ಪ್ರಮುಖವಾಗಿರುತ್ತದೆ ಇದನ್ನು ಅರಿಯದೆ ಕೇವಲ ತಮ್ಮ ವೈಯಕ್ತಿಕ ಲಾಭಕ್ಕಾಗಿ, ಸಮಾಜವನ್ನು ತಪ್ಪು ದಾರಿಗೆ ಎಳೆಯಬಾರದೆಂದು ತಿಳಿಯಬೇಕಾಗಿದೆ.

ಸರ್ಕಾರದ ಹಸ್ತಕ್ಷೇಪ: ಸರ್ಕಾರಗಳು ಪದೇ ಪದೆ ಪಠ್ಯಕ್ರಮವನ್ನು ಬದಲಾಯಿಸುತ್ತಿರುವುದು ವಿದ್ಯಾರ್ಥಿಗಳಲ್ಲಿ ಗೊಂದಲವನ್ನು ಕೆಲವೊಮ್ಮೆ ಇಲ್ಲಸಲ್ಲದ ವಿಚಾರಗಳು ತಲೆದೋರುವಂತೆ ಮಾಡಿ ಬೋಧನೆ ಮಾಡುವವರಿಗೆ ಸಂಕಷ್ಟವನ್ನುಂಟು ಮಾಡಿದೆ. ಆದ್ದರಿಂದ ಪ್ರಸ್ತುತ ಇರುವ ಸರ್ಕಾರವಾಗಲೀ ಅಥವಾ ಮುಂದೆ ಬರುವ ಸರ್ಕಾರವಾಗಲೀ ಈ ಅಂಶವನ್ನು ಪರಿಗಣಿಸುವುದು ಒಳ್ಳೆಯದು. ಈ ಅಂಶ ಇಲ್ಲಿ ಅಪ್ರಸ್ತುತ ಎನಿಸಿದರು ಕೂಡ ಪ್ರಸ್ತುತ ಸನ್ನಿವೇಶವನ್ನು ಗಮನಿಸಿದರೆ ಇದು ಕೂಡ ಪ್ರಮುಖವಾದ ಪರಿಣಾಮವನ್ನು ಬೀರುತ್ತಿದೆ. ಸರ್ಕಾರಗಳು ಬದಲಾದಂತೆ ಅವರವರ ರಾಜಕೀಯ ಬೇಳೆಗಳನ್ನು ಬೇಯಿಸಿಕೊಳ್ಳಲು ಪದೇ ಪದೆ ಪಠ್ಯಕ್ರಮವನ್ನು ಬದಲಾವಣೆ ಮಾಡುವುದು ಅದು ಎಲ್ಲೆಡೆ ಜಗಜ್ಜಾಹೀರಾಗುವುದು, ಬದಲಾಯಿಸಿದ ಪಠ್ಯಕ್ರಮದಲ್ಲಿ ಏನಿರಬಹುದು ಎಂಬಂತಹ ಕುತೂಹಲ ಹುಟ್ಟಿ ಅದರಲ್ಲಿರುವ ಅಂಶವನ್ನು ನೋಡಿ ಜಾತಿ ಧರ್ಮ ಎಂಬಂತಹ ಭೇದ ಭಾವಗಳನ್ನು ಹುಟ್ಟು ಹಾಕುತ್ತಿರುವುದು ಖಂಡನೀಯ. ಎಳೆಯ ಮಕ್ಕಳಲ್ಲಿ ಜಾತಿ ಧರ್ಮ ಎಂಬ ವಿಷ ಬೀಜವನ್ನು ಬಿತ್ತುವ ಮೂಲಕ ಅದು ಈಗಾಗಲೇ ಚಿಗುರೊಡೆದು ಎಲ್ಲೆಡೆ ಅನುಪಯುಕ್ತ ಸಸಿಯಾಗಿ ಗೋಚರಿಸುತ್ತಿದೆ.

ಪಠ್ಯಕ್ರಮ ಬದಲಾವಣೆ ಮಾಡುವುದು ಸರ್ಕಾರದ ಜವಾಬ್ದಾರಿ. ಅದರಲ್ಲಿ ಯಾವುದೇ ಸಂದೇಹವಿಲ್ಲ ಆದರೆ ತಮ್ಮ ಸ್ವ ಹಿತಾಸಕ್ತಿಗೆ ಅಥವಾ ಪಕ್ಷದ ಹಿತಾಸಕ್ತಿಗೆ ಪಠ್ಯಕ್ರಮವನ್ನು ಬದಲಾವಣೆ ಮಾಡುವುದರ ಬದಲು ವಿದ್ಯಾರ್ಥಿಗಳಿಗೆ ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತಹ ಪಠ್ಯಕ್ರಮವನ್ನು, ಪಠ್ಯಕ್ರಮವನ್ನು ರೂಪಿಸುವುದು ಜವಾಬ್ದಾರಿಯುತ ಸರ್ಕಾರದ ಕರ್ತವ್ಯವಾಗಿದೆ.

ಇಂದಿನ ಮಕ್ಕಳೇ ಭವಿಷ್ಯದ ಪ್ರಜೆಗಳಾದುದರಿಂದ ಅವರಲ್ಲಿ ಸದುದ್ದೇಶವಾದ ಭಾವನೆಯನ್ನು ಉಂಟುಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಸರ್ಕಾರ ಯಾರದ್ದೇ ಆಗಿರಲಿ ತಮ್ಮ ಜವಾಬ್ದಾರಿಯ ಸ್ಥಾನವನ್ನು ಅರಿತುಕೊಂಡು ವಿದ್ಯಾರ್ಥಿಗಳಿಗೆ ಹಾಗೂ ಸಮಾಜಕ್ಕೆ ಕೊಡುಗೆಯನ್ನು ನೀಡುವಂತಹ ಕೆಲಸವನ್ನು ಮಾಡುವಂಥದ್ದು ಆದ್ಯ ಕರ್ತವ್ಯವಾಗಿದೆ. ಸರ್ಕಾರ ಇದನ್ನು ತಿಳಿಯದಿದ್ದರೆ ನಿಜಕ್ಕೂ ಮುಂದಿನ ದಿನಗಳಲ್ಲಿ ಈಗಿರುವ ಸನ್ನಿವೇಶಕ್ಕಿಂತ ಸಂಕಷ್ಟವಾದ ಸನ್ನಿವೇಶವನ್ನು ಎದುರಿಸಬೇಕಾದ ಪ್ರಮೇಯ ಉಂಟಾಗುತ್ತದೆ.

ಪೋಷಕರ ಮನೋಭಾವ: ಪ್ರಸ್ತುತ ದಿನಗಳಲ್ಲಿ ಪೋಷಕರ ಮನೋಭಾವವು ಕೂಡ ಬೋಧನೆಯ ಮೇಲೆ ಪರಿಣಾಮವನ್ನುಂಟು ಮಾಡುತ್ತಿದೆ. ಲಕ್ಷಾಂತರ ರೂಪಾಯಿ ಕೊಟ್ಟು ಒಳ್ಳೆಯ ಕಾಲೇಜಿಗೆ ಅಥವಾ ಶಾಲೆಗೆ ತಮ್ಮ ಮಗುವನ್ನು ಸೇರಿಸಿದರೆ ತಮ್ಮ ಕರ್ತವ್ಯ ಮುಗಿತು ಎಂಬ ಭಾವನೆ ಹಲವು ಪೋಷಕರಲ್ಲಿ ಮನೆ ಮಾಡಿದೆ. ಅದರೊಂದಿಗೆ ಒಳ್ಳೆಯ ಅಂಕಗಳೇ ಬರಬೇಕು ತಮ್ಮ ಮಕ್ಕಳು ವೈದ್ಯರು, ಅಭಿಯಂತರರು, ವಕೀಲರೇ ಆಗಬೇಕೆಂಬ ಒತ್ತಡ ಹೆಚ್ಚುತ್ತಿರುವುದು ಕೂಡ ವಿದ್ಯಾರ್ಥಿಗಳಲ್ಲಿ ಮೊಂಡುತನವನ್ನು ಉಂಟು ಮಾಡಿ ಅವರ ಓದಿನ ಮೇಲೆ ನಕಾರಾತ್ಮಕತೆಯನ್ನು ಉಂಟುಮಾಡುತ್ತಿದೆ.

ಒಬ್ಬ ಪೋಷಕನಾಗಿ ತಮ್ಮ ಮಕ್ಕಳ ಮೇಲೆ ನಿರೀಕ್ಷೆಯನ್ನು ಇಟ್ಟುಕೊಳ್ಳುವುದು ಸರಿ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ನನ್ನ ಮಗ ಅಥವಾ ಮಗಳು ಇದನ್ನೇ ಓದಬೇಕು, ಹೀಗೆ ಆಗಬೇಕು ಎಂಬುದು ಎಷ್ಟರಮಟ್ಟಿಗೆ ಸರಿ ಎಂಬುದು ನನ್ನ ಪ್ರಶ್ನೆ? ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ, ಅವರ ಆಸಕ್ತಿಗೆ ಅನುಗುಣವಾಗಿ ವಿದ್ಯಾಭ್ಯಾಸವನ್ನು ಕೊಡಿಸಿದರೆ ಒಳಿತು. ಅವರಲ್ಲಿ ಇರುವ ನಿಜವಾದ ಪ್ರತಿಭೆಯನ್ನು ಗುರುತಿಸಿ ಆ ಪ್ರತಿಭೆಗೆ ನೀರನ್ನೆರೆದರೆ ಖಂಡಿತವಾಗಿಯೂ ಸಹಕಾರಿಯಾಗುವುದು. ಆಸಕ್ತಿ ಇಲ್ಲದ ಓದಿಗೆ ಸೇರಿಸಿ ಮನೆಯಲ್ಲಿದ್ದರೆ ಓದಲಾರನು ಅಥವಾ ಓದಲಾರಳು ಎಂದು ಭಾವಿಸಿ ವಸತಿ ಶಾಲೆಗಳಲ್ಲಿ ಅಥವಾ ಕಾಲೇಜುಗಳಲ್ಲಿ ಓದಿಸುವಂತಹ ಪೋಷಕರು ಇಂದಿನ ದಿನಗಳಲ್ಲಿ ಸರ್ವೆ ಸಾಮಾನ್ಯವಾಗಿದ್ದಾರೆ. ಆಸಕ್ತಿಯೇ ಇಲ್ಲದ ವಿದ್ಯಾರ್ಥಿಗಳಿಗೆ ಅದ್ಭುತವಾದ ಪಾಠವನ್ನು ಮಾಡಿದರೂ ಅದನ್ನು ಅವರು ಗಮನಿಸಲಾರರು. ಇತ್ತ ಶಿಕ್ಷಕರಿಗೂ ಅಂತವರಿಂದ ಯಾವುದೇ ಉಪಯೋಗವಾಗಲಾರದು.

ಇಷ್ಟೆಲ್ಲಾ ಅಡೆತಡೆಗಳಿದ್ದಾಗಿಯೂ ಅರ್ಹ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಆ ಪ್ರತಿಭೆಗೆ ಸೂಕ್ತವಾದ ಸ್ಥಾನಮಾನ ದೊರಕುವಂತೆ ಮಾಡುವಲ್ಲಿ ಹಲವು ಶಿಕ್ಷಕರು/ಬೋಧಕರು ಯಶಸ್ವಿಯಾಗಿದ್ದಾರೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಪ್ರಸ್ತುತ ಸನ್ನಿವೇಶಗಳಲ್ಲಿ ಬೋಧನೆ ಮಾಡಲು ಇರುವ ಸವಾಲುಗಳನ್ನು ಹೇಳಿದ ಮಾತ್ರಕ್ಕೆ ತಕ್ಷಣದಿಂದಲೇ ಬದಲಾವಣೆ ಆಗುತ್ತದೆ ಎಂಬ ಭ್ರಮೆ ನನಗಿಲ್ಲ ಏಕೆಂದರೆ ಜಿ.ಎಸ್.ಶಿವರುದ್ರಪ್ಪ ಅವರು ಕವನವೊಂದರಲ್ಲಿ ಹೇಳಿರುವಂತೆ

ಹಣತೆ ಹಚ್ಚುತ್ತೇನೆ ನಾನು
ಕತ್ತಲೆಯನ್ನು ದಾಟುತ್ತೇನೆಂಬ
ಭ್ರಮೆಯಿಂದಲ್ಲ
ಇರುವಷ್ಟು ಹೊತ್ತು ನಿನ್ನ ಮುಖ
ನಾನು,ನನ್ನ ಮುಖ ನೀನು
ನೋಡಬಹುದೆಂಬ
ಒಂದೇ ಒಂದು ಆಸೆಯಿಂದ ;
ಹಣತೆ ಆರಿದ ಮೇಲೆ, ನೀನು
ಯಾರೋ ನಾನು ಯಾರೋ ?

ವಾರಭವಿಷ್ಯ



24.12.2023 ರಿಂದ 30.12.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ವೃಷಭ, ಮಿಥುನ, ಕಟಕ, ಕುಜ–ವೃಶ್ಚಿಕ, ಧನುಸ್ಸು, ಬುಧ–ಧನುಸ್ಸು, ಗುರು–ಮೇಷ, ಶುಕ್ರ–ವೃಶ್ಚಿಕ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಪಶು ಸಂಗೋಪನೆಯಿಂದ ಹೇರಳ ಧನಲಾಭ. ಕ್ಷೀರ ಜನಿತ ವಸ್ತು ವ್ಯಾಪಾರದಿಂದ ಲಾಭ. ಮಾನಸಿಕ ಚಂಚಲತೆ ಇದ್ದರೂ ಕ್ರಿಯಾಶೀಲತೆ ಉತ್ತಮವಾಗಿರುವುದು. ಎಲ್ಲರೊಡನೆ ಬೆರೆತು ಮೆಚ್ಚುಗೆ ಗಳಿಸುವಿರಿ. ಜನ್ಮ ಗುರುವಿನಿಂದ ಅವಿಶ್ರಾಂತ ದುಡಿಮೆ ಅನಾರೋಗ್ಯಕ್ಕೆ ಎಡೆ ಮಾಡಿಕೊಡುವುದು. ರಾಹುಗ್ರಹ ಬಾಧಕನಾಗಿದ್ದು ಸ್ನಾಯು ಸೆಳೆತ, ಅಪಚನಗಳಿಂದ ಬಳಲುವಿರಿ.

ಶ್ರೀ ಗಣಪತಿ ಪೂಜೆ. ಶುಭ ಸಂಖ್ಯೆ–6.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಚಂದ್ರ ಸಂಚಾರದ ಫಲವಾಗಿ ಶುಭ ವಾರ್ತೆ ಬರುವುದು. ನಿಮ್ಮ ಕಾರ್ಯಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಗಳಿಸಿ ಕೀರ್ತಿಗೆ ಭಾಜನರಾಗುವಿರಿ. ಸ್ವಪ್ರಯತ್ನದಿಂದ ವಿಶಿಷ್ಟ ಸ್ಥಾನವನ್ನು ಕೈವಶ ಪಡಿಸಿಕೊಳ್ಳುವಿರಿ. ಮನೆಯಲ್ಲೂ ಹೊರಗೂ ಭಿನ್ನಾಭಿಪ್ರಾಯಗಳು ಉಂಟಾಗುವುದು. ವಿಕೋಪಕ್ಕೆ ಹೋಗದಂತೆ ಎಚ್ಚರ ವಹಿಸಬೇಕು. ಆಸ್ತಿ ವಿಷಯದ ವ್ಯಾಜ್ಯಗಳು ಇತ್ಯರ್ಥವಾಗದೆ ಮನಸ್ಸಿಗೆ ಬೇಗುದಿ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಶ್ರೀ ಗುರು ಶುಭನಿದ್ದಾನೆ. ನಿಮ್ಮ ಉದಾತ್ತ ಆದರ್ಶಗಳಿಂದ ಉನ್ನತ ಸ್ಥಾನ ತಲುಪುವ ಸಾಧ್ಯತೆ ಇದೆ. ಪುರಾತನ ಆಧ್ಯಾತ್ಮ ಗ್ರಂಥಗಳಲ್ಲಿ ಆಸಕ್ತಿ ಉಂಟಾದೀತು. ಮಠಾಧಿಪತಿಗಳ ಆಶೀರ್ವಾದ ದೊರಕಲಿದೆ. ಮನೆಯಲ್ಲಿ ಶಾಂತಿ ಹಾಗೂ ಹೊಂದಾಣಿಕೆಯಿಂದ ಮುಂದುವರೆಯಿರಿ. ಕರ್ಮಸ್ಥಾನದ ರಾಹು ನಿಮ್ಮಿಂದ ನೀತಿಗೆಟ್ಟ ಕಾರ್ಯಕ್ಕೆ ಪ್ರೇರೇಪಿಸಬಹುದು. ಪೊಲೀಸ್ ಠಾಣೆ ದರ್ಶನವಾದೀತು.

ಶ್ರೀ ವಿಷ್ಣು ಅರ್ಚನೆ. ಶುಭ ಸಂಖ್ಯೆ–4.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಪುಷ್ಪ, ಪರಿಮಳ, ವಸ್ತ್ರ, ಭೋಗ ವಿಲಾಸಗಳನ್ನು ಅನುಭವಿಸುವಿರಿ. ಸರ್ಕಾರದಿಂದ ಮಾನ್ಯತೆ, ಪ್ರಶಸ್ತಿಗಳು ದೊರೆಯುವುದು. ನಿಮ್ಮ ಸತ್ಯ, ನಿಷ್ಠೆ, ಪ್ರಾಮಾಣಿಕತೆಗಳಿಂದ ಜನಾನುರಾಗ ಗಳಿಸುವಿರಿ. ಪಾಲುದಾರಿಕೆ ವ್ಯವಹಾರಗಳಲ್ಲಿ ಬಂಡವಾಳ ಹೂಡುವುದು ಸಮಂಜಸವಲ್ಲ. ವಾರದ ಕಡೆಗೆ ಪರಸ್ಥಳಕ್ಕೆ ತೆರಳಿ ಕಷ್ಟ ನಷ್ಟಗಳನ್ನು ಎದುರಿಸಬೇಕಾದೀತು. ಸಮುದ್ರ, ಜಲಾಶಯಗಳ ಹತ್ತಿರ ಹುಡುಗಾಟ ಸಲ್ಲದು.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–8.



ಸಿಂಹ (ಮ.ಮಿ.ಮು.ಮೆ.ಮೆ.ಟ.ಟಿ.ಟು.ಟೆ)

ಸಪ್ತಾಹದ ಆದಿಗೆ ನಿಮ್ಮ ಯೋಜನೆಗಳು ಪ್ರಗತಿಯ ಹಾದಿಯಲ್ಲಿ ಸಾಗಲು ಗುರುಬಲದ ಬೆಂಗಾವಲು ಇದೆ. ಹೋಟೆಲ್, ಕ್ಯಾಟರಿಂಗ್ ಉದ್ಯೋಗದವರಿಗೆ ಬೇಡಿಕೆ ಹೆಚ್ಚಾಗುವುದು. ಜೊತೆಗೆ ಧನ ಸಂಪಾದನೆಯೂ ಚೆನ್ನಾಗಿ ಆಗಲಿದೆ. ಸರ್ಕಾರಿ ಕೆಲಸಗಳು, ನ್ಯಾಯಾಲಯದ ವಿಚಾರಗಳು ನಿಮಗೆ ಪ್ರತಿಕೂಲಕರವಾಗಿರುವುದು. ಮನೆ ಮಂದಿಯೊಂದಿಗೆ ಸೌಹಾರ್ದತೆ ಇರಲಿ ಅನ್ಯಥಾ ವಿಷಮ ಸ್ಥಿತಿಗೆ ಹೋದೀತು.

ಶ್ರೀ ಶಿವಪಂಚಾಕ್ಷರಿ ಜಪ. ಶುಭ ಸಂಖ್ಯೆ–3



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ತುಳಿಯುವವರು ಎಷ್ಟೇ ಜನ ಇದ್ದರೂ ಕಾಪಾಡಲು ಒಬ್ಬ ದೇವನಿದ್ದಾನೆ. ನ್ಯಾಯ–ಧರ್ಮಗಳನ್ನು ಬಿಡದಿರಿ. ಗುರು ಕೃಪೆಯಿಂದ ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಪರೋಪಕಾರಿಗಳೆನಿಸಿ ಜನಾದರಕ್ಕೆ ಪಾತ್ರರಾಗುವಿರಿ. ನಿಮ್ಮ ಅರ್ಹತೆಗೆ ತಕ್ಕ ಗೌರವಾರ್ಹ ಉದ್ಯೋಗ ದೊರೆಯುವುದು. ವಾರದ ಕಡೆಗೆ ವಿನಾಕಾರಣ ಖರ್ಚುಗಳಿಂದ ಪರ್ಸ್ ಖಾಲಿ.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ–1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ವಾರ ನೀವು ಪ್ರೇರಕ ಶಕ್ತಿಯಾಗುವ ಅವಕಾಶವಿದೆ. ನಿಮ್ಮ ರಾಶ್ಯಾಧಿಪತಿ ಶುಕ್ರನ ಶುಭ ಗೋಚರ ಫಲವಾಗಿ ಹಲವು ಮೂಲಗಳಿಂದ ಧನಾಗಮ ಆಗುವುದು. ವೈಭವ ಪೂರ್ಣ ವಸ್ತುಗಳನ್ನು ಕೊಳ್ಳುವಿರಿ. ನಿಮ್ಮ ಖಾಸಗಿ ಜೀವನ ಸಂತೋಷಮಯವಾಗಿರುವುದು. ಆದರೆ ನ್ಯಾಯಾಲಯ ವಿಷಯಗಳಲ್ಲಿ ನಿರಾಶೆಯನ್ನು ಎದುರಿಸಬೇಕಾದೀತು. ಕೋಪದಿಂದ ಏನೂ ಸಾಧನೆಯಾಗದು.

ಶ್ರೀ ತ್ರಿಪುರ ಸುಂದರಿ ದರ್ಶನ. ಶುಭ ಸಂಖ್ಯೆ–5.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಆಗುವುದೆಲ್ಲಾ ಒಳ್ಳೆಯದಕ್ಕೆ ಎಂಬ ನಂಬಿಕೆಯಿಂದ ಮುಂದುವರೆಯಿರಿ. ಅಬಾಧಿತ ಚಂದ್ರ ಸಂಚಾರದಿಂದ ನೀವಂದುಕೊಂಡ ಕೆಲಸ ಸುಲಲಿತವಾಗಿ ಸಾಗುವುದು. ಯುವಕ–ಯುವತಿಯರು ಪ್ರೇಮಪಾಶದಲ್ಲಿ ಬೀಳುವ ಸಾಧ್ಯತೆ ಇದೆ. ಕೃಷಿಕರಿಗೆ ಅಷ್ಟೇನು ಉತ್ತಮ ಫಲವಿಲ್ಲ. ಶಾರೀರಿಕ ಬಾಧೆ ಕಾಡಿಸುತ್ತೆ. ಕೆಟ್ಟ ಹವ್ಯಾಸಗಳಿಗೆ ದಾಸರಾಗಿ ಸಾಮಾಜಿಕವಾಗಿ ಅಗೌರವವನ್ನು ಅನುಭವಿಸುವಿರಿ.

ಶ್ರೀ ನರಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–9.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಒಂದು ಮಾರ್ಗದಿಂದ ಖರ್ಚುಗಳು ಹೆಚ್ಚಾದರೂ, ಇನ್ನೊಂದು ಮಾರ್ಗದಿಂದ ಹಣ ಬರಲಿದೆ. ವಾರಪೂರ್ತಿ ಲವಲವಿಕೆಯಿಂದ ಎಲ್ಲಾ ಕಾರ್ಯಗಳಲ್ಲೂ ಆಸಕ್ತಿಯನ್ನು ತೋರುವಿರಿ. ಶ್ರೀಗುರು ಕೃಪೆಯಿಂದ ನಿಮ್ಮ ಆತ್ಮವಿಶ್ವಾಸ ಉಚ್ಚ ಮಟ್ಟದ್ದಾಗಿರುತ್ತದೆ. ಮಾಡುವ ಪ್ರಯತ್ನಗಳಲ್ಲಿ ಕಾರ್ಯ ಸಿದ್ಧಿಯನ್ನು ಹೊಂದುವಿರಿ. ಮನೆಯಲ್ಲಿ ದೇವತಾ ಕಾರ್ಯಗಳು ನಡೆಯುವುದು.

ಶ್ರೀ ಅಶ್ವತ್ಥ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ–8.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಹೀಗೇ ಆಗಬೇಕೆಂದು ಬಯಸದೆ, ಆಗಿದ್ದನ್ನು ಒಪ್ಪಿಕೊಳ್ಳುವುದು ಜಾಣತನ. ಹೊಸ ಉದ್ಯಮ ಪ್ರಾರಂಭಕ್ಕೆ ಮುನ್ನ ಅದರ ಸಾಧಕ–ಬಾಧಕಗಳನ್ನು ಅನುಭವಸ್ಥರಿಂದ ತಿಳಿದು ಮುಂದುವರೆಯಿರಿ. ಕಠಿಣ ಪರಿಶ್ರಮಕ್ಕೆ ದೈವಕೃಪೆ ಒಲಿಯುತ್ತದೆ. ವಾರದ ಉತ್ತರಾರ್ಧದಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಇಂಟರ್‌ವ್ಯೂ ಸಕ್ಸಸ್. ಕ್ಷೀರೋತ್ಪನ್ನ ಉದ್ಯಮದವರಿಗೆ ಹೇರಳ ಧನಲಾಭವಾಗುವುದು.

ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ–5.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಫರ್ನಿಚರ್, ದುಬಾರಿ ಪೀಠೋಪಕರಣ ಉದ್ಯಮದವರಿಗೆ ಉತ್ತಮ ಧನಲಾಭವಾಗುವುದು. ಜನ್ಮಸ್ಥ ಶನಿದೇವನಿಂದಾಗಿ ಪ್ರಮುಖ ಕೆಲಸಗಳು ನಿಧಾನಗತಿಯಲ್ಲಿ ಸಾಗುತ್ತವೆ. ನ್ಯಾಯಾಲಯ ವಿಚಾರಗಳಲ್ಲಿ ರಾಜಿ ಸಂಧಾನ ಮಾಡಿಕೊಳ್ಳುವುದು ಒಳ್ಳೆಯದು. ಕಾರ್ಯನಿಮಿತ್ತ ಪ್ರಯಾಣಗಳು ಉಂಟಾಗಬಹುದು. ವಾಹನ ಜಾಗರೂಕತೆಯಿಂದ ಚಲಾಯಿಸಿ. ವಾರದ ಕಡೆಗೆ ಆಮೋದ–ಪ್ರಮೋದಗಳಿಂದ ಮಾನಸಿಕ ಉಲ್ಲಾಸ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–7.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ದೀರ್ಘ ಕಾಲಿನ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಿ. ಇದು ನಿಮ್ಮ ಭವಿಷ್ಯದ ಭದ್ರತೆಗೆ ಅಗತ್ಯವಾಗಿದೆ. ವೃತ್ತಿಯಲ್ಲಿ ಬದಲಾವಣೆ ಅನಿವಾರ್ಯವಾಗಬಹುದು. 'ಮನಸ್ಸಿದ್ದರೆ ಮಾರ್ಗ'. ಅನುಭವಿಗಳಿಂದ ಸಹಾಯಹಸ್ತ, ಸ್ನೇಹಿತರಿಂದ ಸ್ಫೂರ್ತಿ ದೊರೆಯಲಿದೆ. ರಾಹುಗ್ರಹ ಅಶುಭನಿರುವ ಕಾರಣ ದುಷ್ಟ ಜನರಿಂದ ದೂರವಿರಿ. ಅನ್ಯಥಾ ಠಾಣೆಗೆ ಅಲೆದಾಟ ಉಂಟಾದೀತು.

ಶ್ರೀ ದತ್ತಾತ್ರೇಯ ಉಪಾಸನೆ. ಶುಭ ಸಂಖ್ಯೆ–4.


ಮಕ್ಕಳ ಚಿತ್ರಕಥೆ

'ವೀರ ಸನ್ಯಾಸಿ ಹೇಳಿದ್ದು...!'


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಂದು ಸಾಮಾನ್ಯ ಕೆಲಸವನ್ನೂ ಅತ್ಯುತ್ತಮವಾಗಿ ಮಾಡುವುದರಿಂದ ಶ್ರೇಷ್ಠ ಪ್ರತಿಫಲ ದೊರೆಯುತ್ತದೆ...!!!




ನಮಗೆ ನಾವೇ ಕೇಡನ್ನುಂಟುಮಾಡಿಕೊಳ್ಳದಿದ್ದರೆ...ಜಗತ್ತಿನ ಯಾವ ಶಕ್ತಿಯೂ ನಮಗೆ ಕೇಡನ್ನುಂಟುಮಾಡಲಾರದು...!!!




ಅನುಭವವು ಜಗತ್ತಿನ ಸರ್ವಶ್ರೇಷ್ಠ ಶಿಕ್ಷಕ...!!!



ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ..... ಅದು ತಾನಾಗಿಯೇ ವಾಪಸ್ ಬರಲಿದೆ....!!!



ಪ್ರತಿ ದಿನ ನೀವು ಒಮ್ಮೆಯಾದರೂ ನಿಮ್ಮೊಂದಿಗೆ ನೀವು ಮಾತನಾಡಿ..... ಇಲ್ಲದಿದ್ದರೆ ನೀವು ಈ ಜಗತ್ತಿನಲ್ಲಿ ಅತ್ಯುತ್ತಮ ವ್ಯಕ್ತಿಯೊಂದಿಗೆ ಸಂಪರ್ಕ ಕಳೆದುಕೊಳ್ಳಬಹುದು....!!!



ನಿಮ್ಮ ಮೆದುಳನ್ನು ದೊಡ್ಡ ಆಲೋಚನೆಯಿಂದ ತುಂಬಿರಿ...... ಅತ್ಯುನ್ನತ ಆದರ್ಶಗಳನ್ನು ನಿಮ್ಮ ಮುಂದೆ ಹಗಲು–ರಾತ್ರಿ ಇಡಿ. ಅದರಿಂದ ದೊಡ್ಡ ಕೆಲಸ ಹೊರಬರುತ್ತದೆ....!!!

ಯಾರೇ ಅಭ್ಯರ್ಥಿಯಾದರೂ ಅವರನ್ನು ಒಗ್ಗಟ್ಟಾಗಿ ಗೆಲ್ಲಿಸಿ

ಚಾ.ನಗರ ಲೋಕಸಭಾ ಚುನಾವಣೆ : ಕಾಂಗ್ರೆಸ್ ಪೂರ್ವಭಾವಿ ಸಭೆಯಲ್ಲಿ ಸಚಿವ ದಿನೇಶ್ ಗುಂಡೂರಾವ್ ಕರೆ

ನಂಜನಗೂಡು, ಡಿ.23– ಲೋಕಸಭಾ ಚುನಾವಣೆ ಕಾಂಗ್ರೆಸ್ ಪಕ್ಷಕ್ಕೆ ಪ್ರತಿಷ್ಠೆಯ ಚುನಾವಣೆಯಾಗಿದ್ದು, ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲ್ಲಬೇಕಾದ ಅನಿವಾರ್ಯತೆಯಿರುವುದರಿಂದ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಯಾರೇ ಅಭ್ಯರ್ಥಿಯಾದರೂ ಸಹ ಒಗ್ಗಟ್ಟಾಗಿ ದುಡಿದು ಪಕ್ಷ ಜಯಗಳಿಸುವಂತೆ ಕೆಲಸ ಮಾಡಬೇಕು ಎಂದು ಆರೋಗ್ಯ ಸಚಿವ ಮತ್ತು ಚುನಾವಣಾ ಉಸ್ತುವಾರಿ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.



ತಾಲೂಕಿನ ದೊಡ್ಡಕವಲಂದೆ ಗ್ರಾಮದ ನೀಲಾಂಬಿಕೆ ಕಲ್ಯಾಣ ಮಂಟಪದಲ್ಲಿ ಗುಂಡ್ಲುಪೇಟೆ, ನಂಜನಗೂಡು, ವರುಣ, ನರಸೀಪುರ, ಕೊಳ್ಳೇಗಾಲ, ಚಾಮರಾಜನಗರ, ಹನೂರು ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರ ಪೂರ್ವಭಾವಿ ಸಭೆ ನಡೆಸಿ ಅವರು ಮಾತನಾಡಿದರು.

ಕಾರ್ಯಕರ್ತರ ಪರಿಶ್ರಮದಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಚಾಮರಾಜನಗರ ಲೋಕಸಭಾ ಕ್ಷೇತ್ರದ 8 ವಿಧಾನಸಭೆ ಕ್ಷೇತ್ರಗಳ ಪೈಕಿ 7 ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಗೆದ್ದಿರುವುದು ಪಕ್ಷಕ್ಕೆ ಶಕ್ತಿ ಬಂದಂತಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಧ್ರುವನಾರಾಯಣ್ ಗೆಲ್ಲುವ ವಿಶ್ವಾಸವಿತ್ತು. ಆದರೆ ಕೆಲವೇ ಮತಗಳ ಅಂತರದಿಂದ ಸೋಲಬೇಕಾಯಿತು. ಜೆಡಿಎಸ್ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದಾಗಿ ರಾಜ್ಯದಲ್ಲಿ ಹೆಚ್ಚು ಸ್ಥಾನವನ್ನೂ ಗಳಿಸಲು ಸಾಧ್ಯವಾಗಲಿಲ್ಲ ಎಂದು ಅವರು ನುಡಿದರು.

ಎಲ್ಲಾ ಮುಖಂಡರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ಸಮರ್ಥ ನಾಯಕನನ್ನು ಕಳೆದುಕೊಂಡಿರುವುದು ಪಕ್ಷಕ್ಕೆ ದೊಡ್ಡ ನಷ್ಟ. ಅವರು ಸೋತ ಕಹಿ ನೆನಪು ಅವರನ್ನು ಬಾಧಿಸುತ್ತಿತ್ತು. ಈ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರೋಣ ಎಂದರು.

> ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ನಂಜುಂಡಸ್ವಾಮಿ, ಕಾಗಲವಾಡಿ ಶಿವಣ್ಣ, ಸುನೀಲ್‌ಬೋಸ್, ಪುಷ್ಪ ಅಮರನಾಥ್, ಬಿ.ಸೋಮಶೇಖರ್ ಸೇರಿದಂತೆ 7 ಮಂದಿ ಆಕಾಂಕ್ಷಿಗಳಿದ್ದಾರೆ. ಎಲ್ಲಾ ಆಕಾಂಕ್ಷಿಗಳೂ ಸಹ ಪಕ್ಷದ ತೀರ್ಮಾನಕ್ಕೆ ಬದ್ಧರಾಗಿರುವುದಾಗಿ ಹೇಳಿದ್ದಾರೆ. ನಾವು ಪ್ರತ್ಯೇಕವಾಗಿ ಉಸ್ತುವಾರಿ ಸಚಿವರ, ಶಾಸಕರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ, ಆಕಾಂಕ್ಷಿಗಳ, ಕಾರ್ಯಕರ್ತರ ಅಭಿಪ್ರಾಯವನ್ನು ಸಂಗ್ರಹಿಸಿ ವರಿಷ್ಠರಿಗೆ ವರದಿ ಮಾಡಲಿದ್ದೇನೆ. ಪಕ್ಷದ ವರಿಷ್ಠರ ತೀರ್ಮಾನದಂತೆ ಯಾರೇ ಅಭ್ಯರ್ಥಿಯಾದರೂ ಸಹ ಒಗ್ಗಟ್ಟಾಗಿ ಕೆಲಸ ಮಾಡಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲು ಸನ್ನದ್ಧರಾಗಿ.
> – ದಿನೇಶ್ ಗುಂಡೂರಾವ್, ಚುನಾವಣಾ ಉಸ್ತುವಾರಿ

ಪಕ್ಷದ ಕಾರ್ಯಕರ್ತರು, ಮುಖಂಡರು, ಶಾಸಕರ ಮತ್ತು ಆಕಾಂಕ್ಷಿಗಳ ಅಭಿಪ್ರಾಯವನ್ನು ಸಂಗ್ರಹಿಸಿ ವರಿಷ್ಠರಿಗೆ ವರದಿ ಸಲ್ಲಿಸುವಂತೆ ಪಕ್ಷ ಸೂಚನೆ ನೀಡಿರುವ ಕಾರಣದಿಂದ ನಾವು ಪೂರ್ವಭಾವಿ ಸಭೆಯನ್ನು ನಡೆಸುತ್ತಿದ್ದೇವೆ ಎಂದರು.

ಶಾಸಕ ದರ್ಶನ್‌ಧ್ರುವನಾರಾಯಣ್ ಮಾತನಾಡಿ, ನನ್ನ ತಂದೆ ಈ ಕ್ಷೇತ್ರದಲ್ಲಿ 2 ಬಾರಿ ಸಂಸದರಾಗಿ ದೇಶದಲ್ಲಿ 4ನೇ, ರಾಜ್ಯದಲ್ಲಿ ಮೊದಲನೆ ಸಂಸದರಾಗಿ ಹೊರಹೊಮ್ಮಿದ್ದರು. ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದರೂ ಸಹ ಅವರು ಸೋಲಬೇಕಾಯಿತು. ಕೆಲವೇ ಮತಗಳ ಅಂತರದಿಂದ ಸೋತಿದ್ದ ಕಹಿ ಅನುಭವ ಕೊನೆವರೆಗೂ ಅವರನ್ನು ಬಾಧಿಸುತ್ತಿತ್ತು ಅವರ ನೋವು ಮರೆಯುವಂತೆ ಪಕ್ಷದ ಅಭ್ಯರ್ಥಿಗೆ ಐತಿಹಾಸಿಕ ಗೆಲುವು ತಂದುಕೊಡಿ ಎಂದು ಕರೆ ನೀಡಿದರು.

ಕಾಗಲವಾಡಿ ಶಿವಣ್ಣ ಮಾತನಾಡಿ, 2004ರಲ್ಲಿ ನಾನು ಲೋಕಸಭಾ ಸದಸ್ಯನಾಗಿ ಸೋನಿಯಾ ಗಾಂಧಿ ಅವರ ಮಾತಿಗೆ ಬೆಲೆಕೊಟ್ಟು ಮತಹಾಕಿ ಕೇಂದ್ರದಲ್ಲಿ ಸರ್ಕಾರ ಉಳಿಸಿದ್ದೆ. ಈ ಬಾರಿ ಅವಕಾಶ ಕಲ್ಪಿಸಿ ಎಂದರು.

ಸುನೀಲ್ ಬೋಸ್ ಮಾತನಾಡಿ, 2008ರಿಂದ ಪಕ್ಷಕ್ಕಾಗಿ ದುಡಿದು ಸಂಘಟನೆಯಲ್ಲಿ ತೊಡಗಿದ್ದೇನೆ. ನಾನು ಪ್ರಬಲ ಆಕಾಂಕ್ಷಿಯಾಗಿದ್ದು, ವರಿಷ್ಠರು ನನಗೊಂದು ಅವಕಾಶ ಕಲ್ಪಿಸಿ ಎಂದರು.

ನಂಜುಂಡಸ್ವಾಮಿ ಮಾತನಾಡಿ, ನಾನು ಶಾಸಕನಾಗಿ ಕೆಲಸ ಮಾಡಿದ್ದೇನೆ. ಜೊತೆಗೆ ಧ್ರುವನಾರಾಯಣ್ ಅವರ ಗೆಲುವಿಗೆ ಶ್ರಮಿಸಿದ್ದೇನೆ. ಧ್ರುವನಾರಾಯಣ್ ಅವರ ನೆನಪು ಉಳಿಸಲು ನನಗೊಂದು ಅವಕಾಶ ಕಲ್ಪಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಪುಷ್ಪ ಅಮರನಾಥ್ ಮಾತನಾಡಿ, ನಾನು ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆಯಾಗಿ ರಾಜ್ಯದಾದ್ಯಂತ ಪಕ್ಷ ಸಂಘಟನೆಗೆ ಒತ್ತು ನೀಡಿದ್ದೇನೆ. ಈ ಬಾರಿ ನನಗೆ ಅವಕಾಶ ನೀಡಿದ್ದಲ್ಲಿ ಮಹಿಳೆಯರಿಗೆ ಗೌರವ ತಂದು ಕೊಟ್ಟಂತಾಗುತ್ತದೆ. ಆದ್ದರಿಂದ ನನಗೆ ಈ ಬಾರಿ ಟಿಕೆಟ್ ನೀಡುವ ವಿಶ್ವಾಸವಿದೆ ಎಂದರು. ಆಕಾಂಕ್ಷಿ ಬಿ.ಸೋಮಶೇಖರ್ ಮಾತನಾಡಿದರು.

ಸಮಾರಂಭದಲ್ಲಿ ರೇಷ್ಮೆ ಮತ್ತು ಪಶು ಸಂಗೋಪನೆ ಸಚಿವ ವೆಂಕಟೇಶ್, ಶಾಸಕರಾದ ಅನಿಲ್ ಚಿಕ್ಕಮಾದು, ಎ.ಆರ್.ಕೃಷ್ಣಮೂರ್ತಿ, ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್, ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ಜಯಣ್ಣ, ನರೇಂದ್ರ, ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ಚಾಮರಾಜನಗರ ಅಧ್ಯಕ್ಷ ಮರಿಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ವಿಧಾನಸಭಾ ಉಸ್ತುವಾರಿ ಸೋಮೇಶ್, ಮುಖಂಡರಾದ ಕೆ.ಮಾರುತಿ, ಸಿ.ಎಂ.ಶಂಕರ್, ಕುಳ್ಳಯ್ಯ, ಮೂಗಶೆಟ್ಟಿ ಸೇರಿದಂತೆ ಕಾರ್ಯಕರ್ತರು ಇದ್ದರು.

ಶ್ರೀಮಠಗಳು, ಶ್ರೀಗಳಿಂದ ಗ್ರಾಮೀಣ ಜನರ ಬದುಕು ಹಸನು

ವಾಟಾಳು ಮಠದ ಶ್ರೀಗಳ 75ನೇ ವರ್ಧಂತಿ ಮಹೋತ್ಸವದಲ್ಲಿ ಬಣ್ಣನೆ

ತಿ.ನರಸೀಪುರ, ಡಿ.23– ಗ್ರಾಮೀಣ ಭಾಗದ ಜನರ ಬದುಕು ಹಸನಾಗಬೇಕಾದರೆ ಶ್ರೀ ಮಠಗಳು ಹಾಗೂ ಪರಮ ಪೂಜ್ಯ ಸ್ವಾಮೀಜಿಗಳ ಆಶೀರ್ವಚನ, ಮಾರ್ಗದರ್ಶನ ಬಹುಮುಖ್ಯ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಅಭಿಪ್ರಾಯಪಟ್ಟರು.



ತಾಲೂಕಿನ ನಿಲಸೋಗೆ ಗ್ರಾಮದ ಶ್ರೀ ವೀರತ್ತಸ್ವಾಮಿಗಳ ಸೇವಾ ಪ್ರತಿಷ್ಠಾನ ಮತ್ತು ಗುರು ಮಲ್ಲೇಶ್ವರ ದಾಸೋಹ ಮಠದ ವತಿಯಿಂದ ಗ್ರಾಮದ ವೀರತ್ತಸ್ವಾಮಿಗಳವರ ಸಮುದಾಯ ಭವನದಲ್ಲಿ ಶನಿವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ವಾಟಾಳು ಮಠದ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳ 75 ನೇ ವರ್ಷದ ಜನ್ಮ ವರ್ಧಂತಿ ಅಂಗವಾಗಿ ಗುರುವಂದನ ಹಾಗೂ 8 ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ ಸನ್ನಿವೇಶದಲ್ಲಿ ನಾವೆಲ್ಲರೂ ಮೌಢ್ಯತೆ, ಕಂದಾಚಾರಗಳನ್ನು ಪೋಷಣೆ ಮಾಡುವ ಮೂಲಕ ಬದುಕನ್ನೇ ಹಾಳು ಮಾಡಿಕೊಳ್ಳುತ್ತಿದ್ದೇವೆ.ಮೂಢನಂಬಿಕೆಗಳಿಂದ ಹೊರಬಂದು ಬಸವಣ್ಣರ ಮಾತಿನಂತೆ ಕಾಯಕವನ್ನು ಮಾಡುವ ಮೂಲಕ ಬದುಕನ್ನು ಕಟ್ಟಿಕೊಳ್ಳಬೇಕಿದೆ. ಗ್ರಾಮೀಣ ಜನರು ಬದುಕಿಗೆ ಶ್ರೀ ಮಠಗಳು, ಪರಮಪೂಜ್ಯರ ದರ್ಶನ, ಧರ್ಮ ಬೋಧನೆಗಳು ಬಹು ಮುಖ್ಯವಾಗುತ್ತವೆ. ಶರಣರ ವಚನಗಳನ್ನು ಅರ್ಥೈಸಿಕೊಳ್ಳುವ ಮೂಲಕ ನಮ್ಮ ಬದುಕನ್ನು ಪುನೀತಗೊಳಿಸಿಕೊಳ್ಳಬೇಕು. ಇಲ್ಲದೇ ಹೋದರೆ ಮುಂದಿನ ದಿನಗಳಲ್ಲಿ ಇನ್ನೂ ಕಷ್ಟದ ದಿನಗಳನ್ನು ಕಾಣಬೇಕಾಗುತ್ತದೆ ಎಂದರು.

ದಾಸೋಹ ಭವನ ನಿರ್ಮಾಣಕ್ಕೆ 5 ಲಕ್ಷ ರೂ.ಅನುದಾನ!: ಗುರು ಮಲ್ಲೇಶ್ವರ ದಾಸೋಹ ಭವನ ನಿರ್ಮಾಣ ಕಾಮಗಾರಿಗೆ ವಿಧಾನಪರಿಷತ್ ಸದಸ್ಯರ ಅನುದಾನದಿಂದ 5 ಲಕ್ಷ ರೂ.ಗಳನ್ನು ನೀಡುವುದಾಗಿ ಪ್ರಕಟಿಸಿದ ಮರಿತಿಬ್ಬೇಗೌಡ, ಮಠಗಳು, ಪರಮ ಪೂಜ್ಯರ ಮಾರ್ಗದರ್ಶನ ಎಲ್ಲ ಕಾಲದಲ್ಲೂ ಎಲ್ಲ ಸಂದರ್ಭಕ್ಕೂ ಪ್ರಸ್ತುತವಾಗಿದ್ದು, ದಾಸೋಹ ಮಠದ ಕಾಮಗಾರಿ ಆದಷ್ಟು ಬೇಗ ಸಂಪೂರ್ಣಗೊಂಡು ಸೇವೆಗೆ ದೊರಕಲಿ ಎಂದು ಆಶಿಸಿದರು.

ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, 75 ನೇ ವರ್ಷದ ವಜ್ರ ಮಹೋತ್ಸವ ಆಚರಣೆ ಮಾಡಿಕೊಳ್ಳುತ್ತಿರುವ ವಾಟಾಳು ಶ್ರೀಗಳದ್ದು ಸಾರ್ಥಕ ಬದುಕಾಗಿದ್ದು, ಪರಮ ಪೂಜ್ಯರು ತಮ್ಮ ಬದುಕಿನುದ್ದಕ್ಕೂ ಧಾರ್ಮಿಕವಾಗಿ, ಸಾಮಾಜಿಕವಾಗಿ ಜನಸಾಮಾನ್ಯರ ಒಳಿತನ್ನೇ ಬಯಸುತ್ತಾ ಬಂದಿದ್ದಾರೆ. ಶ್ರೀ ಮಠದ ಮೂಲಕ ಸ್ವಾಮೀಜಿಯವರು ಸಮಾಜಕ್ಕೆ ಅನೇಕ ಕಾರ್ಯಕ್ರಮಗಳನ್ನು ಕೊಡುತ್ತಾ ಬಂದಿದ್ದಾರೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.75 ವರ್ಷ ಪೂರೈಸಿದ ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿಯವರಿಗೆ ಪುಷ್ಪವೃಷ್ಟಿ ಮಾಡುವ ಮೂಲಕ ಗುರುವಂದನೆ ಸಲ್ಲಿಸಲಾಯಿತು. ಈ ವೇಳೆ ಹಿರಿಯ ಮುಖಂಡರಾದ ಹಿರಿಯೂರು ನಾಗಪ್ಪ, ತುರುಗನೂರು ರಾಜಣ್ಣ ಹಾಗೂ ತೊಟ್ಟವಾಡಿ ಟಿ.ಸಿ.ಮಹದೇವಪ್ಪರನ್ನು ಶ್ರೀಗಳು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಮಾದ್ರಹಳ್ಳಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮಿ,ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸಿದ್ದಪ್ಪ ಮಾತನಾಡಿದರು.

ಶ್ರೀಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ವೀರತ್ತಸ್ವಾಮಿಗಳವರ ಸೇವಾ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷರಾದ ಮಲ್ಲಪ್ಪ ಸ್ವಾಮಿಗಳು, ನೆರಗ್ಯಾತನಹಳ್ಳಿ ಮಠದ ಇಮ್ಮಡಿ ಶಿವಕುಮಾರಸ್ವಾಮಿ,ಆಲಹಳ್ಳಿ ಮಠದ ಶಿವಕುಮಾರಸ್ವಾಮಿ, ವೀರಪ್ಪ ಒಡೆಯರಹುಂಡಿ ಮಠದ ರೇಣುಕಾ ಶಿವಾಚಾರ್ಯ ಸ್ವಾಮಿ, ರಾಮೇಗೌಡನಪುರ ಮಠದ ಮಹಾಲಿಂಗಸ್ವಾಮಿ, ಕನಕಪುರ ದೇಗುಲ ಮಠದ ನಿಲಸೋಗೆ ಮಹಾದೇವಸ್ವಾಮಿ, ಬಿಲಿಗೆರೆಹುಂಡಿ ದಾಸೋಹಮಠದ ರಾಜಶೇಖರ ಸ್ವಾಮಿ, ಕೊತ್ತೇಗಾಲ ಮಠದ ನಾಗಪ್ಪಸ್ವಾಮಿ, ಬೆನಕನಹಳ್ಳಿ ಮಠದ ಮಹದೇವಸ್ವಾಮಿ, ಹೆಳವರಹುಂಡಿ ಮಠದ ಸ್ವಾಮೀಜಿಗಳು, ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ತೊಂಟೇಶ್, ಡೈರಿ ಮಾಜಿ ಅಧ್ಯಕ್ಷ ಬೆನಕನಹಳ್ಳಿ ಬಸಪ್ಪ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ವಕೀಲ ಜ್ಞಾನೇಂದ್ರ ಮೂರ್ತಿ, ನಿಲಸೋಗೆ ಮಹಾದೇವ್ ಪ್ರಸಾದ್, ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಸೇರಿದಂತೆ ಶ್ರೀ ಮಠದ ಭಕ್ತವೃಂದ ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಲೈಂಗಿಕ ದೌರ್ಜನ್ಯ ಆರೋಪ: ಮುಖ್ಯಶಿಕ್ಷಕ ಅಮಾನತು

ಹುಣಸೂರು, ಡಿ.23– ತಾಲೂಕಿನ ಹೊಸವಾರಂಚಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಹೆಣ್ಣು ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸಿ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಹಿನ್ನೆಲೆಯಲ್ಲಿ ಪ್ರಭಾರ ಮುಖ್ಯ ಮುಖ್ಯ ಶಿಕ್ಷಕ ಎಸ್.ಕೃಷ್ಣಮೂರ್ತಿ ಅವರನ್ನು ಅಮಾನತುಗೊಳಿಸಿ ಡಿಡಿಪಿಐ ಎಚ್.ಕೆ.ಪಾಂಡು ಅವರು ಆದೇಶ ಹೊರಡಿಸಿದ್ದಾರೆ.



ಕೃಷ್ಣಮೂರ್ತಿ

ಹೊಸವಾರಂಚಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಎಸ್.ಕೃಷ್ಣಮೂರ್ತಿ ಶಾಲೆಯ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವೆಸಗುತ್ತಿದ್ದು, ಅವರ ವಿರುದ್ಧ ಕಠಿಣ ಕ್ರಮವಾಗಬೇಕೆಂದು ಗ್ರಾಮಸ್ಥರು, ಪೋಷಕರು ಆಗ್ರಹಿಸಿ ಮೇಲಾಧಿಕಾರಿಗಳಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಅಮಾನತ್ತು ಆದೇಶ ಹೊರಡಿಸಿದ್ದಾರೆ.

ಬೋನಿಗೆ ಬಿದ್ದ ಚಿರತೆ

ಮಲ್ಕುಂಡಿ, ಡಿ.23– ನಂಜನಗೂಡು ತಾಲೂಕಿನ ಕಂದೇಗಾಲ ಗ್ರಾಮದ ಬೋರೇಗೌಡ ಎಂಬುವರ ಜಮೀನಿನಲ್ಲಿ 2 ವರ್ಷದ ಗಂಡು ಚಿರತೆ ಬೋನಿಗೆ ಬಿದ್ದಿದೆ. ಹಲವು ದಿನಗಳಿಂದ ರೈತರ ಸಾಕುಪ್ರಾಣಿಗಳನ್ನು ಕೊಂದು ಹಾಕುತ್ತಿದ್ದ ಹಿನ್ನೆಲೆಯಲ್ಲಿ ಚಿರತೆಯನ್ನು ಹಿಡಿಯುವಂತೆ ಗ್ರಾಮಸ್ಥರು ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ ಬೋನು ಇಡಲಾಗಿತ್ತು. ಶುಕ್ರವಾರ ರಾತ್ರಿ ಬೋನಿಗೆ ಚಿರತೆ ಸೆರೆ ಸಿಕ್ಕಿದೆ. ಇದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಚಿರತೆಯನ್ನು ಕಾಡಿನತ್ತ ಕೊಂಡೊಯ್ದುಬಿಟ್ಟರು ಎನ್ನಲಾಗಿದೆ.

ಹುಲಿ ದಾಳಿಗೆ ಹಸು ಬಲಿ

ಹುಣಸೂರು, ಡಿ.23– ಹಾಡಹಗಲೇ ಹುಲಿ ದಾಳಿಗೆ ಹಸುವೊಂದು ಬಲಿಯಾಗಿರುವ ಘಟನೆ ಸಮೀಪದ ಕಾಡಂಚಿನ ಗ್ರಾಮ ಚಂದನಗಿರಿಯಲ್ಲಿ ಶನಿವಾರ ಸಂಭವಿಸಿದೆ.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಂಚಿನ ಹನಗೂಡು ಹೋಬಳಿ ನೇರಳಕುಪ್ಪೆ ಗ್ರಾಮದ ಮುದ್ದೇಗೌಡರಿಗೆ ಸೇರಿದ ಹಸು ಹುಲಿ ದಾಳಿಗೆ ಬಲಿಯಾಗಿದ್ದು, ಇವರು ಸಮೀಪದ ಚಂದನಗಿರಿಯ ಭೂಪತಿಯವರ ಜಮೀನಿನಲ್ಲಿ ಶನಿವಾರ ತಮ್ಮ ಜಾನುವಾರುಗಳನ್ನು ಮೇಯಿಸುತ್ತಿದ್ದ ವೇಳೆ ಏಕಾಏಕಿ ಹುಲಿ ದಾಳಿ ನಡೆಸಿ ಹಸುವನ್ನು ಕೊಂದು ಹಾಕಿದೆ. ಹುಲಿ ಕಂಡು ಇತರೆ ಜಾನುವಾರುಗಳು ಬೆದರಿ ದಿಕ್ಕಾಪಾಲಾಗಿ ಓಡಿ ತಮ್ಮ ಜೀವ ರಕ್ಷಿಸಿಕೊಂಡಿವೆ.

ಸ್ಥಳಕ್ಕೆ ಡಿಆರ್‌ಎಫ್‌ಒಗಳಾದ ವೀರಭದ್ರಯ್ಯ, ಅಕ್ಷಯ್ ಕುಮಾರ್, ಅರಣ್ಯ ರಕ್ಷಕ ಕೃಷ್ಣಮಾದರ್ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆದಿದ್ದಾರೆ.

ಹುಲಿ ಸೆರೆಗೆ ಆಗ್ರಹ: ಕಳೆದ ಆರು ತಿಂಗಳಿನಿಂದ ಈ ಭಾಗದಲ್ಲಿ ಸಾಕುನಾಯಿ, ಆಡು, ಕುರಿ, ಕೋಳಿ ಸೇರಿದಂತೆ ಹತ್ತಾರು ಜಾನುವಾರುಗಳನ್ನು ಹುಲಿ ಕೊಂದು ಹಾಕಿದೆ. ಜೊತೆಗೆ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದು ಜನರಲ್ಲಿ ಭೀತಿ ಹುಟ್ಟಿಸಿದೆ. ಎರಡು ವಾರದ ಹಿಂದೆ ಶೆಟ್ಟಹಳ್ಳಿ ಅರಣ್ಯ ಪ್ರದೇಶದಂಚಿನ ನೇಗತ್ತೂರಿನಲ್ಲಿಯೂ ಹಾಡಹಗಲೇ ಹುಲಿದಾಳಿ ನಡೆಸಿದ್ದು, ಹುಲಿ ಸೆರೆಗೆ ವಾರಗಳ ಕಾಲ ಆನೆಗಳ ಮೂಲಕ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ ಹುಲಿಯನ್ನು ಸೆರೆ ಹಿಡಿದಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.

ಈಗ ಮತ್ತೆ ಅದೇ ಘಟನೆ ಸಂಭವಿಸಿದೆ. ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ಸೆರೆಗೆ ಮುಂದಾಗಬೇಕು ಹಾಗೂ ನೊಂದ ರೈತ ಮುದ್ದೇಗೌರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಮೈಸೂರು ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ನೇರಳಕುಪ್ಪೆ ಮಹದೇವ್ ಆಗ್ರಹಿಸಿದ್ದಾರೆ.

ಬಗರ್ ಹುಕುಂ ರೈತರಿಗೆ ದಕ್ಕದ ಭೂಮಿ ಹಕ್ಕು



ಹೆಚ್.ಡಿ. ಕೋಟೆ, ಡಿ.23– ಹೆಚ್.ಡಿ. ಕೋಟೆ, ಸರಗೂರು ತಾಲೂಕುಗಳಲ್ಲಿ ಬಗರ್ ಹುಕುಂ ಭೂಮಿಯನ್ನು ರೈತರು ತಲೆತಲಾಂತರಗಳಿಂದ ಉಳುಮೆ ಮಾಡುತ್ತಾ ಬಂದಿದ್ದು, ಬಗರ್‌ಹುಕುಂ ಸಾಗುವಳಿಗೆ ಅರ್ಜಿ ನಿರಂತರವಾಗಿ ಸಲ್ಲಿಸುತ್ತಲೇ ಬರುತ್ತಿದ್ದರೂ ಸಹ ಇನ್ನೂ ಬಹುಪಾಲು ಮಂದಿ ರೈತರಿಗೆ ಭೂಮಿಯ ಹಕ್ಕು ದೊರೆತ್ತಿಲ್ಲ ಎಂದು ಜೀವಿಕ ಬಸವರಾಜು ಆರೋಪಿಸಿದ್ದಾರೆ.

ಪಟ್ಟಣದ ತಾಲೂಕು ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಜಿ ಸಲ್ಲಿಸಿರುವ ಪ್ರತಿಯೊಬ್ಬ ರೈತರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಪ್ರತಿಭೆ ಸಂಸ್ಥೆಯ ವತಿಯಿಂದ ನಾವೆಲ್ಲರೂ ಭೂ ಹಕ್ಕುದಾರರ ಸಮಿತಿಯನ್ನು ರಚಿಸಿಕೊಂಡು ಸರ್ಕಾರದ ಮೇಲೆ ಒತ್ತಡ ಹೇರುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರು.

ಬಡ ರೈತರು ಕಚೇರಿಗೆ ತಿರುಗಿ ತಿರುಗಿ ಮಧ್ಯವರ್ತಿಗಳ ಹಾವಳಿಗೆ ಸಿಲುಕಿ ಬೇಸತ್ತು ಹೋಗಿದ್ದಾರೆ. ಪ್ರಸ್ತುತ ದಿನಮಾನಗಳಲ್ಲಿ ಅಂದಾಜು ನಮೂನೆ 50/53 ರಲ್ಲಿ 2000 ಹಾಗೂ ನಮೂನೆ 57 ರಲ್ಲಿ 9000 ಕ್ಕೂ ಅಧಿಕ ಅರ್ಜಿಗಳು ಇಲ್ಲಿಯವರೆಗೆ ವಿಲೇವಾರಿ ಆಗದೇ ಇರುವುದು ಕಂಡು ಬಂದಿದ್ದು, ಈ ಸಂಬಂಧ ಕಂದಾಯ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಆಪಾದಿಸಿದರು.

ರೈತರು ಉಳುಮೆ ಮಾಡುತ್ತಿರುವ ಭೂಮಿ, ಕಂದಾಯ ಭೂಮಿ, ಅರಣ್ಯ ಭೂಮಿ, ಖರಾಬು, ಸರ್ಕಾರಿ ಗೋಮಾಳ, ಸರ್ಕಾರಿ ಬೀಳು ಇತ್ಯಾದಿಯಾಗಿ ಕೆಲವು ಆರ್‌ಟಿಸಿಯಲ್ಲಿ ಇತ್ತೀಚೆಗೆ ನಮೂದಾಗಿರುವುದು ಕಂಡುಬಂದಿದ್ದು, ಮೂಲ ಕಡತಗಳಲ್ಲಿ ಇಲ್ಲದಿರುವುದನ್ನು ಸಹ ಗಮನಿಸಬಹುದಾಗಿದೆ. ಈ ನಿಟ್ಟಿನಲ್ಲಿ ಭೂ ಹಕ್ಕು ಕಾಯಿದೆ ಅಧಿನಿಯಮ 1964 ರ ಅನ್ವಯ ಸರ್ಕಾರ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಖುದ್ದಾಗಿ ಪರಿಶೀಲಿಸಿ ಅರ್ಹ ಫಲಾನುಭವಿ ರೈತರಿಗೆ ಭೂಮಿಯ ಹಕ್ಕನ್ನು ನೀಡಿ ಭೂಮಿಯನ್ನೇ ನಂಬಿ ಬದುಕುತ್ತಿರುವ ರೈತರು ಮತ್ತು ಅವಲಂಬಿತರ ಬಾಳಿನ ಬೆಳಕಾಗಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾಳೇಗೌಡ, ಶೈಲಾ ಸುಧಾಮಣಿ, ಶಿವಲಿಂಗಯ್ಯ, ಪಾಲಾಕ್ಷ ಆರಾಧ್ಯ, ಶಿವರಾಜು, ಗೋವಿಂದರಾಜು, ಸುಶೀಲಾ, ಮಾರ್ಸಾಲಿನ್ ಹಾಜರಿದ್ದರು.

ದೇಶ ಕಾಯೋ ಯೋಧ, ಅನ್ನ ನೀಡುವ ರೈತರನ್ನು ಗೌರವಿಸಿ

ರಾಷ್ಟ್ರೀಯ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಕರೆ

ನಂಜನಗೂಡು, ಡಿ.23– ನಾವು ತಿನ್ನೋ ಅನ್ನದ ಹಿಂದೆ ರೈತರ ಶ್ರಮದ ದುಡಿಮೆಯಿದೆ. ದೇಶ ಕಾಯೋ ಯೋಧ, ಅನ್ನ ನೀಡೋ ರೈತರನ್ನು ಗೌರವಿಸುವುದು ನಮ್ಮ ಕರ್ತವ್ಯ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.



ನಗರದ ಅಂಬೇಡ್ಕರ್ ಭವನದಲ್ಲಿ ರಾಷ್ಟ್ರೀಯ ರೈತ ದಿನಾಚರಣೆಯ ಅಂಗವಾಗಿ ತಾಲೂಕು ಕಲ್ಯಾಣ ರೈತ ಸಂಘ ಆಯೋಜಿಸಿದ್ದ ಮಣ್ಣಿಗೆ ಮರು ಜೀವ, ಮಣ್ಣು ರಕ್ಷಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಪ್ರಧಾನವಾದ ದೇಶದ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಿರುವ, ಆಹಾರ ಭದ್ರತೆ ಒದಗಿಸಿರುವ ರೈತರ ಪರಿಶ್ರಮವನ್ನು ಆಹಾರ ಸ್ವೀಕರಿಸುವ ಪ್ರತಿಯೊಬ್ಬರು ಕೃತಜ್ಞತೆಯಿಂದ ಸ್ಮರಿಸಬೇಕು. ನನ್ನ ತಂದೆ ಮಾಜಿ ಸಂಸದ ಆರ್.ಧ್ರುವನಾರಾಯಣ ಕೃಷಿ ಪದವಿ ಪಡೆದವರು, ಓದಿನ ನಡುವೆ ಬಿಡುವಿನಲ್ಲಿ ನಮ್ಮ ಗ್ರಾಮದ ಕೃಷಿ ಭೂಮಿಯಲ್ಲಿ ರೈತನಾಗಿ ದುಡಿದಿರುವುದರಿಂದ ರೈತರ ಕಷ್ಟದ ಅರಿವಿದೆ, ದೇಶದ ಹೆಮ್ಮೆಯ ಪ್ರತೀಕ ನಮ್ಮ ರೈತ ಬಾಂಧವರು ಎಂದು ಹೇಳಿದರು.

ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ ಮಾತನಾಡಿ, ಪ್ರಪಂಚದಲ್ಲಿ ಕಷ್ಟದಲ್ಲಿರುವವರು ರೈತರು ಮಾತ್ರ, ಅದರಲ್ಲೂ ನಮ್ಮ ದೇಶದಲ್ಲಿ ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗುವುದಿಲ್ಲ, ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ ಪಡೆಯಲು ಸರತಿಯಲ್ಲಿ ನಿಂತು ಹೋರಾಟ ಮಾಡಿ ಪಡೆಯಬೇಕಾದ ಸ್ಥಿತಿ ಇದೆ. ಅತಿಯಾದ ರಾಸಾಯನಿಕಗಳ ಬಳಕೆಯಿಂದ ಭೂಮಿಯ ಫಲವತ್ತತೆ ಹಾಳಾಗಿದೆ ಎಂದರು.

ಭೂಮಿ ತಾಯಿಯನ್ನು ರಕ್ಷಿಸದಿದ್ದರೆ ಮಣ್ಣಿನ ಆರೋಗ್ಯ ಕಾಪಾಡುವತ್ತ ಪ್ರಯತ್ನಗಳು ನಡೆಯದಿದ್ದರೆ, ದೇಶ ಶೋಚನೀಯ ಪರಿಸ್ಥಿತಿ ಅನುಭವಿಸಬೇಕಾಗುತ್ತದೆ. ರಾಸಾಯನಿಕಗಳಿಗೆ ಹೊರತಾದ ಕೃಷಿಯನ್ನು ಅವಲಂಬಿಸಬೇಕಾದ ಅನಿವಾರ್ಯತೆ ಇದೆ, ಮಣ್ಣಿಗೆ ಮರು ಜೀವ ನೀಡಿ ಭೂಮಿಯ ಸಂಪತ್ತನ್ನು ಕಾಪಾಡೋಣ ಎಂದು ಹೇಳಿದರು.

ಬಿಜೆಪಿ ಮುಖಂಡ ಎಸ್.ಮಹದೇವಯ್ಯ ಮಾತನಾಡಿ, ರೈತರಿಗೆ ಅಗತ್ಯವಾದ ಬಿತ್ತನೆ ಬೀಜ, ಗೊಬ್ಬರಗಳನ್ನು ಸರಿಯಾದ ಸಮಯಕ್ಕೆ ಒದಗಿಸಬೇಕು. ರಾಜ್ಯ ಸರ್ಕಾರ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಕೃಷಿ ಸಾಲ ನೀಡಬೇಕು, ಬ್ಯಾಂಕುಗಳು ರೈತರಿಗೆ ಹೆಚ್ಚಿನ ನೆರವು ನೀಡ ಬೇಕು, ಸರ್ಕಾರಗಳು ರೈತರ ನೆರವಿಗೆ ನಿಂತಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು. ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕರಿಗೆ ಉಚಿತ ಕಣ್ಣಿನ ಹಾಗೂ ಆರೋಗ್ಯ ತಪಾಸಣೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರಾದ ಮಾಜಿ ಶಾಸಕ ಕೊಳ್ಳೇಗಾಲ ನಂಜುಂಡಸ್ವಾಮಿ, ಕಳಲೆ ಕೇಶವಮೂರ್ತಿ, ಕಲ್ಯಾಣ ರೈತ ಸಂಘದ ಗೌರವಾಧ್ಯಕ್ಷ ಹೇಮಂತ್ ಗೌಡ, ನೇರಳೆ ಗ್ರಾಪಂ ಅಧ್ಯಕ್ಷ ಗಿರೀಶ್, ಜಗದೀಶ್, ತೊರೆಮಾವು ಗಿರೀಶ್, ಸೌಭಾಗ್ಯ, ಚಂದನ್ ಗೌಡ, ಸಂದೇಶ್‌ಸ್ವಾಂಡಿ ಉಪಸ್ಥಿತರಿದ್ದರು.

ಬರವಣಿಗೆ ಕನ್ನಡದಲ್ಲಿದ್ದರೆ ಹೆಚ್ಚು ಜನರ ತಲುಪಲು ಸಾಧ್ಯ

- ಸಂಕೇತಿ ಬರಹಗಾರರಿಗೆ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಸಲಹೆ
- ಮೈಸೂರಲ್ಲಿ ಸಂಕೇತಿ ಬರಹಗಾರರ ರಾಜ್ಯಮಟ್ಟದ ಪ್ರಥಮ ಸಾಹಿತ್ಯ ಸಮ್ಮೇಳನ



ವಿಶ್ವ ಸಂಕೇತಿ ಭಾರತಿ ಟ್ರಸ್ಟ್ ವತಿಯಿಂದ ಮೈಸೂರಿನ ನಾಚಾರಮ್ಮ ಭವನದಲ್ಲಿ ಆಯೋಜಿಸಿರುವ ಎರಡು ದಿನಗಳ 'ಸಂಕೇತಿ ಬರಹಗಾರರ ರಾಜ್ಯಮಟ್ಟದ ಪ್ರಥಮ ಸಾಹಿತ್ಯ ಸಮ್ಮೇಳನ'ವನ್ನು ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಉದ್ಘಾಟಿಸಿದರು.

ಮೈಸೂರು,ಡಿ.23(ಎಸ್‌ಬಿಡಿ)– ಬರವಣಿಗೆ, ಸಮಾಜದ ಭಾಷೆ ಕನ್ನಡದಲ್ಲಿದ್ದರೆ ಹೆಚ್ಚು ಜನರನ್ನು ತಲುಪಲು ಸಾಧ್ಯ ಎಂದು ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ, ಸಂಕೇತಿ ಬರಹಗಾರರಿಗೆ ಸಲಹೆ ನೀಡಿದರು.

ಮತ್ತೂರಿನ ವಿಶ್ವ ಸಂಕೇತಿ ಭಾರತಿ ಟ್ರಸ್ಟ್ ವತಿಯಿಂದ ಮೈಸೂರಿನ ಜಯನಗರದಲ್ಲಿರುವ ನಾಚಾರಮ್ಮ ಭವನದಲ್ಲಿ ಆಯೋಜಿಸಿರುವ ಎರಡು ದಿನಗಳ 'ಸಂಕೇತಿ ಬರಹಗಾರರ ರಾಜ್ಯಮಟ್ಟದ ಪ್ರಥಮ ಸಾಹಿತ್ಯ ಸಮ್ಮೇಳನ'ವನ್ನು ಶನಿವಾರ ಉದ್ಘಾಟಿಸಿ, ಅವರು ಮಾತನಾಡಿದರು.

ಪರಸ್ಪರ ಸಂಕೇತಿ ಭಾಷೆಯಲ್ಲಿ ಮಾತನಾಡಬಹುದು. ಆದರೆ ಬರವಣಿಗೆಗೆ ಕನ್ನಡವೇ ಬೇಕಾಗುತ್ತದೆ. ಬರೆಯುವಾಗ ಇಡೀ ಸಮಾಜದ ಭಾಷೆಯನ್ನು ಬಳಸಿದರೆ ಮಾತ್ರ ಹೆಚ್ಚು ಜನರನ್ನು ತಲುಪುವುದರೊಂದಿಗೆ ಗುರುತಿಸಿಕೊಳ್ಳಲು ಸಾಧ್ಯ. ಐಯ್ಯಂಗಾರ್‌ಗಳ ಮನೆಯಲ್ಲಿ ತಮಿಳು ಮಾತನಾಡುತ್ತಾರೆ. ಆದರೆ ಅವರಲ್ಲಿ ಹಲವರು ಕನ್ನಡದ ಮೂಲಕವೇ ಕಲೆ, ಸಾಹಿತ್ಯದಲ್ಲಿ ಸಾಧಿಸಿದ್ದಾರೆ. ವ್ಯಾಕರಣಾತ್ಮಕ ಭಾಷೆಗಿಂತ ನಮ್ಮ ಭಾಗದ ಆಡುಮಾತಿನ ಕನ್ನಡ ಹೆಚ್ಚು ಗಟ್ಟಿಯಾಗಿದೆ. ಸಂಕೇತಿ ಬ್ರಾಹ್ಮಣರಿಗೆ ಆಡುಭಾಷೆ ಕನ್ನಡ ತುಂಬಾ ಚೆನ್ನಾಗಿ ತಿಳಿದಿರುವುದರಿಂದ ಸಾಹಿತ್ಯ ಕೃಷಿಗೆ ಅನುಕೂಲವಾಗಲಿದೆ. ಸಂಕೇತಿ ಬರಹಗಾರರಾದ ಎಂ.ಎಸ್.ವಿಜಯಾ ಹಾಗೂ ಹರನ್ ದಂಪತಿ ಕನ್ನಡದಲ್ಲಿ ತುಂಬಾ ಚೆನ್ನಾಗಿ ಬರೆಯುತ್ತಾರೆ. ನನ್ನ ಬಗ್ಗೆಯೇ ನಾಲ್ಕೈದು ಪುಸ್ತಕ ಬರೆದಿದ್ದಾರೆ ಎಂದರು.

ಸಂಕೇತಿಗಳು ಮಾದರಿ: ವಿದ್ಯಾರ್ಥಿಯಾಗಿದ್ದಾಗ ನಾನು ಲಕ್ಷ್ಮೀಪುರಂನ ಹೊಯ್ಸಳ ಕರ್ನಾಟಕ ಹಾಸ್ಟೆಲ್‌ನಲ್ಲಿದ್ದೆ. ಎದುರು ಮನೆಯಲ್ಲಿದ್ದ ಡಾ.ಕೇಶವರಾವ್ ಅವರ ಮನೆಯಲ್ಲಿ ಉಪನಯನ ನಡೆದಾಗ ಹಾಸ್ಟೆಲ್‌ನ ಎಲ್ಲಾ ವಿದ್ಯಾರ್ಥಿಗಳನ್ನೂ ಊಟಕ್ಕೆ ಕರೆದಿದ್ದರು. ಅವರು ಉಣಬಡಿಸಿದ ರೀತಿ ನೋಡಿ, ನಾವೆಲ್ಲಾ ಸಂಕೇತಿಗಳೇ ಉತ್ತಮ ಬ್ರಾಹ್ಮಣರು ಎಂದು ಸರ್ಟಿಫಿಕೇಟ್ ನೀಡಿದೆವು. ಅಂದರೆ ಸಂಕೇತಿಗಳು ಯಾವುದೇ ಕೆಲಸವನ್ನು ಗಟ್ಟಿಯಾಗಿ ನೆರವೇರಿಸುತ್ತಾರೆ. ಮೂಲತಃ ಇವರು ಸರ್ಕಾರಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಯಾವುದಕ್ಕೂ ಸರ್ಕಾರವನ್ನು ಅವಲಂಬಿಸುತ್ತಿರಲಿಲ್ಲ. ಪದವಿ ಪಡೆದರೂ ಉದ್ಯೋಗವಿಲ್ಲ ಎಂದು ಇತರೆ ಬ್ರಾಹ್ಮಣರಂತೆ ಯೋಚಿಸುತ್ತಿರಲಿಲ್ಲ. ಸಂಕೇತಿಗಳು ಏನೇ ಆದರೂ ಬದುಕುವ ಆತ್ಮವಿಶ್ವಾಸಿಗಳು. ಕೃಷಿಯನ್ನು ನೆಚ್ಚಿ, ವೀಳ್ಯೆದೆಲೆ ಬೆಳೆದು, ಪಿಂಡಿಯನ್ನು ಮೈಲುಗಟ್ಟಲೆ ಹೊತ್ತು ತಂದು ಬದುಕು ಕಟ್ಟಿದರು. ನೇಗಿಲಿನಲ್ಲಿ ಉಳುಮೆ ಮಾಡುವಾಗ ಮಕ್ಕಳಿಗೆ ವೇದಪಾಠವನ್ನೂ ಮಾಡಿದರು. ಇತ್ತೀಚೆಗೆ ಪರಿಸ್ಥಿತಿ ಬದಲಾಗಿ, ವಿದ್ಯಾಭ್ಯಾಸ ಮಾಡಿ ವಿವಿಧ ಹುದ್ದೆಗಳಲ್ಲಿರಬಹುದು. ಆದರೆ ಸಂಕೇತಿಗಳು ಬ್ರಾಹ್ಮಣ ಸಮುದಾಯಕ್ಕೆ ಮಾದರಿ ಎಂದು ಅಭಿಪ್ರಾಯಿಸಿದರು.

ಸಂಕೇತಿತನ ಡೈಲ್ಯೂಟ್ ಆಗಬಹುದು: ವಿದ್ವಾಂಸರಾಗಿದ್ದ ಮತ್ತೂರು ಕೃಷ್ಣಮೂರ್ತಿಯವರು ಕನ್ನಡದಲ್ಲೇ ಬರೆಯುತ್ತಿದ್ದರು, ಉಪನ್ಯಾಸ ನೀಡುತ್ತಿದ್ದರು. ಇಬ್ಬರು ಸಂಕೇತಿಗಳಿದ್ದಾಗ ಪರಸ್ಪರ ಸಂಕೇತಿ ಭಾಷೆಯಲ್ಲೇ ಮಾತನಾಡಬೇಕು. ಇಲ್ಲವಾದರೆ ಸಂಕೇತಿ ಭಾಷೆ ಹಾಗೂ ಸಂಕೇತಿತನ ಉಳಿಯುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ ಈಗಿನ ಪರಿಸ್ಥಿತಿಯಲ್ಲಿ ನೌಕರಿಯಲ್ಲಿರುವ ಯುವಕ–ಯುವತಿ ತಮಗೆ ಸಮನಾದವರನ್ನೇ ವಿವಾಹವಾಗಲು ಇಚ್ಛಿಸುತ್ತಾರೆ. ಆದ್ದರಿಂದ ಉಪಜಾತಿಗಳ ನಡುವೆ ವಿವಾಹ ನೆರವೇರುವುದರಿಂದ ಸಂಕೇತಿತನ ಸಾರ ಗುಂದಬಹುದು(Dilute). ಅದಕ್ಕೂ ಸಿದ್ಧರಾಗಿರಬೇಕು ಎಂದು ಹೇಳಿದರು.

ಭಾಷೆ ಸಂಮೃದ್ಧವಾಗಲಿ: ಹಿರಿಯ ವಿದ್ವಾಂಸರಾದ ಡಾ.ಪ್ರಧಾನ ಗುರುದತ್ತ ಅವರು ಮಾತನಾಡಿ, ದ್ರಾವಿಡ ಭಾಷೆಗಳಲ್ಲಿ ಸಂಕೇತಿ ಭಾಷೆಯೂ ಪ್ರಮುಖವಾದುದು. ಇದಕ್ಕೆ ಲಿಪಿ ಇಲ್ಲ. ಭಾರತೀಯ ಭಾಷೆಗಳಲ್ಲೇ ಅತ್ಯಂತ ಸಂಮೃದ್ಧವಾದ ಕನ್ನಡ ಭಾಷೆ ಮೂಲಕ ಸಂಕೇತಿ ಭಾಷೆಯೂ ಸಂಮೃದ್ಧವಾಗಲಿ. ಈ ನಿಟ್ಟಿನಲ್ಲಿ ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ಭಾಷಾಂತರವಾಗುತ್ತಿವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಂಕೇತಿ ಸಮುದಾಯದವರು ಅವಿಸ್ಮರಣೀಯ ಸೇವೆ ಸಲ್ಲಿಸುತ್ತಿದ್ದಾರೆ. ಸಂಗೀತ, ನಾಟ್ಯ, ಲಲಿತಕಲೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಅತ್ಯದ್ಭುತ ಸೇವೆ ಸಲ್ಲಿಸುತ್ತಿದ್ದಾರೆ. ಇದು ಕರ್ನಾಟಕದ ಹೆಮ್ಮೆಯ ಸಮುದಾಯ ಎಂದು ಬಣ್ಣಿಸಿದರು.

> ಸಂಕೇತಿ ಬರಹಗಾರರ ರಾಜ್ಯಮಟ್ಟದ ಪ್ರಥಮ ಸಾಹಿತ್ಯ ಸಮ್ಮೇಳನದಿಂದ ನಮ್ಮ ಸಾಹಿತ್ಯ ಚಟುವಟಿಕೆಗೆ ವೇಗೋತ್ಕರ್ಷ ಉಂಟಾಗಬೇಕು. ನಮ್ಮ ಭಾವಕೋಶ, ಜ್ಞಾನಕೋಶಕ್ಕೆ ಸಾಹಿತ್ಯವೂ ಆಹಾರವಿದ್ದಂತೆ. ಸಾಹಿತ್ಯದ ಬೆಳವಣಿಗೆಯಿಂದ ಹೆಚ್ಚು ಮೌಲ್ಯಯುತ ಸಮಾಜ ನಿರ್ಮಾಣ ಸಾಧ್ಯ.
> –ಡಾ.ಕೆ.ಅನಂತರಾಮು, ಸಮ್ಮೇಳನದ ಸರ್ವಾಧ್ಯಕ್ಷರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿದರು. ಮೈಸೂರು ಸಂಕೇತಿ ಮಹಿಳಾ ಸಂಘದವರು 'ಸಂಕೇತಿಗ ನಂಬ' ಸಂಕೇತಿ ಗೀತೆ ಪ್ರಸ್ತುತಪಡಿಸಿದರು. ವಿಶ್ವ ಸಂಕೇತಿ ಭಾರತಿ ಟ್ರಸ್ಟ್‌ನ ಅಧ್ಯಕ್ಷ ಎಂ.ಬಿ.ಭಾನುಪ್ರಕಾಶ್, ಕೌಶಿಕ ಸಂಕೇತಿ ಸಂಘದ ಅಧ್ಯಕ್ಷ ಹೆಚ್.ಎಸ್.ಅನಂತ ಪದ್ಮನಾಭ, ಬೆಟ್ಟದಪುರ ಸಂಕೇತಿ ಸಂಘದ ಅಧ್ಯಕ್ಷೆ ಎಸ್.ಎನ್. ಅನ್ನಪೂರ್ಣ, ಸಂಚಲನಾ ಸಮಿತಿ ಕೋಶಾಧ್ಯಕ್ಷ ಪ್ರೊ.ಆರ್.ಎನ್.ಪದ್ಮನಾಭ, ಸಂಚಾಲಕರಾದ ಸರೋಜ ಹಿರಿಯಣ್ಣ ಹೊಸಹಳ್ಳಿ ಎಸ್.ನಾಗರಾಜ, ಸಂಸ್ಕೃತಿ ಸುಬ್ರಹ್ಮಣ್ಯ, ಪಿ.ಎಸ್‌ಎನ್ ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಸಮ್ಮೇಳನದ ಸರ್ವಾಧ್ಯಕ್ಷರನ್ನು ಸಾರೋಟಿನಲ್ಲಿ ಮೆರವಣಿಗೆಯನ್ನು ಕರೆತಂದು ಮಂಗಳವಾದ್ಯ ಸಹಿತ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಡಾ.ಎಸ್.ಎಲ್.ಭೈರಪ್ಪನವರು 'ಪುಸ್ತಕ ಪ್ರದರ್ಶನ'ವನ್ನು ಉದ್ಘಾಟಿಸಿದರು. ಭಾನುವಾರ ಹಲವು ವಿಚಾರಗೋಷ್ಠಿಗಳು ನಡೆಯಲಿವೆ.

ಕಾಂಗ್ರೆಸ್ ಉಸ್ತುವಾರಿಗಳ ಬದಲಾವಣೆ: ಉ.ಪ್ರದೇಶ ಉಸ್ತುವಾರಿ ಪ್ರಿಯಾಂಕಾ ಗಾಂಧಿ ಔಟ್, ಸಚಿನ್ ಪೈಲಟ್‌ಗೆ ಹೊಸ ಜವಾಬ್ದಾರಿ

ನವದೆಹಲಿ: ಪಂಚ ರಾಜ್ಯಗಳ ವಿಧಾನ ಸಭಾ ಚುನಾವಣೆಯ ತೀವ್ರ ಹಿನ್ನಡೆ ಬೆನ್ನಲ್ಲೇ 2024ರ ನಿರ್ಣಾಯಕ ಲೋಕಸಭಾ ಚುನಾವಣೆಗೆ ಮುಂಚಿತವಾಗಿ ಕಾಂಗ್ರೆಸ್ ಪಕ್ಷ ತನ್ನ ಸಂಘಟನೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಿದೆ.

ದೇಶದ ವಿವಿಧ ರಾಜ್ಯಗಳ ಕಾಂಗ್ರೆಸ್ ಉಸ್ತುವಾರಿಗಳನ್ನು ಬದಲಾವಣೆ ಮಾಡಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಕ್ಷಣದಿಂದ ಜಾರಿಗೆ ಬರುವಂತೆ ಸಾಂಸ್ಥಿಕ ಜವಾಬ್ದಾರಿಗಳ ಬದಲಾವಣೆ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆ ಪ್ರಕಾರ, ಮುಕುಲ್ ವಾಸ್ನಿಕ್ ಅವರನ್ನು ಗುಜರಾತ್‌ನ ಉಸ್ತುವಾರಿಯಾಗಿ ನೇಮಕ ಮಾಡಲಾಗಿದೆ. ಜಿತೇಂದ್ರ ಸಿಂಗ್‌ರನ್ನು ಅಸ್ಸಾಂ ಮತ್ತು ಮಧ್ಯಪ್ರದೇಶಕ್ಕೆ ನಿಯೋಜಿಸಲಾಗಿದೆ.

ಪ್ರಮುಖವಾಗಿ ಹೊಸ ರಚನೆಯಲ್ಲಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಯುಪಿ ಕಾಂಗ್ರೆಸ್ ಉಸ್ತುವಾರಿ ಹುದ್ದೆಯಿಂದ ಮುಕ್ತಗೊಳಿಸಲಾಗಿದೆ. ಅವರಿಗೆ ಯಾವುದೇ ಹೊಣೆಗಾರಿಕೆ ಕೊಟ್ಟಿಲ್ಲ ಇದಲ್ಲದೆ, ಸಚಿನ್ ಪೈಲಟ್ ಅವರನ್ನು ಛತ್ತೀಸ್‌ಗಢದ ಕಾಂಗ್ರೆಸ್ ಉಸ್ತುವಾರಿಯಾಗಿ ಮತ್ತು ರಮೇಶ್ ಚೆನ್ನಿಥಾಲಾ ಅವರನ್ನು ಮಹಾರಾಷ್ಟ್ರದ ಎಐಸಿಸಿ ಉಸ್ತುವಾರಿಯಾಗಿ ಕಾಂಗ್ರೆಸ್ ನೇಮಿಸಿದೆ.



ಪ್ರಿಯಾಂಕ ಗಾಂಧಿ ಸಚಿನ್ ಪೈಲಟ್

ಕರ್ನಾಟಕಕ್ಕೆ ಸುರ್ಜೇವಾಲಾ: ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ. ದೀಪಕ್ ಬಾಬರಿಯಾ ದೆಹಲಿ ಮತ್ತು ಹರಿಯಾಣವನ್ನು ನೋಡಿಕೊಳ್ಳಲಿದ್ದಾರೆ. ಉತ್ತರ ಪ್ರದೇಶಕ್ಕೆ ಪಕ್ಷವು ಅವಿನಾಶ್ ಪಾಂಡೆ ಅವರನ್ನು ಉಸ್ತುವಾರಿಯಾಗಿ ನೇಮಿಸಿದೆ. ಉತ್ತರಾಖಂಡದ ಉಸ್ತುವಾರಿಯಾಗಿ ಕುಮಾರಿ ಸೆಲ್ಜಾ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ ಉಸ್ತುವಾರಿಯಾಗಿ ಜಿಎ ಮಿರ್ ಅವರನ್ನು ನೇಮಿಸಲಾಗಿದೆ. ದೀಪಾದಾಸ್ ಮುನ್ಷಿ ಅವರನ್ನು ಕೇರಳ, ಲಕ್ಷದ್ವೀಪ ಮತ್ತು ತೆಲಂಗಾಣದ ಉಸ್ತುವಾರಿಯಾಗಿ ನೇಮಿಸಲಾಗಿದೆ.

ಹಿರಿಯ ನಾಯಕ ಜೈರಾಮ್ ರಮೇಶ್ ಸಂವಹನ ಉಸ್ತುವಾರಿ ವಹಿಸಲಿದ್ದು, ಕೆ.ಸಿ.ವೇಣುಗೋಪಾಲ್ ಸಂಘಟನೆಗಳ ನೇತೃತ್ವ ವಹಿಸಲಿದ್ದಾರೆ. ಗುರ್ಗೀಪ್ ಸಿಂಗ್ ಸಪ್ಪಲ್ ಆಡಳಿತವನ್ನು ನೋಡಿಕೊಳ್ಳಲಿದ್ದಾರೆ. ರಮೇಶ್ ಚೆನ್ನಿತ್ತಲರನ್ನು ಮಹಾರಾಷ್ಟ್ರ ಉಸ್ತುವಾರಿಯಾಗಿ, ಮೋಹನ್ ಪ್ರಕಾಶ್‌ರನ್ನು ಬಿಹಾರಕ್ಕೆ ಮತ್ತು ಡಾ.ಚೆಲ್ಲಕುಮಾರ್‌ರನ್ನು ಮೇಘಾಲಯ, ಮಿಜೋರಾಂ ಮತ್ತು ಅರುಣಾಚಲ ಪ್ರದೇಶಕ್ಕೆ ಪಕ್ಷ ನೇಮಿಸಿದೆ.

ಅಂತೆಯೇ ಡಾ.ಅಜಯ್‌ಕುಮಾರ್ ಅವರು ಒಡಿಶಾ, ತಮಿಳುನಾಡು ಮತ್ತು ಪುದುಚೇರಿಯ ಉಸ್ತುವಾರಿ ವಹಿಸಲಿದ್ದಾರೆ. ಜಮ್ಮು ಮತ್ತು ಕಾಶ್ಮೀರವನ್ನು ಭರತ್ ಸಿಂಗ್ ಸೋಲಂಕಿ, ಹಿಮಾಚಲ ಪ್ರದೇಶ ಮತ್ತು ಚಂಡೀಗಢಕ್ಕೆ ರಾಜೀವ್ ಶುಕ್ಲಾ, ರಾಜಸ್ಥಾನದ ಉಸ್ತುವಾರಿಯನ್ನು ಸುಖ್ವಿಂದರ್ ಸಿಂಗ್ ರಾಂಧವ, ಪಂಜಾಬ್‌ಗೆ ದೇವೇಂದರ್ ಯಾದವ್, ಗೋವಾಕ್ಕೆ ಮಾಣಿಕ್ ರಾವ್ ಠಾಕ್ರೆ, ದಮನ್ ಮತ್ತು ದಿಯು ಮತ್ತು ದಾದರ್ ಮತ್ತು ನಗರ್ ಹವೇಲಿಯನ್ನು ನೋಡಿಕೊಳ್ಳಲಿದ್ದಾರೆ.

ತ್ರಿಪುರಾ, ಸಿಕ್ಕಿಂ, ಮಣಿಪುರ ಮತ್ತು ನಾಗಾಲ್ಯಾಂಡ್‌ಗೆ ಕಾಂಗ್ರೆಸ್ ಗಿರೀಶ್ ಚಿದಂಕರ್‌ರನ್ನು ಉಸ್ತುವಾರಿಯಾಗಿ, ಮಾಣಿಕ್ ಠಾಗೋರ್‌ರನ್ನು ಆಂಧ್ರಪ್ರದೇಶ ಮತ್ತು ಅಂಡಮಾನ್ ಮತ್ತು ನಿಕೋಬಾರ್ ಉಸ್ತುವಾರಿಯಾಗಿ ನೇಮಿಸಲಾಗಿದೆ.



ಕರ್ನಾಟಕ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಆರ್.ರಘು ಕೌಟಿಲ್ಯ ಅವರನ್ನು ಬಿಜೆಪಿ ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ರೋಹಿತ್, ಹಿಂದುಳಿದ ವರ್ಗಗಳ ಮೋರ್ಚಾ ಸಾಮಾಜಿಕ ಜಾಲತಾಣ ಸಂಚಾಲಕ ಜೀವನ್, ಕ್ಷೇತ್ರದ ಯುವ ಮೋರ್ಚಾ ಕಾರ್ಯದರ್ಶಿ ಸುಪ್ರೀತ್ ಶೆಟ್ಟಿ, ಕಾರ್ಯಕರ್ತರಾದ ನವೀನ್ ಸುತ್ತೂರು, ನವೀನ್, ಬಲರಾಮ್ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ಸಂಸತ್ ಭವನದೊಳಗೆ ಕಲರ್ ಗ್ಯಾಸ್ ಸ್ಫೋಟಿಸಿದ ಪ್ರಕರಣ
ಸ್ಕೂಟರ್‌ನಲ್ಲಿ ದೆಹಲಿ ಪೊಲೀಸರ ತನಿಖಾ ಸಂಚಾರ!

ಮೈಸೂರು, ಡಿ.23(ಬಿಎಲ್‌ಯು)– ಸಂಸತ್ ಭವನದ ಲೋಕಸಭೆಯ ಕಲಾಪದಲ್ಲಿ ನುಸುಳಿ ಕಲರ್ ಗ್ಯಾಸ್ ಸ್ಫೋಟಿಸಿದ ಪ್ರಕರಣದಲ್ಲಿ ಮನೋರಂಜನ್ ಬಗ್ಗೆ ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸ್ ಅಧಿಕಾರಿಗಳು ಈಗ ಕಾರು, ಜೀಪು ಬಿಟ್ಟು ಸ್ಕೂಟರ್‌ನಲ್ಲಿ ಓಡಾಡುತ್ತಿದ್ದಾರೆ.

ಕಳೆದ ಏಳು ದಿನಗಳಿಂದ ಮೈಸೂರಿನಲ್ಲೇ ವಾಸ್ತವ್ಯ ಹೂಡಿ ಮನೋರಂಜನ್ ಕುಟುಂಬಸ್ಥರು, ಮನೋರಂಜನ್ ಜೊತೆ ಹಣಕಾಸು ವ್ಯವಹಾರ ನಡೆಸಿರುವ ಸೂರಪ್ಪ ಹಾಗೂ ಮತ್ತೊಬ್ಬ ಸ್ನೇಹಿತನನ್ನು ಅಧಿಕಾರಿಗಳು ನಿನ್ನೆ ತನಕ ಸುದೀರ್ಘ ವಿಚಾರಣೆ ನಡೆಸಿದ್ದರು. ಜೀಪು ಹಾಗೂ ಕಾರುಗಳ ಬಿಟ್ಟು ದೆಹಲಿ ಪೊಲೀಸ್ ಅಧಿಕಾರಿಗಳು ಈಗ ಸ್ಕೂಟರ್‌ನಲ್ಲಿ ಓಡಾಡುತ್ತಿದ್ದು, ಕುತೂಹಲಕ್ಕೆಡೆ ಮಾಡಿದೆ. ಮಫ್ತಿಯಲ್ಲಿರುವ ಅಧಿಕಾರಿಗಳು ವಿಜಯನಗರ ಸುತ್ತಮುತ್ತ ಕೆಲವು ಕಡೆ ಓಡಾಡುತ್ತಿದ್ದಾರೆ. ಆದರೆ ಯಾವ ಮಾಹಿತಿ ಕಲೆ ಹಾಕಿದ್ದಾರೆ, ಮತ್ತ್ಯಾರಿಗೆ ತಲಾಷ್ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ತಿಳಿದು ಬಂದಿಲ್ಲ.

ಸಾಗರ್ ಶರ್ಮ ಮೈಸೂರಿಗೆ ಬಂದಿದ್ದ: ದೆಹಲಿ ಪೊಲೀಸರು ವಿಚಾರಣೆ ಸಂದರ್ಭದಲ್ಲಿ ಮತ್ತೊಂದು ಮಹತ್ವದ ಮಾಹಿತಿಯನ್ನು ಕಲೆಹಾಕಿದ್ದಾರೆ. ಸಂಸತ್ ಭವನದ ಒಳಗೆ ಕಲರ್ ಸ್ಮೋಕ್ ಸ್ಫೋಟಿಸಿದ ಮನೋರಂಜನ್ ಜೊತೆಗಿದ್ದ ಸಾಗರ್ ಶರ್ಮ, ಮೈಸೂರಿಗೆ ಬಂದಿದ್ದ ಎಂಬ ವಿಷಯ ತನಿಖೆ ವೇಳೆ ಬಯಲಾಗಿದೆ. ಸಾಗರ್ ಶರ್ಮ ಜೊತೆ ಮನೋರಂಜನ್ ಮೈಸೂರಿನಲ್ಲೇ ಖಾಸಗಿ ಹೋಟೆಲ್‌ನಲ್ಲಿ ರೂಂ ಮಾಡಿಕೊಂಡು, ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದನು ಎಂಬ ವಿಷಯ ಕೂಡ ವಿಚಾರಣೆ ವೇಳೆ ದೆಹಲಿ ಪೊಲೀಸರಿಗೆ ತಿಳಿದುಬಂದಿದೆ. ಒಟ್ಟಾರೆ ಪ್ರಕರಣ ಕುರಿತಂತೆ ದೆಹಲಿ ಪೊಲೀಸರು ಆಳವಾದ ತನಿಖೆ ನಡೆಸುತ್ತಿರುವ ವೇಳೆ ಬಹಳಷ್ಟು ಸ್ಫೋಟಕ ಮಾಹಿತಿಗಳು ಲಭ್ಯವಾಗುತ್ತಿವೆ.



ನಮ್ಮ ಸಂವಿಧಾನಾತ್ಮಕ ಹಕ್ಕನ್ನು ಸರಿಯಾಗಿ ಚಲಾಯಿಸದೇ ಇರುವ ಕಾರಣ ಜೈಲಿನಲ್ಲಿ ಇರಬೇಕಾದವರು ಹೊರಗಿದ್ದಾರೆ

ಸಾಮಾಜಿಕ ಹೋರಾಟಗಾರ ಎಸ್.ಆರ್.ಹಿರೇಮಠ್ ಅಭಿಮತ



ಮೈಸೂರು,ಡಿ.23(ಜಿಎ)–ಸಾರ್ವಜನಿಕ ಜೀವನ ಬಹಳ ಮಹತ್ವದ್ದು, ಯಾವುದೇ ಹೋರಾಟವನ್ನು ಅವಸರದಲ್ಲಿ ಮಾಡಬಾರದು ಎಂದು ಸಾಮಾಜಿಕ ಹೋರಾಟಗಾರ ಎಸ್.ಆರ್.ಹಿರೇಮಠ್ ಅಭಿಪ್ರಾಯಪಟ್ಟರು.

ಮಾನಸಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಅಭಿರುಚಿ ಪ್ರಕಾಶನ ಹಾಗೂ ಅಂಗಳ ಸಾಹಿತ್ಯ ಬಳಗದ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ಧ ರೂಪ ಹಾಸನ ವಿರಚಿತ ಕೃತಿ 'ಮಹಾಸಂಗ್ರಾಮಿ' ಎಸ್.ಆರ್.ಹಿರೇಮಠ ಅವರ ರಚನಾತ್ಮಕ ಪ್ರಯೋಗಗಳ ಬಾಳ್ಕಥನ ಕುರಿತು ಮುಕ್ತ ಸಂವಾದದಲ್ಲಿ ಮಾತನಾಡಿದ ಅವರು, ವಿಚಾರವನ್ನು ಅರಿತು ಹೋರಾಡಬೇಕು. ಆದರೆ, ಪಿಎಚ್.ಡಿ ರೀತಿಯಲ್ಲಿ ಅಧ್ಯಯನ ನಡೆಸುವ ಅವಶ್ಯಕತೆ ಇಲ್ಲ. ಮಾಹಿತಿ ಸಂಗ್ರಹಿಸಿ ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು.

ಯಾವುದೇ ಕಾರಣಕ್ಕೂ ಒಂಟಿಯಾಗಿ ಹೋರಾಟ ಮಾಡಬಾರದು. ಅದರ ಅವಶ್ಯಕತೆ ಏನಿದೆ? ಒಂಟಿಯಾಗಿ ಹೋರಾಟ ನಡೆಸಿ ಪಡೆಯುವಂತಹದ್ದು ಏನಿಲ್ಲ. ಹಾಗಾಗಿ ಸಮಾಜ ಪರಿವರ್ತನೆ ವಿಚಾರದಲ್ಲಿ ಸಾಮೂಹಿಕ ಹೋರಾಟದ ಅವಶ್ಯಕತೆ ಇದೆ ಎಂದ ಅವರು, ಆರ್‌ಟಿಐ ಮಾಹಿತಿಯಿಂದ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಸಾಧ್ಯವಿಲ್ಲ. ಹೋರಾಟದಲ್ಲಿ ಯಾರೊಂದಿಗೂ ರಾಜಿಯಾಗದೆ ಹೋರಾಡಬೇಕು. ಸದುದ್ದೇಶದಿಂದ ನಡೆಸುವ ಹೋರಾಟದಲ್ಲಿ ಸಮಸ್ಯೆಗಳು ಎದುರಾಗುವುದು ಸಹಜ. ಅದನ್ನು ಎದುರಿಸಲು ಒಂದು ತಂಡದ ಅವಶ್ಯಕತೆ ಇದೆ ಎಂದರು.

ಸಂವಿಧಾನ ನಮಗೆ ನೀಡಿರುವ ಹಕ್ಕನ್ನು ಸರಿಯಾಗಿ ಚಲಾಯಿಸಬೇಕು. ಹಣ, ಹೆಂಡಕ್ಕೆ ಮತಗಳನ್ನು ಮಾರಿಕೊಳ್ಳಬಾರದು. ನಮ್ಮ ಹಕ್ಕನ್ನು ಸರಿಯಾಗಿ ಚಲಾಯಿಸದ ಹಿನ್ನೆಲೆಯಲ್ಲಿ ಜೈಲಿನಲ್ಲಿ ಇರಬೇಕಾದವರು ನಾಗರಿಕ ಸಮಾಜದಲ್ಲಿದ್ದಾರೆ. ಸಂವಾದದಲ್ಲಿ ಕೃತಿಯ ಲೇಖಕಿ ರೂಪ ಹಾಸನ, ಸಂಶೋಧನಾ ವಿದ್ಯಾರ್ಥಿ ಪ್ರದೀಪ್ ಮುಮ್ಮಡಿ, ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್, ಸಂಶೋಧನಾ ವಿದ್ಯಾರ್ಥಿಗಳಾದ ಕಲ್ಲಹಳ್ಳಿ ಕುಮಾರ್, ಸಂಜಯ್‌ಕುಮಾರ್, ವರಹಳ್ಳಿ ಆನಂದ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಹನುಮ ಜಯಂತಿ ಅಂಗವಾಗಿ ವಿಶೇಷ ಪೂಜೆ

ಮೈಸೂರು,ಡಿ.23–ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ 182 ವರ್ಷಗಳ ಇತಿಹಾಸವುಳ್ಳ ಶ್ರೀವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಅಂಗವಾಗಿ ಡಿ.24 ಬೆಳಗ್ಗೆ 11:30ಕ್ಕೆ ವಿಶೇಷ ಪೂಜಾ ಮಹೋತ್ಸವ, ಹನುಮಾನ್ ಚಾಲೀಸ ಪಠಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



Institution	Suject
JSS PUBLIC SCHOOL Chamarajanagara.	Classical Dance / Music / Art & Craft
JSS PUBLIC SCHOOL JSS Technical Institutions' Campus Manasagangothri, Mysuru.	Music
JSS PUBLIC SCHOOL KHB Colony, Chikkamandya, Mandya.	Dance